18 January 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

ಭಾವನಾಂತರಂಗ

ಹಣದ ಶ್ರೀಮಂತಿಕೆ ಇರುವವನು ಬರೀ
ಆಳಿಗೊಂದೆ ಯಜಮಾನ!
ಮನದ ಶ್ರೀಮಂತಿಕೆ ಇರುವವನು
ಇಡೀ ಜೀವ ಸಂಕುಲಕ್ಕೆ ಯಜಮಾನ!
-ಸ್ನೇಹಾ ಆನಂದ್

ಒಂದೊಳ್ಳೆ ಮಾತು

ಒಬ್ಬ ಮನುಷ್ಯ
ಯಶಸ್ವಿಯಾಗುವುದಕ್ಕೆ
ಮುಖ್ಯವಾಗಿ ಆತ
ಜೀವನಪೂರ್ತಿ ವಿದ್ಯಾರ್ಥಿ
ಆಗಿರಬೇಕು ಪ್ರತಿದಿನ
ಕುತೂಹಲಕಾರಿಯಾಗಿ ಬೇಕು
ಮತ್ತು ಹೊಸದನ್ನು
ಕಲಿಯುತ್ತಿರಬೇಕು.
ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916

ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 77 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಅದ್ದೂರಿ ಶಿವರಾತ್ರೀಶ್ವರ ರಥೋತ್ಸವ

ಸುತ್ತೂರಿನಲ್ಲಿ ಮೇಳೈಸಿದ ಧಾರ್ಮಿಕ-ಸಾಂಸ್ಕೃತಿಕ ವೈಭವ



ಮೈಸೂರು: ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ಶನಿವಾರ ಶ್ರೀ ಶಿವರಾತ್ರೀಶ್ವರ ಶಿವ ಯೋಗಿಗಳ ರಥೋತ್ಸವ ಅದ್ದೂರಿಯಾಗಿ ನಡೆಯಿತು. ರಥೋತ್ಸವದಲ್ಲಿ ಲಕ್ಷಾಂತರ ಭಕ್ತರು ಭಾಗ ವಹಿಸಿದ್ದರು. ಗ್ರಾಮದಲ್ಲಿ ಜನಸಂದಣಿ ಕಿಕ್ಕಿರಿದು ತುಂಬಿತ್ತು.

ಸುತ್ತೂರು ವೀರಸಿಂಹಾಸನ ಮಠದ ಕರ್ತೃ ಗದ್ದುಗೆ ಆವರಣದಲ್ಲಿ ಶನಿವಾರ ಬೆಳಿಗ್ಗೆ 11ಕ್ಕೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಭಕ್ತರು 'ಹರಹರ ಮಹದೇವ', 'ಜೈ ಶಿವರಾತ್ರೀಶ್ವರ' ಎಂದು ಘೋಷಣೆ ಕೂಗುತ್ತ ರಥವನ್ನು ಎಳೆದರು. ಕೆಲವರು ದೂರದಿಂದಲೇ ರಥಕ್ಕೆ ಹಣ್ಣು-ಜವನ ಎಸೆದು ಭಕ್ತಿಯನ್ನು ಸಮರ್ಪಿಸಿದರು.

ಭಕ್ತರ ಜಯಘೋಷದ ನಡುವೆ ಸುತ್ತೂರು ಮೂಲ ಮಠದವರೆಗೂ ಸಾಗಿದ ರಥವು ದೊಡ್ಡಮ್ಮತಾಯಿ ದೇವಸ್ಥಾನದ ವೃತ್ತ ಬಳಸಿ ಕತೃ ಗದ್ದುಗೆಗೆ ಮರಳಿತು. ರಸ್ತೆಯ ಎರಡೂ ಬದಿಗಳಲ್ಲಿ ಕೈಜೋಡಿಸಿ ನಿಂತ ಭಕ್ತರು ಶಿವರಾತ್ರೀಶ್ವರರಿಗೆ ಮನದಲ್ಲೇ ನಮಿಸಿ ತಮ್ಮ ಹರಕೆ ಸಲ್ಲಿಸಿದರು.

ಸುತ್ತೂರಿನ ರಾಜಬೀದಿಯಲ್ಲಿ ರಥ ಸಾಗುವಾಗ ತಮಟೆ, ನಗಾರಿ ವಾದ್ಯಗಳ ಸದ್ದು ಮುಗಿಲುಮುಟ್ಟಿತು. 40ಕ್ಕೂ ಹೆಚ್ಚು ಕಲಾ ತಂಡಗಳು ವೈವಿಧ್ಯಮಯ ಸಾಂಸ್ಕೃತಿಕ ಪ್ರದರ್ಶನದ ಮೂಲಕ ಗಮನ ಸೆಳೆದವು.

ಮೆರವಣಿಗೆಯಲ್ಲಿ ಜಾನಪದ ಕಲಾತಂಡ, ನಾದಸ್ವರ, ವೀರಗಾಸೆ, ಡೊಳ್ಳು ಕುಣಿತ, ಜಾಂಜ್ ಮೇಳ,ಪೂಜಾ ಕುಣಿತ, ಗಾರುಡಿ ಪುಟ 2ಕ್ಕೆ

ಮಹಿಳಾ ಅಧಿಕಾರಿಗೆ ಧಮ್ಕಿ

ಸಿಎಂ ತವರು ಕ್ಷೇತ್ರದಲ್ಲಿ ಕೊಲೆ ಬೆದರಿಕೆ, ನಿಂದನೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಕ್ಷೇತ್ರದಲ್ಲಿಯೂ ಮಹಿಳಾ ಅಧಿಕಾರಿಗೆ ಧಮ್ಕಿ ಹಾಕಿ, ನಿನ್ನ ಹೆಣ ಬೀಳುತ್ತದೆ ಎಂದು ಕೊಲೆ ಬೆದರಿಕೆ ಹಾಕಿರುವ ಘಟನೆ ನಡೆದಿದೆ.

ಮೈಸೂರು ತಾಲ್ಲೂಕು ಗುಡಮಾದನಹಳ್ಳಿ ಗ್ರಾಮದಲ್ಲಿ ಸರ್ಕಾರದ ಸ್ವಾಧೀನಕ್ಕೆ ಪಡೆಯಬೇಕಾದ ಜಮೀನು ಪರಿಶೀಲನೆ ಮಾಡಲು ತೆರಳಿದ ಗ್ರಾಮ ಆಡಳಿತ ಮಹಿಳಾ ಅಧಿಕಾರಿ ಹಾಗೂ ಗ್ರಾಮ ಸಹಾಯಕನಿಗೆ ಕೊಲೆ ಬೆದರಿಕೆ ಹಾಕಿ ಅವಾಚ್ಯ ಶಬ್ದಗಳಿಂದ ನಿಂದಿಸಲಾಗಿದೆ. ಬಂಡೀಪಾಳ್ಯ ವೃತ್ತದ ಗ್ರಾಮ ಆಡಳಿತಾಧಿಕಾರಿ ಜಿ.ಭವ್ಯ, ಗ್ರಾಮ ಸಹಾಯಕ ನವೀನ್ ಕುಮಾರ್ ಅವರನ್ನು ನಿಂದಿಸಲಾಗಿದೆ.

ಮೈಸೂರು ತಾಲ್ಲೂಕು ಗುಡಮಾದನಹಳ್ಳಿ ಗ್ರಾಮದ ಜಿ.ಎಂ.ಪುಟ್ಟಸ್ವಾಮಿ ಎಂಬಾತ ಬೆದರಿಕೆ ಹಾಕಿದ್ದಾನೆ. ಧಮ್ಕಿ ಹಾಕಿ ಕೊಲೆ ಬೆದರಿಕೆ ಹಾಕಿದ ದೃಶ್ಯಗಳು ಮೊಬೈಲ್‌ನಲ್ಲಿ ಸೆರೆಯಾಗಿವೆ. ಈ ವೇಳೆ ಪುಟ್ಟಸ್ವಾಮಿ ಬಲವಂತವಾಗಿ ಮೊಬೈಲ್ ಕಿತ್ತುಕೊಂಡು ವಿಡಿಯೋ ಡಿಲೀಟ್ ಮಾಡಿದ್ದಾನೆ.

ಗುಡಮಾದನಹಳ್ಳಿಯಲ್ಲಿ ನಿಮ್ಹಾನ್ಸ್ ಮಾದರಿ ಆಸ್ಪತ್ರೆ ನಿರ್ಮಾಣ ಮಾಡಲು ಒಟ್ಟು 20 ಎಕರೆ ಸರ್ಕಾರಿ ಜಾಗ ಮೀಸಲಿಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕನಸಿನ ಯೋಜನೆ ಇದಾಗಿದೆ. ತಮ್ಮ ಸ್ವಕ್ಷೇತ್ರದಲ್ಲಿ ಆಸ್ಪತ್ರೆ ನಿರ್ಮಾಣಕ್ಕೆ ಸಿದ್ದರಾಮಯ್ಯ ಆಸಕ್ತಿ ತೋರಿಸಿದ್ದರು. ಈ ಹಿನ್ನೆಲೆ ಜಾಗ ಗುರುತಿಸಿ ಸ್ವಾಧೀನ ಪ್ರಕ್ರಿಯೆಗೆ ಆದೇಶಿಸಿ ಜಮೀನು ಪರಿಶೀಲನೆಗೆ ಮಹಿಳಾ ಅಧಿಕಾರಿ ಜಿ.ಭವ್ಯ ಹಾಗೂ ನವೀನ್ ಕುಮಾರ್ ತೆರಳಿದ್ದರು.

ಈ ಜಮೀನಿನಲ್ಲಿ ಅನಧಿಕೃತವಾಗಿ ಅಡಿಕೆ ತೋಟ ನಿರ್ಮಿಸಿಕೊಂಡಿದ್ದ ಪುಟ್ಟಸ್ವಾಮಿ, ಯಾರನ್ನು ಕೇಳಿ ನಿಮ್ಹಾನ್ಸ್ ಆಸ್ಪತ್ರೆಗೆ ಜಮೀನು ಮಂಜೂರು ಮಾಡಿದ್ದೀರಿ? ಮೊದಲು ತಹಸೀಲ್ದಾರ್ ತಲೆ ತೆಗೆಯಬೇಕು, ನಿನ್ನನ್ನ ಇಲ್ಲಿಯೇ ಕೊಂದು ಹಾಕುತ್ತೇನೆ ಎಂದು ಬೆದರಿಕೆ ಹಾಕಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಈ ಬಗ್ಗೆ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ಮಾತ್ರ ದೂರು ದಾಖಲಾಗಿದೆ.

ಕ್ರಿಮಿನಲ್ ಪ್ರಕರಣಗಳಲ್ಲಿ ಪೊಲೀಸ್ ಭಾಗಿ

ನಿಜಕ್ಕೂ ನಾಚಿಕೆಗೇಡಿನ ವಿಚಾರ | ಸಿಎಂ ಸಿದ್ದರಾಮಯ್ಯ ಅಸಮಾಧಾನ

ಬೆಂಗಳೂರು: ಮಹಾರಾಷ್ಟ್ರ ಪೊಲೀಸರು ಮೈಸೂರಿಗೆ ಆಗಮಿಸಿ ಡ್ರಗ್ಸ್ ಫ್ಯಾಕ್ಟರಿ ಇರುವುದನ್ನು ಪತ್ತೆ ಹಚ್ಚುತ್ತಾರೆ. ಆದರೆ, ನೀವೇನು ಮಾಡ್ತಿದ್ದೀರಿ ಎಂದು ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದರು.

ಬೆಂಗಳೂರಿನಲ್ಲಿ ಶನಿವಾರ ಪೊಲೀಸ್ ಮಹಾನಿರ್ದೇಶಕರ ಕಚೇರಿಯಲ್ಲಿ ಆಯೋಜಿಸಿದ್ದ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮ್ಮೇಳನದಲ್ಲಿ ಮಾತನಾಡಿದ ಅವರು, ಕಾನೂನು ಎಲ್ಲರಿಗೂ ಒಂದೇ. ಯಾರು ತಪ್ಪು ಮಾಡಿದರೂ ಅದು ತಪ್ಪೇ. ಬಲಾಢ್ಯರು, ಸಮಾಜ ಘಾತುಕ ಶಕ್ತಿಗಳಿಗೆ ಯಾವುದೇ ಕಾರಣಕ್ಕೂ ಮಣೆ ಹಾಕಬಾರದು ಎಂದು ಹೇಳಿದರು.

ಆದರೆ, ರಾಜ್ಯದಲ್ಲಿ ಇದುವರೆಗೆ 88 ಕ್ರಿಮಿನಲ್ ಪ್ರಕರಣಗಳಲ್ಲಿ ಪೊಲೀಸರೇ ಭಾಗಿಯಾಗಿರುವುದು ನಾಚಿಗೇಡಿನ ವಿಷಯ. ಪೊಲೀಸರು ಜಾಗರೂಕರಾಗಿದ್ದರೆ ಅನೇಕ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಸಾಧ್ಯವಿದೆ ಎಂದು ಅವರು ಎಚ್ಚರಿಕೆ ನೀಡಿದರು.

ರಾಜ್ಯವನ್ನು ಡ್ರಗ್ಸ್ ಮುಕ್ತ ಮಾಡಲು ಪೊಲೀಸರು ಮುಂದಾಗಬೇಕು. ಡ್ರಗ್ಸ್ ವ್ಯಸನಿಗಳನ್ನು ವಿಚಾರಣೆ ಮಾಡಿದರೆ ಮೂಲ ಮಾಹಿತಿ ಸಿಗುತ್ತದೆ. ಪೆಡ್ಲರ್ ವಿಚಾರಣೆ ಮಾಡಿದರೆ ಎಲ್ಲಿಂದ ಡ್ರಗ್ಸ್ ಬಂತೆಂದು ಗೊತ್ತಾಗುತ್ತದೆ ಎಂದು ಸಿಎಂ ಸೂಚಿಸಿದರು.

ಅಪರಾಧದಲ್ಲಿ ಭಾಗಿಯಾದ ವಿದೇಶಿಯರನ್ನು ಅವರ ದೇಶಕ್ಕೆ ವಾಪಸ್ ಕಳಿಸುವ ಕೆಲಸ ಮಾಡುತ್ತೇವೆ. ಪಿಐ, ಪಿಎಸ್ ಐ ಸೇರಿ ಎಲ್ಲರ ಮೇಲೂ ಪುಟ 2ಕ್ಕೆ

ಸೈಬರ್ ಅಪರಾಧ ಹೆಚ್ಚಳ

ರಾಜ್ಯದಲ್ಲಿ ಸೈಬರ್ ಅಪರಾಧಗಳು ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿವೆ. ಇದನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಆಧುನಿಕ ತಂತ್ರಜ್ಞಾನದ ಸಮರ್ಪಕ ಬಳಕೆ ಮಾಡಬೇಕಿದೆ. ಕಾನೂನು ಸುವ್ಯವಸ್ಥೆ ಮತ್ತು ರಾಜ್ಯದ ಅಭಿವೃದ್ಧಿ ಪರಸ್ಪರ ಪೂರಕವಾಗಿವೆ. ಕಾನೂನು ಸುವ್ಯವಸ್ಥೆ ಚೆನ್ನಾಗಿದ್ದರೆ ಮಾತ್ರ ಬಂಡವಾಳ ಹೂಡಿಕೆ ಹೆಚ್ಚಾಗಿ ಅಭಿವೃದ್ಧಿ ಸಾಧಿಸಲು ಸಾಧ್ಯವಿದೆ ಎಂದು ಸಿದ್ದರಾಮಯ್ಯ ತಿಳಿಸಿದರು. ತಹಶೀಲ್ದಾರ್ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ಸರಿಯಾಗಿ ಕರ್ತವ್ಯ ನಿರ್ವಹಿಸಿದರೆ ಆ ತಾಲೂಕಿನಲ್ಲಿ ಜನರು ನೆಮ್ಮದಿಯಿಂದ ಇರಲು ಸಾಧ್ಯ. ಇದೇ ರೀತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿ, ಎಸ್ಪಿ ಮತ್ತು ಸಿಇಒ ಸರಿಯಾಗಿ ಕರ್ತವ್ಯ ನಿರ್ವಹಿಸಿದರೆ ಜಿಲ್ಲೆಯ ಜನರು ಪುಟ 2ಕ್ಕೆ

ಭೀಮಣ್ಣ ಖಂಡ್ರೆ ಅಂತ್ಯಕ್ರಿಯೆ

ಬೀದರ್: ಮಾಜಿ ಸಚಿವ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ಮಾಜಿ ಅಧ್ಯಕ್ಷ ಭೀಮಣ್ಣ ಖಂಡ್ರೆ (102) ಅವರ ಅಂತ್ಯಕ್ರಿಯೆ ಭಾಲ್ಕಿ ಪಟ್ಟಣದ ಹೊರವಲಯದ ತೋಟದ ಮನೆಯ ಶಾಂತಿಧಾಮದಲ್ಲಿ ವೀರಶೈವ ಲಿಂಗಾಯತ ಸಂಪ್ರದಾಯದಂತೆ ಶನಿವಾರ ನೆರವೇರಿತು. ಶತಾಯುಷಿ ಭೀಮಣ್ಣ ಖಂಡ್ರೆ ಅವರು ಶುಕ್ರವಾರ ರಾತ್ರಿ ನಿಧನರಾದರು.

ಭೀಮಣ್ಣ ಖಂಡ್ರೆ ಅವರ ಪತ್ನಿ ದಿವಂಗತ ಲಕ್ಷ್ಮೀಬಾಯಿ ಅವರ ಸಮಾಧಿಯ ಬಳಿಯೇ ಅಂತ್ಯಕ್ರಿಯೆ ನೆರವೇರಿಸಲಾಯಿತು. ವಿಭೂತಿ, ಪತ್ರಿ, ಹೂ, ರುದ್ರಾಕ್ಷಿಯೊಂದಿಗೆ ವೀರಶೈವ ಲಿಂಗಾಯತ ಸಂಪ್ರದಾಯದ ಪ್ರಕಾರ ಸಮಾಧಿ ಮಾಡಲಾಯಿತು. ಇದಕ್ಕೂ ಮುನ್ನ ವಚನ ಪಠಣ ಮಾಡಿ, ಮಂತ್ರಘೋಷಗಳೊಂದಿಗೆ ಮೂರು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ಜರುಗಿತು. ಭಾಲ್ಕಿ ಪಟ್ಟಣದಲ್ಲಿ ಅಲಂಕರಿಸಿದ ವಾಹನದಲ್ಲಿ ಪಾರ್ಥಿವ ಶರೀರದ ಮೆರವಣಿಗೆ ಮಾಡಲಾಯಿತು. ಮಾರ್ಗ ದುದ್ದಕ್ಕೂ ಜನರು ಹೂಮಳೆಗರೆದು ಗೌರವ ಸಲ್ಲಿಸಿದರು. ಸಾವಿರಾರು ಮಂದಿ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಾಧಿ ಸ್ಥಳದಲ್ಲಿ ಐದು ವಿಭೂತಿ ಇರಿಸಿ ಅಂತ್ಯಕ್ರಿಯೆಯ ವಿಧಿ ವಿಧಾನಗಳಿಗೆ ಚಾಲನೆ ಕೊಟ್ಟರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಸಚಿವರಾದ ಈಶ್ವರ ಬಿ. ಖಂಡ್ರೆ, ಕೆ.ಜೆ. ಜಾರ್ಜ್, ಎಚ್.ಕೆ. ಪಾಟೀಲ್, ಲಕ್ಷ್ಮೀ ಹೆಬ್ಬಾಳಕರ್, ಶರಣಪ್ರಕಾಶ ಪಾಟೀಲ್, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿವಿಧ ಮಠಾಧೀಶರು ಭಾಗವಹಿಸಿದ್ದರು.

ಡಿಕೆಶಿ ವಿಚಾರ ಗೊತ್ತಿಲ್ಲ: ಪರಂ



ಬೆಂಗಳೂರು: ಎಐಸಿಸಿ ಅಧ್ಯಕ್ಷರ ಸೂಚನೆ ಮೇರೆಗೆ ಡಿ.ಕೆ ಶಿವಕುಮಾರ್ ದೆಹಲಿಗೆ ಹೋಗಿದ್ದಾರೆ. ಅಸ್ಸಾಂ ಚುನಾವಣೆಯ ಜವಾಬ್ದಾರಿಯನ್ನು ಅವರಿಗೆ ನೀಡಲಾಗಿದೆ ಮತ್ತು ಅದಕ್ಕೆ ಸಂಬಂಧಿಸಿದ ಚರ್ಚೆಗಾಗಿ ಅಲ್ಲಿಗೆ ಹೋಗಿದ್ದಾರೆ. ಇದನ್ನು ಹೊರತುಪಡಿಸಿ ಡಿ.ಕೆ.ಶಿವಕುಮಾರ್ ಅವರ ಬೇರೆ ಯಾವುದೇ ವಿಷಯ ನನಗೆ ತಿಳಿದಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.

ನಗರದಲ್ಲಿ ಸುದ್ದಿಗಾರರ ಜೊತೆ ಮಾತ ನಾಡಿದ ಅವರು, ಶಿಡ್ಲಘಟ್ಟ ಪ್ರಕರಣ ದಲ್ಲಿ ರಾಜೀವ್ ಗೌಡ ಬಂಧನ ವಿಳಂಬ ಕುರಿತು ಪ್ರತಿಕ್ರಿಯಿಸಿದ ಪರಮೇಶ್ವರ್, ರಾಜೀವಗೌಡ ಪತ್ತೆಗೆ ತಂಡ ರಚಿಸ ಲಾಗಿದೆ. ಪ್ರ ಪುಟ 2ಕ್ಕೆ

ಡಿಸಿಎಂ ಪ್ರವಾಸ ರದ್ದು

ಬೆಂಗಳೂರು: ಸ್ವಿಜ್ಜರ್‌ಲ್ಯಾಂಡ್‌ನ ದಾವೋಸ್‌ನಲ್ಲಿ ಜನವರಿ 18ರಂದು ನಿಗದಿಯಾಗಿದ್ದ ವಿಶ್ವ ಆರ್ಥಿಕ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಿದ್ದ ಡಿಸಿಎಂ ಡಿ.ಕೆ.ಶಿವಕುಮಾರ್ ಪ್ರವಾಸವನ್ನು ರದ್ದುಗೊಳಿಸಿದ್ದಾರೆ.

ಬೆಂಗಳೂರು ಹಾಗೂ ನವದೆಹಲಿಯಲ್ಲಿ ಅಧಿಕೃತ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಡಿಸಿಎಂ ಈ ಪ್ರವಾಸ ರದ್ದುಗೊಳಿಸಲಾಗಿದೆ. ಡಿ.ಕೆ.ಶಿವಕುಮಾರ್ ಅವರು ಎಐಸಿಸಿ ನಾಯಕರ ಜೊತೆಗಿನ ಸರಣಿ ಸಭೆ ಹಾಗೂ ಮನರೇಗಾ ಮರು ಜಾರಿಗೆ ಆಗ್ರಹಿಸಿ ಕೇಂದ್ರ ಸರ್ಕಾರದ ವಿರುದ್ಧದ ಅಭಿ ಯಾನದ ಜೊತೆಗೆ ಜ.22ರಿಂದ ಆರಂಭವಾಗುವ ವಿಶೇಷ ಅಧಿವೇಶನದಲ್ಲಿ ಭಾಗವಹಿಸಬೇಕಾಗಿರುವುದರಿಂದ ರದ್ದು ಮಾಡಲಾಗಿದೆ.

ಇಂದು ಮೈಸೂರಿಗೆ ಸಿದ್ದರಾಮಯ್ಯ ಭೇಟಿ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜ.18ರಂದು ಜಿಲ್ಲಾಪ್ರವಾಸ ಕೈಗೊಂಡಿದ್ದಾರೆ. ಭಾನುವಾರ ಬೆಳಿಗ್ಗೆ 10.25ಕ್ಕೆ ವಿಶೇಷ ವಿಮಾನದಲ್ಲಿ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವರು. ನಂತರ ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆಯುತ್ತಿರುವ ಜಾತ್ರಾ ಮಹೋತ್ಸವದಲ್ಲಿ ಕೃಷಿ ವಿಚಾರ ಸಂಕಿರಣದಲ್ಲಿ ಭಾಗವಹಿಸುವರು. ತಿ.ನರಸೀಪುರ ತಾಲ್ಲೂಕು ಕುಪ್ಯ ಗ್ರಾಮದಲ್ಲಿ ಪುಟ 2ಕ್ಕೆ

ಬಂಡೂರು ಕುರಿ 1.35 ಲಕ್ಷಕ್ಕೆ ಮಾರಾಟ

ಮಂಡ್ಯ: ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಕಿರುಗಾವಲು ಗ್ರಾಮದಲ್ಲಿ 11 ತಿಂಗಳ ಬಂಡೂರು ಕುರಿಯನ್ನು 1.35 ಲಕ್ಷ ರೂ.ಗಳ ದಾಖಲೆ ಮೊತ್ತಕ್ಕೆ ಮಾರಾಟ ಮಾಡಲಾಗಿದೆ. ಗ್ರಾಮದ ರೈತ ಉಲ್ಲಾಸ್‌ಗೌಡ ಅವರ ಬಂಡೂರು ಟಗರನ್ನು ಬೆಂಗಳೂರಿನ ಹರೀಶ್ ಎಂಬ ವರು ದಾಖಲೆ ಮೊತ್ತಕ್ಕೆ ಖರೀದಿ ಮಾಡಿದ್ದಾರೆ. ಕುರಿ ಸಾಕಾಣಿಕೆ ಮಾಡುತ್ತಿರುವ ಹರೀಶ್ ಬಂಡೂರು ತಳಿಯನ್ನು ಪುಟ 2ಕ್ಕೆ

ಭೀಕರ ಅಪಘಾತ: ಮೂವರ ವಿದ್ಯಾರ್ಥಿಗಳು ಛಿದ್ರ ಛಿದ್ರ

ಬೆಂಗಳೂರು: ಬೈಕ್ ಮತ್ತು ಟಿಪ್ಪರ್ ನಡುವೆ ನಡೆದ ಭೀಕರ ಅಪಘಾತದಲ್ಲಿ ಮೂವರು ವಿದ್ಯಾರ್ಥಿಗಳು ಸಾವನ್ನಪ್ಪಿರುವ ಘಟನೆ ದೇವನಹಳ್ಳಿ ಬಳಿ ನಡೆದಿದೆ. ವಿದ್ಯಾರ್ಥಿಗಳು ಹುಣಸಮಾರೇನಹಳ್ಳಿ ಖಾಸಗಿ ಕಾಲೇಜಿನ ವಿದ್ಯಾರ್ಥಿಗಳು ಎಂದು ತಿಳಿದು ಬಂದಿದೆ.

ಮೃತರಲ್ಲಿ ಒಬ್ಬ ಚಿಕ್ಕಜಾಲ ಮೂಲದ ತೌಸೀಫ್. ಮತ್ತಿಬ್ಬರ ಗುರುತು ಪತ್ತೆಯಾಗಿಲ್ಲ. ಮೂವರು ವಿದ್ಯಾರ್ಥಿ ಗಳು ದೇವನಹಳ್ಳಿಯಿಂದ ಬೂದಿಗೆರೆ ಕಡೆಗೆ ಹೋಗು ತ್ತಿದ್ದರು. ಈ ವೇಳೆ ಬೈಕ್ ಗೆ ಎದುರಿಗೆ ಬರುತ್ತಿದ್ದ ಟಿಪ್ಪ ರ್‌ಗೆ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಮೂವರ ಮೃತ ದೇಹ ಛಿದ್ರಗೊಂಡಿವೆ. ಅಪಘಾತದ ಬಳಿಕ ಚಾಲಕ ಟಿಪ್ಪರ್ ಸಮೇತ ಪರಾರಿಯಾಗಿದ್ದಾನೆ. ದೇವನಹಳ್ಳಿ ಸಂಚಾರಿ ಪೊಲೀಸರು ಭೇಟಿ ನೀಡಿ ಪರಿಶಿಲನೆ ನಡೆಸಿದ್ದಾರೆ.

ರಾಹುಲ್ ಭೇಟಿಗೆ ಡಿಕೆಶಿ ಕಸರತ್ತು

ಮುಖ್ಯಮಂತ್ರಿ ಕುರ್ಚಿಗಾಗಿ ಬೇಡಿಕೆ | ಖರ್ಗೆ ಜೊತೆ ಮಾತುಕತೆ

ಬೆಂಗಳೂರು: ದೆಹಲಿ ಪ್ರವಾಸ ಕೈಗೊಂಡಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಪಕ್ಷದ ವರಿಷ್ಠರಾದ ರಾಹುಲ್ ಗಾಂಧಿ ಹಾಗೂ ಸೋನಿಯಾ ಗಾಂಧಿ ಅವರನ್ನು ಭೇಟಿಯಾಗಲು ಕಸರತ್ತು ಆರಂಭಿಸಿದ್ದಾರೆ.

ಕರ್ನಾಟಕದ ನಾಯಕತ್ವ ಬದಲಾವಣೆ ವಿಚಾರವಾಗಿ ಚರ್ಚಿಸಲು ಮುಂದಾಗಿರುವ ಡಿಕೆಶಿ ಅವರು, ನಿನ್ನೆ ಶುಕ್ರವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮನೆಗೆ ಭೇಟಿ ನೀಡಿ ಚರ್ಚೆ ನಡೆಸಿದ್ದಾರೆ. ಮುಖ್ಯಮಂತ್ರಿ ಕುರ್ಚಿ ವಶಕ್ಕೆ ಮುಂದಾಗಿರುವ ಅವರು ಕೊಟ್ಟ ಮಾತನ್ನು ನಡೆಸಿಕೊಂಡುವಂತೆ ಸೋನಿಯಾ ಗಾಂಧಿ ಅವರಿಗೆ ಮನವಿ ಮಾಡಲು ಮುಂದಾಗಿದ್ದಾರೆ. ಆದರೆ ಇನ್ನೂ ಅವರಿಗೆ ಅವಕಾಶ ಸಿಕ್ಕಿಲ್ಲ ಎನ್ನಲಾಗಿದೆ. ಪುಟ 2ಕ್ಕೆ

ಡಿಕೆಶಿ ದೆಹಲಿ ಯಾತ್ರೆ ವಿಶೇಷವಿಲ್ಲ: ಎಚ್‌ಸಿಎಂ

ಮೈಸೂರು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರೂ ಆಗಿರುವುದರಿಂದ ಅಸ್ಸಾಂ ಚುನಾವಣಾ ವೀಕ್ಷಕರಾಗಿ ನೇಮಕ ಮಾಡಲಾಗಿದೆ. ಈ ಬಗ್ಗೆ ಚರ್ಚಿಸಲು ನವದೆಹಲಿಗೆ ಹೋಗಿದ್ದಾರೆ. ಇದಕ್ಕೆ ವಿಶೇಷ ಪುಟ 2ಕ್ಕೆ

ನಾನು ಮೂಗು ತೂರಿಸಲ್ಲ!

ರಾಮನಗರ: ಮುಖ್ಯಮಂತ್ರಿ ಬದಲಾವಣೆ ವಿಚಾರದಲ್ಲಿ ಮೂರನೇ ವ್ಯಕ್ತಿ ಮೂಗು ತೂರಿಸಬೇಡಿ ಅಂತ ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ಹಾಗಾಗಿ ಮಧ್ಯೆ ತಲೆ ಹಾಕಲ್ಲ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದರು.

ರಾಮನಗರದಲ್ಲಿ ಡಿಸಿಎಂ ಡಿಕೆಶಿ ದೆಹಲಿ ಯಾತ್ರೆ ವಿಚಾರ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಡಿಸಿಎಂ ಡಿಕೆಶಿಗೆ ಅಸ್ಸಾಂ ಚುನಾವಣೆ ಉಸ್ತುವಾರಿ ಕೊಟ್ಟಿದ್ದಾರೆ. ಆ ಬಗ್ಗೆ ಚರ್ಚೆ ಮಾಡಲು ದೆಹಲಿಗೆ ಹೋಗಿದ್ದಾರೆ. ಪಕ್ಷ ಅಂದಮೇಲೆ ನೂರಾರು ವಿಚಾರ ಇರುತ್ತದೆ. ಸಿಎಂ ಆಯ್ಕೆ ಪುಟ 2ಕ್ಕೆ

ಚಿನ್ನಸ್ವಾಮಿಯಲ್ಲಿ ಐಪಿಎಲ್ ಪಂದ್ಯಕ್ಕೆ ಗ್ರೀನ್ ಸಿಗ್ನಲ್

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಂತರರಾಷ್ಟ್ರೀಯ ಮತ್ತು ಐಪಿಎಲ್ ಪಂದ್ಯಗಳನ್ನು ನಡೆಸಲು ರಾಜ್ಯ ಗೃಹ ಇಲಾಖೆ ಗ್ರೀನ್ ಸಿಗ್ನಲ್ ಕೊಟ್ಟಿದೆ. ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ಗೆ ರಾಜ್ಯ ಗೃಹ ಇಲಾಖೆ ಅನುಮತಿ ನೀಡಿದೆ.

ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಕ್ರಿಕೆಟ್ ಆಯೋಜನೆ ಮಾಡುವ ಸಂಬಂಧ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಕರ್ನಾಟಕ ಸರ್ಕಾರ ಮತ್ತು ಆರ್‌ಸಿಬಿ ಮ್ಯಾನೆಜ್‌ಮೆಂಟ್ ಜೊತೆ ಹಲವು ಸುತ್ತಿನ ಮಾತುಕತೆ ನಡೆಸಿತ್ತು.ಸರ್ಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳು ಸೂಚಿಸಿದ ನಿರ್ದಿಷ್ಟ ನಿಯಮಗಳು ಮತ್ತು ಷರತ್ತುಗಳನ್ನು ಪಾಲಿಸುವಂತೆ ಸೂಚಿಸಿ ಒಪ್ಪಿಗೆ ನೀಡಿದೆ.

ಜನಸಂದಣಿ ನಿಯಂತ್ರಣಕ್ಕೆ ಕ್ರಮಕೈಗೊಳ್ಳಬೇಕೆಂದು ಅಧಿಕಾರಿಗಳು ಸೂಚಿಸಿದ್ದರು. ಈಗ ಕ್ರಿಕೆಟ್ ಮೈದಾನದ ಸುತ್ತಲು ಅಂದಾಜು 4 ಕೋಟಿ ರೂ. ವೆಚ್ಚದಲ್ಲಿ ಸುಮಾರು 300ರಿಂದ 350 ಎಐ ಕ್ಯಾಮೆರಾ ಅಳವಡಿಸುವ ಪ್ರಸ್ತಾಪವನ್ನು ಕೆಎಸ್‌ಸಿಎಗೆ ಸಲ್ಲಿಸಿತ್ತು. ಇದರ ಬೆನ್ನಲ್ಲೇ ಪಂದ್ಯಗಳನ್ನು ನಡೆಸಲು ಅನುಮತಿ ಸಿಕ್ಕಿದೆ. ಪುಟ 2ಕ್ಕೆ

ಲಕ್ಕುಂಡಿ ಉತ್ಖನನ: ಶಿಲಾಕೃತಿ ಪತ್ತೆ

ಗದಗ: ಲಕ್ಕುಂಡಿ ಶ್ರೀ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಅಂಗಳದಲ್ಲಿ ನಡೆಯುತ್ತಿರುವ ಉತ್ಖನನದಲ್ಲಿ ಪ್ರಾಚೀನ ಕಾಲದ ಒಂದು ಶಿಲಾಕೃತಿ ಪತ್ತೆಯಾಗಿದೆ.

ಉತ್ಖನನದ 2ನೇ ದಿನವಾದ ಶನಿವಾರ ಒಂದೂವರೆ ಅಡಿ ತೆಗೆಯುತ್ತಿದ್ದಂತೆ ಈ ಶಿಲಾಕೃತಿ ಸಿಕ್ಕಿದೆ. ಪುರಾತತ್ವ ಇಲಾಖೆ ತಜ್ಞರು ಶಿಲಾಕೃತಿಯನ್ನು ಪರಿಶೀಲಿಸುತ್ತಿದ್ದಾರೆ. ಶಿಲ್ಪವೇ ಎಷ್ಟು ವರ್ಷ ಹಿಂದಿನದ್ದು ಎನ್ನುವುದು ತಿಳಿಯಲಿದೆ.

ಪುರಾತತ್ವ ಇಲಾಖೆಯ ಶಿಫಾರಸ್ಸಿನ ಮೇರೆಗೆ ಉತ್ಖನನ ಜಾಗವನ್ನ ಸೂಕ್ಷ್ಮ ಪ್ರದೇಶ ಎಂದು ಘೋಷಣೆ ಮಾಡಲಾಗಿದೆ. ಅಷ್ಟೇ ಅಲ್ಲದೇ ಉತ್ಖನನ ಕೆಲಸಕ್ಕೆ ತೊಂದರೆಯಾಗದೇ ಪುಟ 2ಕ್ಕೆ

ಮೊದಲ ಪುಟದಿಂದ

ಅದ್ದೂರಿ ಶಿವರಾತ್ರೀಶ್ವರ ರಥೋತ್ಸವ

ಗೊಂಬೆ, ತಮಟೆ ನಗಾರಿ, ಮ್ಯೂಸಿಕ್ ಡ್ರಮ್ಸ್, ಕೋಲಾಟ, ಮರಗಾಲು, ಕಂಸಾಳೆ, ದಾನಪಟ್ಟ, ವೀರಾಮಕ್ಕಳ, ತಮಟೆ, ಮಹಿಳಾ ಮತ್ತು ಪುರುಷರು ಚೆಂಡೆ, ದಾಳಪಟ, ಕರಡಿ ಮಜಲು, ಸುಗ್ಗಿ ಕುಣಿತ, ಗೊರವರ ಕುಣಿತ, ನಾಸಿಕ್ ಡ್ರಮ್ಸ್, ಹುಲಿವೇಶ, ಜಾನ್ ಪಥಕ್ ಸೇರಿದಂತೆ ಕಲಾ ತಂಡಗಳ ಸಾಂಸ್ಕೃತಿಕ ವೈಭವ ಮೇಳೈಸಿತ್ತು. ರಥೋತ್ಸವಕ್ಕೆ ಬಂದ ಭಕ್ತರು ಜಾತ್ರೆಯ ಖರೀದಿಯಲ್ಲೂ ಪಾಲ್ಗೊಂಡರು. ಹತ್ತಾರು ಮಳಿಗೆಗಳಲ್ಲಿ ವ್ಯಾಪಾರವಹಿವಾಟು ನಡೆಯಿತು. ಜೊತೆಗೆ ಕೃಷಿ ಮೇಳ, ವಸ್ತುಪ್ರದರ್ಶನಗಳು ರಂಜಿಸಿದವು.

ಬಳಿಕ ನಡೆದ ಧಾರ್ಮಿಕ ವೇದಿಕೆ ಕಾರ್ಯಕ್ರಮವನ್ನು ತುಮಕೂರು ಸಿದ್ದಗಂಗಾ ಮಠದ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ, ಸಚಿವ ಕೆ.ಎಚ್. ಮುನಿಯಪ್ಪ, ಮಾಜಿ ಸಚಿವ ಹಾಗೂ ಶಾಸಕ ಜಿ.ಟಿ.ದೇವೇಗೌಡ ಮತ್ತಿತರರು ಉದ್ಘಾಟಿಸಿದರು.

ಡಿಕೆಶಿ ದೆಹಲಿ ಯಾತ್ರೆ ವಿಶೇಷವಿಲ್ಲ

ಅರ್ಥ ಕಲ್ಪಿಸುವುದು ಬೇಡ ಎಂದು ಸಚಿವ ಡಾ.ಎಚ್.ಸಿ.ಮಹದೇವಪ್ಪ ಹೇಳಿದರು. ನಗರದಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ 2028ರವರೆಗೂ ಮುಖ್ಯಮಂತ್ರಿ ಆಗಿರುತ್ತಾರೆ. ಬಿಜೆಪಿಯವರು ಏನೋ ಆಗುತ್ತದೆ ಎಂದು ಸುಮ್ಮನೆ ಕಾಯುತ್ತಿದ್ದಾರೆ. ಅವರು ಯಾವಾಗಲೂ ರಾಜ್ಯದಲ್ಲಿ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿಲ್ಲ. ಹೀಗಾಗಿ ಏನಾದರೂ ಸಂದರ್ಭ ಕಾಯುತ್ತಿರುತ್ತಾರೆ. ನಂತರ ಕೈಗೆಟುಕದ ದ್ರಾಕ್ಷಿ ಹುಳಿ ಎಂದುಕೊಂಡು ಹೋಗುತ್ತಾರೆ. ಈಗ ಆಗುತ್ತಿರುವುದೂ ಅಷ್ಟೇ ಎಂದು ಟೀಕಿಸಿದರು.

ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್‌ನವರು ಅನಧಿಕೃತವಾಗಿ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಈಗ ಅಧಿಕೃತವಾಗಿ ಜೊತೆಗಿದ್ದಾರೆ. ಇದರಿಂದ ನಗರ ಸ್ಥಳೀಯ ಸಂಸ್ಥೆ ಸೇರಿದಂತೆ ಯಾವುದೇ ಚುನಾವಣೆಯಲ್ಲೂ ಕಾಂಗ್ರೆಸ್ ಮೇಲೆ ವ್ಯತಿರಿಕ್ತ ಪರಿಣಾಮವೇನೂ ಆಗುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ರಾಹುಲ್ ಭೇಟಿಗೆ ಡಿಕೆಶಿ ಕಸರತ್ತು

ಅಸ್ಸಾಂ ವಿಧಾನಸಭೆ ಚುನಾವಣಾ ಸಿದ್ದತೆ ಹಿನ್ನೆಲೆಯಲ್ಲಿ ಎಐಸಿಸಿ ಕಚೇರಿಯಲ್ಲಿ ಶುಕ್ರವಾರ ಆಯೋಜಿಸಿದ್ದ ಸಭೆಯಲ್ಲಿ ವೀಕ್ಷಕರಾಗಿ ಡಿ.ಕೆ ಶಿವಕುಮಾರ್ ಪಾಲ್ಗೊಂಡಿದ್ದರು. ಮಾಜಿ ಸಚಿವ ಭೀಮಣ್ಣ ಖಂಡ್ರೆ ವಿಧಿವಶರಾದ ಹಿನ್ನೆಲೆಯಲ್ಲಿ ಡಿಕೆಶಿ ಅವರು ಹೈದರಾಬಾದ್ ಮೂಲಕ ಬೀದರ್ ಗೆ ಆಗಮಿಸಿದ್ದಾರೆ. ನಂತರ ಅಲ್ಲಿಂದಲೇ ಮತ್ತೆ ದೆಹಲಿಗೆ ತೆರಳಲಿದ್ದಾರೆ. ನಿನ್ನೆ ಸಭೆಯಲ್ಲಿ ರಾಹುಲ್ ಮುಖಾಮುಖಿಯಾದರೂ ಚರ್ಚೆಗೆ ಪ್ರಯತ್ನ ಸಾಧ್ಯವಾಗಿಲ್ಲ. ಬದಲಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಇದೀಗ ಖರ್ಗೆ ಮೂಲಕ ರಾಹುಲ್ ಗಾಂಧಿ ಭೇಟಿಗೆ ಡಿಕೆ ಶಿವಕುಮಾರ್ ನಿರಂತರ ಪ್ರಯತ್ನ ನಡೆಸುತ್ತಿದ್ದಾರೆ.

ಕ್ರಿಮಿನಲ್ ಪ್ರಕರಣಗಳಲ್ಲಿ ಪೊಲೀಸ್ ಭಾಗಿ

ಹಿರಿಯ ಅಧಿಕಾರಿಗಳು ನಿಗಾ ವಹಿಸಬೇಕು. ಈ ರೀತಿ ಇನ್ನು ಮುಂದೆ ಆಗಬಾರದು ಎಂದು ಪೊಲೀಸರಿಗೆ ಸಿದ್ದರಾಮಯ್ಯ ಸೂಚಿಸಿದರು.

ಸಮಾಜದಲ್ಲಿ ಶಾಂತಿ ನೆಮ್ಮದಿ ಕಾಪಾಡುವ ಗುರುತರವಾದ ಕಾರ್ಯ ರಾಜ್ಯದ ಪೊಲೀಸ್ ಇಲಾಖೆ ಮೇಲಿದೆ. ಪ್ರತಿಯೊಬ್ಬರಿಗೂ ರಕ್ಷಣೆ ಒದಗಿಸುವುದು, ನ್ಯಾಯ ಒದಗಿಸುವುದು ನಮ್ಮ ಸರ್ಕಾರದ ಬದ್ಧತೆಯಾಗಿದೆ. ಇದಕ್ಕೆ ಪೊಲೀಸ್ ಇಲಾಖೆ ಪೂರಕವಾಗಿ ಕೆಲಸ ಮಾಡಬೇಕು. ಸಂವಿಧಾನ ಪ್ರತಿಯೊಬ್ಬರಿಗೂ ಸಮಾನ ಅವಕಾಶ, ರಕ್ಷಣೆಯನ್ನು ಒದಗಿಸಿದೆ. ದುರ್ಬಲರು, ಪರಿಶಿಷ್ಟ ಜಾತಿ, ವರ್ಗದ ಜನರು, ಧಾರ್ಮಿಕ ಅಲ್ಪಸಂಖ್ಯಾತರ ರಕ್ಷಣೆ ಎಲ್ಲರ ಹೊಣೆ. ದುರ್ಬಲರು ಯಾವುದೇ ಕಾರಣಕ್ಕೂ ಅನ್ಯಾಯಕ್ಕೆ ಒಳಗಾಗಬಾರದು. ಪ್ರತಿಯೊಬ್ಬರಿಗೂ ಸಮಾನ ನ್ಯಾಯ ಒದಗಿಸುವುದು ಪೊಲೀಸರ ಕರ್ತವ್ಯ ಎಂದು ಸಿದ್ದರಾಮಯ್ಯ ತಿಳಿಸಿದರು.

ಪುತ್ಥಳಿ ನಿರ್ಮಾಣ ಜತೆಗೆ ಆದರ್ಶ ಅಳವಡಿಸಿಕೊಳ್ಳೋಣ

ಗುಂಡ್ಲುಪೇಟೆ: ಅಂಬೇಡ್ಕರ್ ಅವರ ಪುತ್ಥಳಿ ನಿರ್ಮಾಣ ಮಾಡುವುದರ ಜೊತೆಗೆ ಅವರ ತತ್ವ, ಆದರ್ಶಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳೋಣ ಮತ್ತು ಅವರ ಚಿಂತನೆಗಳನ್ನು ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗಿದೆ .ಎಂದು ಹೇಳಿದರು

ತಾಲ್ಲೂಕಿನ ಕೋಟೆಕೆರೆ ಗ್ರಾಮದಲ್ಲಿ ನಿರ್ಮಾಣ ಗೊಂಡಿರುವ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಪುತ್ಥಳಿ ಲೋಕಾರ್ಪಣೆ ಗೊಳಿಸಿ ನಂತರ ಮಾತನಾಡಿದ ಅವರು ಅಂಬೇಡ್ಕರ್ ಅವರ ಪುತ್ಥಳಿ ನಿರ್ಮಾಣ ಮಾಡುವುದರ ಜೊತೆಗೆ ಅವರ ತತ್ವ ಆದರ್ಶಗಳನ್ನು ಅನುಸರಿಸಿ ಸಮಸಮಾಜ ನಿರ್ಮಾಣ ಮಾಡುವುದರ ಕಡೆಗೆ ಸಾಗಬೇಕು ಅಂಬೇಡ್ಕರ್ ಅವರು ಜ್ಞಾನದ ಸಂಕೇತ ಅವರು ನೀಡಿದ ಸಂವಿಧಾನದಿಂದಲೇ ನಾವೇಲ್ಲರೂ ಸಮಾನವಾಗಿ ಮೂಲಭೂತ ಹಕ್ಕುಗಳನ್ನು ಪಡೆದಿರುವುದು ನಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸುವುದರ ಮೂಲಕ ಅವರ ಕನಸ್ಸನ್ನು ನೆನಸು ಮಾಡುವ ನಿಟ್ಟಿನಲ್ಲಿ ಸಾಗಬೇಕು ಗ್ರಾಮಕ್ಕೆ ಸರ್ಕಾರದ ಸವಲತ್ತುಗಳ ನೀಡುವುದರ ಮೂಲಕ ಗ್ರಾಮದ ಅಭಿವೃದ್ಧಿಗೆ ಸಹಕಾರ ನೀಡುತ್ತೇನೆ ಎಂಬ ಭರವಸೆ ನೀಡಿದರು.

ಪ್ರತಿ ವ್ಯಕ್ತಿಗೂ ಕೂಡ ಸಮಾನತೆ, ಶಿಕ್ಷಣ ಸಿಗಬೇಕೆನ್ನುವುದು ಅವರ ಕನಸಾಗಿತ್ತು. ಶಿಕ್ಷಣದಿಂದಲೇ ಪ್ರಗತಿ ಸಾಧ್ಯವೆಂದು ನಂಬಿದ್ದರು. ಸಂವಿಧಾನದಿಂದಲೇ ಜನರಿಗೆ ಸಿಗಬೇಕಾದ ಸಮಾನವಾದ ಹಕ್ಕುಗಳು ಹಾಗೂ ನ್ಯಾಯವನ್ನು ಒದಗಿಸಲು ತೋರಿಸಿದ್ದಾರೆ. ಇವರ ಸಾಧನೆಗಳು ನಮಗೆ ದಾರಿಯನ್ನು ತೋರಿಸುತ್ತದೆ ಎಂದರು

'ಅಂಬೇಡ್ಕರ್ ಕೇವಲ ದಲಿತರ ಬಗ್ಗೆ ಯೋಚನೆ ಮಾಡದೇ, ಸಮಾ ಸಮಾಜದ ಏಳಿಗೆಗೆಜೊತೆಯಾಗಿ ಎಲ್ಲರನ್ನೂ ಒಟ್ಟಿಗೆ ಕೊಂಡೊಯ್ಯುವ ಯೋಚನೆ ಮಾಡಿದವರು.ಅವರ ಆಶಯಗಳಂತೆ ನಡೆದರೆ ಭಾರತ ವಿಶ್ವಗುರುವಾಗಿ ಬೆಳೆಯುವುದನ್ನು ಯಾರಿಂದಲೂ ತಡೆಯಲಾಗದು' ಎಂದು ಹೇಳಿದರು

ನಂತರ ಮಾಜಿ ಶಾಸಕ ನಿರಂಜನ್ ಕುಮಾರ್ ಮಾತನಾಡಿ ಅಂಬೇಡ್ಕರ್ ಅವರ ಬಗ್ಗೆ ಎಷ್ಟು ಅಧ್ಯಯನ ಮಾಡಿದರು ಸಾಲದು ಅವರು ಅವರ ಜೀವನವನ್ನು ತ್ಯಾಗ ಮಾಡಿ ಸಂವಿಧಾನ ವನ್ನು ದೇಶಕ್ಕೆ ಅರ್ಪಣೆ ಮಾಡಿದ್ದಾರೆ. ಸಂವಿಧಾನದಿಂದಲ್ಲೇ ನಾವು ನೀವುಗಳು ಒಂದು ಕಡೆ ಸೇರಿ ಕಾರ್ಯಕ್ರಮ ಮಾಡಲು ಅವಕಾಶ ಸಿಕ್ಕಿದೆ ಅಂಬೇಡ್ಕರ್ ಅವರ ಪ್ರತಿಮೆ ಬಹಳಷ್ಟು ಗ್ರಾಮಗಳಲ್ಲಿ ಪುತ್ಥಳಿ ನಿರ್ಮಾಣ ವಾಗುತ್ತಿರುವುದು ಸಂತೋಷವಾಗಿದೆ

ಇತಿಹಾಸ ಪುಟಗಳಲ್ಲಿ ಉಳಿದಿರುವ ಮಹಾ ಪುರುಷರು ಅವರು, ಯುವ ಸಮೂಹ ಉನ್ನತ ಶಿಕ್ಷಣ ಪಡೆಯುವ ಮೂಲಕ ಸಮ ಸಮಾಜ ನಿರ್ಮಾಣ ಮಾಡುವುದರ ಕಡೆಗೆ ಸಾಗಬೇಕೆಂದರು. ದಿವ್ಯ ಸಾನಿಧ್ಯ ವನ್ನು ನಳಂದ ಬೌದ್ಧ ವಿಹಾರದ ಭೋದಿರತ್ನ ಬಂತೇಜಿ ರವರು ವಹಿಸಿದರು

ಕಾರ್ಯಕ್ರಮದಲ್ಲಿ ಚಾಮುಲ್ ನಿರ್ದೇಶಕ ಹೆಚ್ ಎಸ್ ನಂಜುಂಡ ಪ್ರಸಾದ್, ವಿರಶ?ವ ಮಹಾಸಭಾ ತಾಲ್ಲೂಕು ಅಧ್ಯಕ್ಷ ರವಿ ಕಮರಹಳ್ಳಿ ತಾ. ಪಂ ಮಾಜಿ ಸದಸ್ಯ ಹೆಚ್ ಎನ್ ಬಸವರಾಜ್, ಕೋಟೆಕೆರೆ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ ಎಂ ಮಹದೇವಸ್ವಾಮಿ, ರಂಗಸ್ವಾಮಿ, ಯುವ ಮುಖಂಡ ಡಾ. ನವೀನ್ ಮೌರ್ಯ, ಸುಭಾಷ್ ಮಾಡ್ರಹಳ್ಳಿ, ವಕೀಲ ಮಾಧು, ರಂಗನಾಥ್ , ರಾಮಕೃಷ್ಣಯ್ಯ ಶಿಕ್ಷಕ ಗೋಪಾಲಸ್ವಾಮಿ,ಗ್ರಾಮದ ಯಜಮಾನರು ಜೈ ಭೀಮ್ ಯುವಕ ಸಂಘದ ಪದಾಧಿಕಾರಿಗಳು ಹಾಗೂ ಮಹಿಳಾ ಸಂಘದವರು ಇನ್ನಿತರರು ಹಾಜರಿದ್ದರು

ಸುಂದರವಾಗಿ ಕಾಣುತ್ತಿದೆ

ಮುಖ್ಯ ಭಾಷಣಕಾರರಾದ ಡಾ. ಶಿವಕುಮಾರ್, ಮಾತನಾಡಿ ನಿಮ್ಮ ಊರಲ್ಲಿ ಅಂಬೇಡ್ಕರ್ ಪುತ್ಥಳಿ ನಿರ್ಮಾಣ ಮಾಡಬೇಕು ಎಂದು ಜಿದ್ದಿಗೆ ಬಿದ್ದು ಎಲ್ಲಾರ ಸಹಕಾರ ದಿಂದ ನಿರ್ಮಾಣವಾಗಿದ್ದು ಬಹಳ ಸುಂದರವಾಗಿ ಕಾಣುತ್ತಿದೆ ನೋಡುತ್ತಿದ್ದರೆ ಮತ್ತೆ ಮತ್ತೆ ನೋಡಬೇಕು ಅನ್ನಿಸುತ್ತಿದೆ ಸಂತೋಷದ ವಿಚಾರ ಅದೇ ರೀತಿ ವಿಶೇಷವಾಗಿ ಯುವ ಜನತೆ ಅಂಬೇಡ್ಕರ್ ಅವರ ಆದರ್ಶಗಳನ್ನು ಪಾಲನೆ ಮಾಡಬೇಕು. ಅವರು ಹಾಕಿಕೊಟ್ಟಿರುವ ಮಾರ್ಗದಲ್ಲಿ ನಾವೆಲ್ಲರೂ ಸಾಗುವುದು ಅಗತ್ಯವಿದೆ. ಅಂದಾಗಲೇ ಬಲಿಷ್ಠವಾಗಿ ದೇಶ ಕಟ್ಟಲು ಅನುಕೂಲವಾಗುತ್ತವುದು ಹಾಗೂ ಸ್ಪರ್ಧಾತ್ಮಕ ಜಗತ್ತಿನಲ್ಲಿ ಶಿಕ್ಷಣ ಕಲಿಯಬೇಕಿದೆ ಎಂದರು. ಶಿಕ್ಷಣ ಮನುಷ್ಯನನ್ನು ಸ್ವಾಭಿಮಾನಿಯನ್ನಾಗಿ ಮಾಡುತ್ತದೆ ಎಂಬುದು ಮರೆಯಬಾರದು ಎಂದು ತಿಳಿಸಿದರು.

ಐತಿಹಾಸಿಕ ಶ್ರೀರಾಮ ಬ್ರಹ್ಮರಥೋತ್ಸವ

ಪಟ್ಟಾಭಿರಾಮನ ದೇಗುಲದಲ್ಲಿ ಸಂಭ್ರಮ । ಸಿಂಗಾರಗೊಂಡಿರುವ ಚುಂಚನಕಟ್ಟೆ



ಕೆ .ಆರ್ .ನಗರ : ಕಾವೇರಿ ನದಿ ತಟದಲ್ಲಿ ನೆಲೆಯಾಗಿರುವ 'ಪಟ್ಟಾಭಿರಾಮನ ದೇಗುಲದ ಆವರಣದಲ್ಲಿ ಐತಿಹಾಸಿಕ ಶ್ರೀ ರಾಮ ಬ್ರಹ್ಮರಥೋತ್ಸವ ಶುಕ್ರವಾರ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಇತಿಹಾಸ ಪ್ರಸಿದ್ಧ ಪ್ರವಾಸಿ ತಾಣವಾದ ಚುಂಚನಕಟ್ಟೆ ಗ್ರಾಮದಲ್ಲಿ ಹಸಿರು–ತೋರಣ, ದೇಗುಲದ ರಸ್ತೆ, ಬಸವನ ವೃತ್ತ, ಮುಖ್ಯ ದ್ವಾರ, ದೇಗುಲಕ್ಕೆ ಮ್ಯೂಸಿಕ್ ವಿದ್ಯುತ್ ಬೆಳಕಿನಿಂದ ಅಲಂಕಾರಗೊಂಡು ಚುಂಚನಕಟ್ಟೆ ಗ್ರಾಮ ಆಕರ್ಷಿತವಾಗಿ ಸಿಂಗಾರಗೊಂಡಿತು.

ಧಾರ್ಮಿಕ ದತ್ತಿ ಇಲಾಖೆ ಮತ್ತು ಸಾಲಿಗ್ರಾಮ ತಾಲೂಕು ಆಡಳಿತ ವತಿಯಿಂದ ಸಿದ್ದಗೊಂಡಿದ್ದ ಶ್ರೀ ಕೋದಂಡರಾಮ ದೇವರ ಬ್ರಹ್ಮರಥೋತ್ಸವಕ್ಕೆ ಶುಕ್ರವಾರ ಬೆಳಗ್ಗೆ 11.45ರಲ್ಲಿ ಶಾಸಕ ಡಿ ರವಿಶಂಕರ್, ಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರ ಸ್ವಾಮೀಜಿ, ಗಾವಡಗೆರೆ ಮಠದ ನಟರಾಜ ಸ್ವಾಮೀಜಿ.ಬೆಟ್ಟದಪುರ ವಿರಕ್ತ ಮಠ ಚನ್ನಬಸವ ದೇಶಿಕೇಂದ್ರ ಸ್ವಾಮಿಜಿ,ಕರ್ಪೂರವಳ್ಳಿ ಮಠದ ಅಭಿನವ ಶಿವಾಚಾರ್ಯ ಸ್ವಾಮೀಜಿ. ಮೈಸೂರು – ಚಾಮರಾಜನಗರ ಜಿಲ್ಲಾ ಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮಿಗೌಡ.ತಹಸೀಲ್ದಾರ್ ರುಕಿಯಾಬೇಗಂ ಚಾಲನೆ ನೀಡಿದರು.

ಚುಂಚನಕಟ್ಟೆ ಜಾತ್ರೆಯಲ್ಲಿ ಜಾತಿ, ವರ್ಗ ಇತ್ಯಾದಿ ಭೇದವಿಲ್ಲದೆ ಜನರು ಒಂದೆಡೆ ಸೇರಿ ಜಾತ್ರೆಯಲಿ ಸಂಭ್ರಮಿಸಿದ ಜನರು ಶ್ರೀ ರಾಮ ಬ್ರಹ್ಮ ರಥೋತ್ಸವಕ್ಕೆ ಪೂಜೆ ಸಲ್ಲಿಸಿ ಜವನ ಬಾಳೆಹಣ್ಣು ಎಸೆದು ಇಷ್ಟಾರ್ಥ ಪೂಜೆ ಸಲ್ಲಿಸಿದರು. ಸಾಲಿಗ್ರಾಮ ಪೊಲೀಸರು ಭಕ್ತರಿಗೆ ಯಾವುದೇ ತೊಂದರೆ ಆಗದ ರೀತಿಯಲ್ಲಿ ದೇವರ ದರ್ಶನ ಪಡೆಯಲು ಸೂಕ್ತ ಬಿಗಿ ಬಂದೋಬಸ್ತ್ ಮಾಡಿದರು. ಈ ವರ್ಷ ಜಾತ್ರೆಯಲ್ಲಿ ಕಿವಿ ಮತ್ತು ಎದೆ ನಡುಗುವ ಶಬ್ದಗಳ ಪೀಪಿಗಳನ್ನು ನಿಷೇಧಿಸಲಾಗಿದ್ದು ಕಂಡು ಬಂತು. ಬೈಕ್ ಮತ್ತು ಕಾರ್ ಗಳಿಗೆ ಪ್ರತ್ಯೇಕ ಸ್ಥಳದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿತು.

ಶ್ರೀರಾಮ ಬ್ರಹ್ಮ ರಥೋತ್ಸವದ ಹಿನ್ನೆಲೆ ರಥಕ್ಕೆ ಕಬ್ಬಿಣದ ಪರಿಕರಗಳು, ಧಾರ್ಮಿಕ ವಸ್ತ್ರಹಾಗೂ ಬಾವುಟವನ್ನು ಕಟ್ಟಲಾಯಿತು. ನಂತರ ಉತ್ಸವ ಮೂರ್ತಿಯನ್ನು ಶೃಂಗಾರ ಗೊಳಿಸಿ ತೇರಿನ ಮೇಲೆ ಕೂರಿಸಲಾಯಿತು. ಶ್ರೀ ರಾಮ ದೇವಸ್ಥಾನದ ಸುತ್ತ ತೇರನ್ನು ಸಾವಿರಾರು ಭಕ್ತರು ಎಳೆದರು. ಜಾತ್ರೆಯಲ್ಲಿ ಸಿಹಿ ತಿಂಡಿ ತಿನಿಸು ಬಲೂನ್ ಹಣ್ಣು ಕಾಯಿ ಜವನ ಸೇರಿದಂತೆ ಮಕ್ಕಳು ವಿವಿಧ ಆಟೋಟ ಸಾಮಗ್ರಿಗಳ ವ್ಯಾಪಾರ ಜೋರಾಗಿ ನಡೆಯಿತು. ಭಕ್ತರಿಗೆ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಅನ್ನದಾಸೋಹ ವ್ಯವಸ್ಥೆ ಹಾಗೂ ದೇಗುಲದಲ್ಲಿ ಲಾಡು ಪ್ರಸಾದ ವ್ಯವಸ್ಥೆಯನ್ನು ಶಾಸಕ ಡಿ. ರವಿಶಂಕರ್ ಮಾಡಿಸಿದರು.

ಕಾವೇರಿ ನದಿಗೆ ಹೊಂದಿಕೊಂಡಂತಿರುವ ಶ್ರೀರಾಮ ದೇವಸ್ಥಾನ ಈಗಾಗಲೇ ರಾಜ್ಯಾದ್ಯಂತ ಪ್ರಸಿದ್ಧಿಯಾಗಿದೆ.ಇಲ್ಲಿ ಸೀತೆ ಮಡಿಲು. ಎಂಬ ಸ್ಥಳ ನೋಡಲು ಭಕ್ತರ ಮುಗಿಬಿದ್ದರು. ಇತ್ತೀಚೆಗಷ್ಟೇ ಈ ಸ್ಥಳ ಪ್ರವಾಸೋದ್ಯಮ ಇಲಾಖೆಯಿಂದ ಒಂದಷ್ಟು ಮಾತ್ರ ಅಭಿವೃದ್ಧಿಗೊಂಡಿದ್ದು ಇನ್ನೂ ಸಾಕಷ್ಟು ಅಭಿವೃದ್ಧಿಗಳು ಬಾಕಿ ಇದೆ ಇಂತಹ ಸ್ಥಳ ನಿತ್ಯ ಸಾವಿರಾರು ಜನ ಬರುವಂತ ಪ್ರಸಿದ್ಧಿಯಾಗಿ ಅಭಿವೃದ್ಧಿ ಆಗಬೇಕು ಎನ್ನುತ್ತಾರೆ ಭಕ್ತಾದಿಗಳು.

ವಿಶೇಷ ಗರುಡ

ಶ್ರೀ ರಾಮ ಬ್ರಹ್ಮ ರಥೋತ್ಸವ ಜರುಗಿದ ನಂತರ ಗರುಡಗಳು ಆಕಾಶದಿಂದ ಇಳಿದು ತೇರಿನ ಮೇಲೆ ಇರುವ ಪ್ರಸಾದವನ್ನು ಸ್ವೀಕರಿಸುವುದು ಪುರಾತನ ಕಾಲದ ಇತಿಹಾಸದಿಂದಲೂ ನಡೆದು ಬಂದಿದೆ. ಅವುಗಳು ಬಂದಿಲ್ಲ ಎಂದರೆ ಏನೋ ದೋಷಗಳು ಜಾತ್ರೆಯಲ್ಲಿ ಇದೆ ಎಂದರ್ಥ. ಅದೇ ರೀತಿ ಈ ಶ್ರೀ ರಾಮನ ಜಾತ್ರೆ ಸಂತೃಪ್ತಿಯಿಂದ ನಡೆದಿದೆ ಎಂಬುದಕ್ಕೆ ಲಕ್ಷಾಂತರ ಜನರ ಕಣ್ಮುಂದೆ ಬಿಳಿ ಮತ್ತು ಕಪ್ಪು ಗರುಡಗಳು ಆಕಾಶದಿಂದ ನೇರ ಇಳಿದು ತೇರಿನ ಮೇಲಿದ್ದ ಶ್ರೀರಾಮನ ಪ್ರಸಾದವನ್ನು ಸ್ವೀಕರಿಸಿದ್ದು. ಈ ಸ್ಥಳದ ಅದ್ಭುತ ಸತ್ಯವನ್ನು ಹೇಳುವ ಮೂಲಕ ಇಲ್ಲಿದ್ದ ಭಕ್ತರ ಎದೆ ನಡುಗಿಸುವಂತೆ ಖಂಡಿತು.

ಶ್ರೀರಾಂಪುರ ಪಟ್ಟಣ ಪಂಚಾಯಿತಿ ಕಾರ್ಯಾಲಯ
ಮೈಸೂರು ಜಿಲ್ಲೆ – 570008 , ದೂ: 0821–2330109
ಇ–ಮೇಲ್: itstaff_ulb_srirampur@yaoo.com

ಸಂ.: ಶ್ರೀ.ಪ.ಪಂ.ಕಾ/ಆ.ಶಾ./ಟೆಂ.ಪ್ರ.03/2025–26 ದಿನಾಂಕ: 08.01.2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಶ್ರೀರಾಂಪುರ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ರವರು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ನಿಯಮದನ್ವಯ ಕೆ.ಪಿ.ಪಿ.–ಪೋರ್ಟಲ್ ಮುಖಾಂತರ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿರವರ ಬಾಹ್ಯ ಕಾರ್ಯ ವೀಕ್ಷಣೆಗೆ ಕಾರಿನ ಅಗತ್ಯವಿದ್ದು, 1 ವರ್ಷದ ಅವಧಿಗೆ ಪಟ್ಟಣ ಪಂಚಾಯಿತಿಗೆ ಬಾಡಿಗೆ ಆಧಾರದ ಮೇಲೆ ವಾಹನವನ್ನು ಒದಗಿಸಲು ಅರ್ಹ ಸಂಸ್ಥೆದಾರರು/ ಗುತ್ತಿಗೆದಾರರು/ಸರಬರಾಜುದಾರರುಗಳಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಇ–ವೆಬ್‌ಸೈಟ್ **https://kppp.karnataka.gov.in** ಮೂಲಕ ಇಎಂಡಿ, ಗುತ್ತಿಗೆ ಮತ್ತು ಇತರೆ ಷರತ್ತುಗಳನ್ನು ಗಮನಿಸಿಕೊಳ್ಳುವುದು. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ **www.srirampuratown.mrc.gov.in** ನಿಂದ ಪಡೆದುಕೊಳ್ಳಬಹುದು.

1) ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: **23.01.2026 ಸಂಜೆ 5.30 ಗಂಟೆಗೆ** 2) ಸ್ವೀಕೃತವಾದ ದರ ಟೆಂಡರ್ ತೆರೆಯುವ ದಿನಾಂಕ: **26.01.2026 ಪೂರ್ವಾಹ್ನ 11.00 ಗಂಟೆಗೆ.**

ಕ್ರ. ಸಂ.	ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ ರೂ.
01	DMA/2025-26/SE6647	4.20	10,500/-

ಸೂಚನೆ: ಹೆಚ್ಚಿನ ವಿವರ ಹಾಗೂ ಮಾಹಿತಿಗಳನ್ನು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– (ಮಹೇಶ್‌ಕುಮಾರ್ ಕೆ.ಎಂ.) **ಆಡಳಿತಾಧಿಕಾರಿಗಳು** ಪಟ್ಟಣ ಪಂಚಾಯಿತಿ ಶ್ರೀರಾಂಪುರ

ಸಹಿ/– (ಹೆಚ್.ಎಂ.ಸುರೇಶ) **ಮುಖ್ಯಾಧಿಕಾರಿ** ಪಟ್ಟಣ ಪಂಚಾಯಿತಿ ಶ್ರೀರಾಂಪುರ

DIPR/MYS/1518/SA/2025-26

ನಾನು ಮೂಗು ತೂರಿಸಲ್ಲ!

ವಿಚಾರವಾಗಿ ಚರ್ಚೆ ಮಾಡುವಷ್ಟು ನಾವು ದೊಡ್ಡವರಲ್ಲ. ಇದು ನನಗೆ, ಸಿದ್ದರಾಮಯ್ಯಗೆ ಹಾಗೂ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಈ ಬಗ್ಗೆ ಮೂರನೇ ವ್ಯಕ್ತಿಗಳು ತಲೆಹಾಕಬೇಡಿ ಎಂದು ಈಗಾಗಲೇ ಡಿಸಿಎಂ ಹೇಳಿದ್ದಾರೆ ಎಂದರು.

ಸಂಕ್ರಾಂತಿ ಬಳಿಕ ಸಂಪುಟ ವಿಸ್ತರಣೆ ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ಈ ಬಗ್ಗೆ ಹೈಕಮಾಂಡ್ ಕೇಳಿ ಹೇಳುತ್ತೇನೆ. ನಾನೇನು ಸಚಿವ ಸ್ಥಾನ ಬೇಕು ಅಂತ ಒತ್ತಡ ಹಾಕುತ್ತಿಲ್ಲ. ಅದನ್ನೆಲ್ಲ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದರು.

ಸಿಎಂ ಸಿದ್ದರಾಮಯ್ಯ ಲೀಸ್ ಬೇಸ್ಡ್ ಸಿಎಂ ಎಂಬ ಎಚ್.ಡಿ.ಕುಮಾರಸ್ವಾಮಿ ಹೇಳಿಕೆ ವಿಚಾರ ಕುರಿತು ಮಾತನಾಡಿ, ಲೀಸ್ ಬೇಸ್ಡ್ ಸಿಎಂ ಯಾರು ಅಂತ ಕುಮಾರಸ್ವಾಮಿ ಆತ್ಮಾವಲೋಕನ ಮಾಡಿಕೊಳ್ಳಲಿ. ಕುಮಾರಸ್ವಾಮಿ ರಾಜ್ಯಾ ರಾಜಕಾರಣಕ್ಕಾದರೂ ಬರಲಿ, ಸ್ಥಳೀಯ ಚುನಾವಣೆಗಾದರೂ ಬರಲಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರು ಎಲ್ಲಿ ಬೇಕಾದರೂ ಸ್ಪರ್ಧೆ ಮಾಡಬಹುದು ಎಂದು ಹೇಳಿದರು.

ಇಂದು ಮೈಸೂರಿಗೆ ಸಿದ್ದರಾಮಯ್ಯ ಭೇಟಿ

ವರುಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಸಮಾರಂಭ'ದಲ್ಲಿ ಮಧ್ಯಾಹ್ನ 2.50ಕ್ಕೆ ಭಾಗವಹಿಸುವರು. ಸಂಜೆ ಸಂಜೆ 7ಕ್ಕೆ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ವಾಪಸ್ ತೆರಳುವರು. ಮುಖ್ಯಮಂತ್ರಿಯೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಭಾಗವಹಿಸುವರು.

ಚಿನ್ನಸ್ವಾಮಿಯಲ್ಲಿ ಐಪಿಎಲ್ ಪಂದ್ಯಕ್ಕೆ ಗ್ರೀನ್ ಸಿಗ್ನಲ್

ಈ ಬಾರಿಯ ಐಪಿಎಲ್ ಮಾರ್ಚ್ 21ರಂದು ಪ್ರಾರಂಭವಾಗುವ ಸಾಧ್ಯತೆಯಿದೆ. ಫೆಬ್ರವರಿ ಕೊನೆಯಲ್ಲಿ ಐಪಿಎಲ್ ವೇಳಾಪಟ್ಟಿ ಪ್ರಕಟವಾಗುವ ಸಾಧ್ಯತೆಯಿದೆ.

ಬಂಡೂರು ಕುರಿ 1.35 ಲಕ್ಷಕ್ಕೆ ಮಾರಾಟ

ಅಭಿವೃದ್ಧಿಪಡಿಸಲು ಬಂಡೂರು ಟಗರನ್ನು ಖರೀದಿ ಮಾಡಿದ್ದಾರೆ. ಬಳಿಕ ಉಲ್ಲಾಸ್‌ಗೆ ಹಣ ನೀಡಿ ಸನ್ಮಾನ ಮಾಡಿದ್ದಾರೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ

ಮೈಸೂರು: ಮಹಾನಗರ ಪಾಲಿಕೆಯ ವಾರ್ಡ್ ನಂ. 17ರ ಬನ್ನಿಮಂಟಪ ಎ ಬಡಾವಣೆಯ 5ನೇ ಮುಖ್ಯ ರಸ್ತೆಯಿಂದ 6ನೇ ಮುಖ್ಯ ರಸ್ತೆಯವರೆಗೆ ಸೆಂಟ್ ಜೋಸೆಫ್ ಕಾನ್ವೆಂಟ್ ಹಿಂಭಾಗದ ರಸ್ತೆ ಹಾಗೂ ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ತನ್ವೀರ್ ಸೇಠ್ ಗುದ್ದಲಿ ಪೂಜೆ ನೆರವೇರಿಸಿದರು.

ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಮುಖ್ಯ ರಸ್ತೆ ಹಾಳಾಗಿರುವುದರಿಂದ ಆವಶ್ಯಕತೆಗೆ ಅನುಗುಣವಾಗಿ ಹೊಸ ರಸ್ತೆ ನಿರ್ಮಿಸಿ ಮರು ಡಾಂಬರೀಕರಣಕ್ಕೆ ಚಾಲನೆ ನೀಡಲಾಗಿದೆ. ಎನ್ ಆರ್ ಕ್ಷೇತ್ರ ವ್ಯಾಪ್ತಿಯಲ್ಲಿ ಸಾಕಷ್ಟು ಕಾಮಗಾರಿಗಳಿಗೆ ಚಾಲನೆ ನೀಡಿದ್ದೇವೆ ಎಂದು ತಿಳಿಸಿದರು. ಇದೇ ಸಂಧರ್ಭದಲ್ಲಿ ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಇಕ್ಬಾಲ್ ಉಪಾಧ್ಯಕ್ಷ ಶೆಹನ್ ಷಾ , ಅಫ್ರೋಜ್ ಖಾನ್ ,ರಫೀಕ್ ಲಾಲೂ,ಡಿಸಿ ಸಿ ಸದಸ್ಯ ಮಾಜೀದ್ ಅಹಮದ್ , ಪಾಲಿಕೆ ಮಾಜಿ ಸದಸ್ಯ ಪ್ರದೀಪ್ ಚಂದ್ರ, ಶೌಕತ್ ಅಲಿ ಖಾನ್ , ಅಫ್ಸರ್ , ಜೆಡ್ ಮಾರ್ಕ್ ಝುಬೇರ್, ವಾಸೀಮ್, ಶರತ್ ಸೇರಿ ಹಲವರು ಉಪಸ್ಥಿತರಿದ್ದರು.

ಮೊದಲ ಪುಟದಿಂದ

ಸೈಬರ್ ಅಪರಾಧ ಹೆಚ್ಚಳ

ನೆಮ್ಮದಿಯಿಂದ ಇರಲು ಸಾಧ್ಯ. ಆದರೆ ಕೆಲವು ಪೊಲೀಸ್ ಠಾಣೆಗಳ ಕೆಲವು ಅಧಿಕಾರಿಗಳು ಸರಿಯಾಗಿ ಕರ್ತವ್ಯ ನಿರ್ವಹಿಸದ ಕಾರಣಕ್ಕೆ ಜನರು ತೊಂದರೆ ಅನುಭವಿಸಬೇಕಾಗುತ್ತದೆ ಎಂದು ಕಿಡಿಕಾರಿದರು.

ಡಿಕೆಶಿ ವಿಚಾರ ಗೊತ್ತಿಲ್ಲ: ಪರಂ

ಕೆಪಿಸಿಸಿ ಅಧ್ಯಕ್ಷರು ರಾಜೇಗೌಡರಿಗೂ ನೋಟಿಸ್ ಜಾರಿ ಮಾಡಿದ್ದಾರೆ. ಪಕ್ಷದಲ್ಲಿ ಉಳಿಸಿಕೊಳ್ಳಬೇಕೋ ಅಥವಾ ತೆಗೆದುಹಾಕಬೇಕೋ ಎಂಬುದನ್ನು ಪಕ್ಷದ ನಾಯಕತ್ವ ನಿರ್ಧರಿಸುತ್ತದೆ ಎಂದು ಹೇಳಿದರು.

ಬಳ್ಳಾರಿಯಲ್ಲಿ ಬಿಜೆಪಿ ಇಂದು ನಡೆಸುತ್ತಿರುವ ಪ್ರತಿಭಟನೆ ವಿಷಯ ತಿಳಿದಿದೆ. ನಾವು ಯಾವುದೇ ಅನುಮತಿ ನೀಡಿಲ್ಲ. ಇದನ್ನು ಸ್ಥಳೀಯ ಪೊಲೀಸರಿಗೆ ಬಿಟ್ಟಿದ್ದೇವೆ. ಪರಿಸ್ಥಿತಿಯನ್ನು ಅವಲೋಕಿಸಿ ಅನುಮತಿ ನೀಡಬೇಕೇ ಅಥವಾ ಬೇಡವೇ ಎಂಬುದನ್ನು ನಿರ್ಧರಿಸಲು ಸೂಚನೆ ನೀಡಿದ್ದೇವೆ. ಸ್ಥಳೀಯ ಪೊಲೀಸರೇ ಅಲ್ಲಿನ ಪರಿಸ್ಥಿತಿಯನ್ನು ನಿರ್ಧರಿಸಬೇಕು ಎಂದು ಹೇಳಿದರು.

ಲಕ್ಕುಂಡಿ ಉತ್ಖನನ: ಶಿಲಾಕೃತಿ ಪತ್ತೆ

ಇರಲು ಸಾರ್ವಜನಿಕರ ಫೋಟೋ, ವೀಡಿಯೋಗ್ರಾಫಿಗೆ ನಿಷೇಧ ಹೇರಲಾಗಿದೆ. 10 ಮೀಟರ್ ಸುತ್ತಳತೆ ಜಾಗದಲ್ಲಿ ಉತ್ಖನನ ನಡೆಸಲು ಸಿದ್ಧತೆ ನಡೆದಿದೆ. ಉತ್ಖನನ ಕಾರ್ಯ ಮುಗಿಯುವವರೆಗೂ ಸಾರ್ವಜನಿಕ ಪ್ರವೇಶ ನಿರ್ಬಂಧಿಸಿ ಜಿಲ್ಲಾಧಿಕಾರಿ ಸಿ.ಎನ್ ಶ್ರೀಧರ್ ಆದೇಶಿಸಿದ್ದಾರೆ.

ಮೊದಲು ಇಲ್ಲಿ ಲಕ್ಕುಂಡಿ ಗ್ರಾಮವಿರಲಿಲ್ಲ. ಲಕ್ಕುಂಡಿ ಗ್ರಾಮ ಸಪ್ತ ಗ್ರಾಮಗಳ ಅಗ್ರಹಾರವಾಗಿತ್ತು. ಈ ಅಗ್ರಹಾರ ಸೊಕಮನಕಟ್ಟಿ, ತಂಗಾಬೆಂಚಿ, ಜವಳಬೆಂಚಿ, ನರಸಿಪುರ, ಮೊಟಬಸಪ್ಪ, ಬೂದಿಬಸಪ್ಪ, ಲಕ್ಕುಂಡಿ ಗ್ರಾಮಗಳನ್ನು ಒಳಗೊಂಡಿತ್ತು. ವಿಜಯನಗರ ಅರಸರ ಆಳಿಕ್ವೆ ಅಧಿಪತ್ಯದ ನಂತರ ಏಳು ಗ್ರಾಮದ ಜನರು ಲಕ್ಕುಂಡಿಗೆ ಬಂದು ನೆಲೆಸಿದರು. ಇಲ್ಲಿ ನಾಣ್ಯಗಳನ್ನು ತಯಾರಿಸುವ ಠಂಕಸಾಲೆಗಳಿದ್ದವು ಎಂಬ ಇತಿಹಾಸವಿದೆ. ಇತಿಹಾಸಕ್ಕೆ ಸಂಬಂಧಿಸಿದ ಪುರಾತನ ಕಾಲದ ಕಲ್ಲಿನ ವಿಗ್ರಹಗಳು, ಅವಶೇಷಗಳು, ಪುರಾವೆಗಳು ಲಕ್ಕುಂಡಿಯ ಅಲ್ಲಲ್ಲಿ ಸಿಗುತ್ತಿವೆ ಎನ್ನಲಾಗಿದೆ.

ತಾಲೂಕು ಆರೋಗ್ಯಾಧಿಕಾರಿ ಟಿ.ರವಿಕುಮಾರ್ ಹೇಳಿಕೆ

ಬಿಸಿಯೂಟ: ಸ್ವಚ್ಛತೆ, ಸುರಕ್ಷತೆಗೆ ಆದ್ಯತೆ ನೀಡಿ

ಎಚ್.ಡಿ.ಕೋಟೆ: ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ನಿಯಮ 2011 ರ ಅನ್ವಯ ಎಲ್ಲ ಶಾಲೆಯ ಶಿಕ್ಷಕರು ಆಹಾರ ಪರವಾನಿಗೆ ಕಡ್ಡಾಯವಾಗಿ ಪಡೆಯಬೇಕು. ಅಡುಗೆ ಸಿಬ್ಬಂದಿಯವರು ಅಡುಗೆ ಕೋಣೆಯನ್ನು ಶುಚಿಯಾಗಿ ಇಟ್ಟುಕೊಳ್ಳಬೇಕು ಎಂದು ತಾಲೂಕು ಆರೋಗ್ಯಾಧಿಕಾರಿ ಟಿ.ರವಿಕುಮಾರ್ ತಿಳಿಸಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ಸೇಂಟ್ ಮೇರಿಸ್ ಶಾಲೆ ಆವರಣದಲ್ಲಿ ನಡೆದ ಅಡುಗೆ ಸಿಬ್ಬಂದಿ ವರ್ಗದರಿಗೆ ಆಹಾರ ಸುರ ಕ್ಷತಾ ಹಾಗೂ ಗುಣಮಟ್ಟ ಕಾಯ್ದೆಯ ತರಬೇತಿಯಲ್ಲಿ ಮಾತನಾಡಿದರು. ಪಾತ್ರೆಗಳನ್ನು ಶುದ್ಧವಾದ ನೀರಿನಿಂದ ತೊಳೆಯಬೇಕು. ಅಡುಗೆ ಮಾಡಿದ ನಂತರ ಆಹಾರವನ್ನು ಮುಚ್ಚಿಡಬೇಕು. ಅಡಿಗೆ ಮಾಡುವಾಗ ಹೆಡ್ ಕ್ಯಾಪ್ ಮತ್ತು ಗ್ಲೋ ವನ್ನು ಹಾಕಿಕೊಳ್ಳಬೇಕು. ಪ್ಲಾಸ್ಟಿಕ್ ಕವರ್ ಗಳನ್ನು ಉಪಯೋಗಿಸಬಾರದು.

ಯಾವುದೇ ಕಾರಣಕ್ಕೂ ಕೊಳೆತ ತರಕಾರಿಗಳನ್ನು ಅಡುಗೆಗೆ ಬಳಸಬಾರದು. ವಿದ್ಯಾರ್ಥಿಗಳಿಗೆ ಶುದ್ಧವಾದ ಆಹಾರವನ್ನು ನೀಡಬೇಕು. ವಿದ್ಯಾರ್ಥಿಗಳಿಗೆ ಕುಡಿಯಲು ಬಿಸಿ ನೀರನ್ನೇ ನೀಡಬೇಕು. ಮಕ್ಕಳಿಗೆ ನೀಡುವ ಆಹಾರದಲ್ಲಿ ಯಾವುದೇ ತೊಂದರೆ ಆದರೂ ಅಡುಗೆ ಸಿಬ್ಬಂದಿಯವರೇ ನೇರ ಜವಾಬ್ದಾರು ಎಂದು ಎಚ್ಚರಿಸಿದರು.

ಅಡುಗೆ ಯವರು ಮತ್ತು ಅಡುಗೆ ಸಹಾಯಕರು ಶುಚಿ ಮತ್ತು ರುಚಿಯಾದ ಆಹಾರವನ್ನು ತಯಾರಿಸಿ ವಿದ್ಯಾರ್ಥಿಗಳಿಗೆ ನೀಡಿದಲ್ಲಿ ಉತ್ತಮ ಸೇವೆ ಮಾಡಿದಂತಾಗುತ್ತದೆ. ಅಡಿಗೆ ಮಾಡುವ ವೇಳೆಯಲ್ಲಿ ಸ್ವಚ್ಛವಾದ ಸಮವಸ್ತ್ರಗಳನ್ನು ಧರಿಸಿ ಕೆಲಸವನ್ನು ನಿರ್ವಹಿಸಬೇಕು. ದಾಸ್ತಾನು ಕೊಟ್ಟ ಕಡೆಯಿಂದ ಆಹಾರ ಸಾಮಗ್ರಿಗಳನ್ನು ಪಡೆದು ಸ್ವಚ್ಛಗೊಳಿಸಬೇಕು. ಸಾಮಗ್ರಿಗಳಲ್ಲಿ ಕಸ ಕಡ್ಡಿಗಳು ಕಲ್ಲು ಇತ್ಯಾದಿ ಕಲ್ಲಿದ್ದಲ್ಲಿ ಶುಚಿಗೊಳಿಸಿ ಆಹಾರ ತಯಾರು ಮಾಡಬೇಕು. ಎಲ್ಲ ವಿಧವಾದ ಕಾಳುಗಳನ್ನು ಮೊಳಕೆ ಕಟ್ಟಿ ಸಾಂಬಾರು ತಯಾರಿಸಲು ಉಪಯೋಗಿಸಬೇಕು. ಅಡುಗೆ ತಯಾರಿಕೆಗೆ ಶುದ್ಧವಾದ ನೀರನ್ನು ಉಪಯೋಗಿಸಬೇಕು ವಿದ್ಯಾರ್ಥಿಗಳೊಂದಿಗೆ ಸಹಕಾರ ಮನೋಭಾವದಿಂದ ವರ್ತಿಸಬೇಕು ಎಂದರು. ಬಿಸಿ ಊಟ ನಿರ್ದೇಶಕ ಚಂದ್ರಶೇಖರ್, ಆರೋಗ್ಯ ಇಲಾಖೆ ಸಿಬ್ಬಂದಿ ವರ್ಗದವರು, ಅಗ್ನಿಶಾಮಕ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ವರ್ಗದವರು,ಅಡಿಗೆ ಸಿಬ್ಬಂದಿ ವರ್ಗದವರು ಇನ್ನಿತರರು ಇದ್ದರು.

ನಿರಾಶ್ರಿತರಿಗೆ ಮನೆ ಹಸ್ತಾಂತರ

ಕೆ.ಆರ್.ನಗರ: ಉಳ್ಳವರು ನಿರ್ಗತಿಕರಿಗೆ ಹಾಗೂ ದುರ್ಬಲರಿಗೆ ನೆರವಾಗುವುದರ ಮೂಲಕ ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡಬೇಕು ಎಂದು ಶ್ರೀ ಭಾಷ್ಯಕಾರ ದೇವಸ್ಥಾನ ಪೀಠದ ಶ್ರೀ ಧನುರ್ದಾಸೆ ರಾಮಾನುಜ ಜೀಯರ್ ಸ್ವಾಮೀಜಿ ಹೇಳಿದರು.

ಅವರು ತಾಲೂಕಿನ ಕರ್ಪೂರವಳ್ಳಿ ಗ್ರಾಮದಲ್ಲಿ ಸೂರು ಇಲ್ಲದೆ ಬದುಕು ನಡೆಸುತ್ತಿದ್ದ ಸರಸ್ವತಿ ಅವರಿಗೆ ಮನೆಯನ್ನು ಕಟ್ಟಿಸಿಕೊಟ್ಟು ಮನೆಯ ಕೀಯನ್ನು ಅವರಿಗೆ ಹಸ್ತಾಂತರಿಸಿ ಮಾತನಾಡಿದರು.

ಬೇರೊಬ್ಬರಿಗೆ ಸಹಕಾರವನ್ನು ಮಾಡುವಂತಹ ಅವಕಾಶವನ್ನು ದೇವರು ನಮಗೆ ಕಲ್ಪಿಸಿದ್ದಾರೆಂದರೆ ಅದು ನಮ್ಮ ಸೌಭಾಗ್ಯವಾಗಿದೆ. ಸಮಾಜದಲ್ಲಿರುವ ಎಲ್ಲರಿಗೂ ಸಹಕಾರವನ್ನು ಮಾಡಲು ನಮಗೆ ಆಗದಿದ್ದರೂ ನಮ್ಮ ಕೈಲಾದ ಮಟ್ಟಿಗೆ ನಮ್ಮ ಸುತ್ತಮುತ್ತಲು ಇರುವ ಸಂಕಷ್ಟಕ್ಕೆ ಸಿಲುಕಿರುವಂತಹ ಜನರಿಗೆ ನೆರವಾಗುವ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಆ ಮೂಲಕ ಪ್ರತಿಯೊಬ್ಬರೂ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯಬೇಕು ಎಂದು ಅಭಿಪ್ರಾಯಪಟ್ಟ ಅವರು ಆ ದಿಕ್ಕಿನಲ್ಲಿ ಸರ್ವರೂ ಕಾರ್ಯೋನ್ಮುಖರಾಗಿ ಕಾರ್ಯವನ್ನು ಮಾಡಬೇಕು ಇಂತಹ ಪುಣ್ಯ ಕಾರ್ಯಗಳನ್ನು ಮಾಡುವ ಮೂಲಕ ಭಗವಂತನ ಕೃಪೆಗೆ ಪಾತ್ರರಾಗಬಹುದು ಎಂದರು. ಈ ಸಂದರ್ಭದಲ್ಲಿ ಸ್ವಾಮೀಜಿಗಳು ಮನೆಯ ಒಡತಿ ಸರಸ್ವತಿಗೆ ಮನೆಯನ್ನು ಹಸ್ತಾಂತರಿಸಿ ಸಿಹಿ, ಫಲ ತಾಂಬೂಲ, ವಸ್ತ್ರಗಳನ್ನು ನೀಡಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಮುಖಂಡರುಗಳಾದ ಶ್ರೀನಿವಾಸ್, ಮಂಜುನಾಥ್, ಪಾಪಣ್ಣ, ಮಂಜಣ್ಣ, ಸೋಮು, ನಾಗು, ಎಸ್.ಡಿ.ಕಿರಣ್, ರಘು, ಕಿರಣ, ಮಹದೇವ್, ರವಿಆಚಾರ್ ಸೇರಿದಂತೆ ಹಲವರು ಇದ್ದರು.

ಚಂದನ್ ಸಾಧನೆ ಜಿಲ್ಲೆಗೆ ಹೆಮ್ಮೆ ತಂದಿದೆ: ಡಿಸಿ ಶ್ರೀರೂಪ

ಚಾಮರಾಜನಗರ, ರಾಷ್ಟ್ರೀಯ ಮಟ್ಟದ ಖೋಖೋ ಪಂದ್ಯಾವಳಿಯಲ್ಲಿ ತಮಿಳುನಾಡು ತಂಡ ವಿರುದ್ಧ ಜಯಭೇರಿ ಭಾರಿಸಿ ನಗರಕ್ಕೆ ಆಗಮಿಸಿದ ತಾಲೂಕಿನ ಸಿದ್ದಯ್ಯನಪುರದ ವಿದ್ಯಾರ್ಥಿ, ಕ್ರೀಡಾಪಟು ಚಂದನ್ ಅವರಿಗೆ ಜಿಲ್ಲಾಡಳಿತ, ನಾನಾ ಸಂಘ,ಸಂಸ್ಥೆಯ ಮುಖಂಡರು, ಸಿದ್ದಯ್ಯನಪುರ ಗ್ರಾಮಸ್ಥರು ಅದ್ದೂರಿ ಸ್ವಾಗತ ಕೋರಿ ಬರಮಾಡಿಕೊಂಡರು.

ನಗರದ ಎಲ್ ಐಸಿ ಕಚೇರಿಯ ಸಮೀಪದಲ್ಲಿ ಮೈಸೂರಿನಿಂದ ಆಗಮಿಸುತ್ತಿದ್ದಂತೆ ಪಟಾಕಿ ಸಿಡಿಸಿ, ಶಾಲು ಹೊದಿಸಿ, ಹಾರ ಹಾಕಿ, ಮೈಸೂರು ಪೇಟ ತೊಡಿಸಿ, ಪುಷ್ಪವೃಷ್ಟಿಗೈದು, ಸಿಹಿ ತಿನ್ನಿಸಿ ನಗುವಿನ ಜೈಕಾರ ಕೂಗಿ ಬರಮಾಡಿಕೊಂಡು ಸಂಭ್ರಮಿಸಿದರು. ನಂತರ ನಂಜನಗೂಡು ರಸ್ತೆ, ಸಂತೇಮರಹಳ್ಳಿ ವೃತ್ತ, ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸುಲ್ತಾನ್ ಷರೀಫ್ ವೃತ್ತ ಮೂಲಕ ಡಿವಿಯೇಷನ್ ರಸ್ತೆ, ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆಯ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಡಾಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು.

ಚಂದನ್ ಗೆಲವು ಜಿಲ್ಲೆಗೆ ಹೆಮ್ಮೆ ತಂದಿದೆ :ಜಿಲ್ಲಾಧಿಕಾರಿ ಶ್ರೀರೂಪ ಮಾತನಾಡಿ ತಾಲೂಕಿನ ಸಿದ್ದಯ್ಯನಪುರದ ಸರ್ಕಾರಿ ಶಾಲೆಯ ವಿದ್ಯಾರ್ಥಿ ಚಂದನ್ ಗುಜರಾತ್‌ನಲ್ಲಿ ನಡೆದ ರಾಷ್ಟ್ರೀಯ ಖೋಖೋ ಪಂದ್ಯಾವಳಿಯಲ್ಲಿ ವಿಜೇತರಾಗಿ ಅಂತರಾಷ್ಟ್ರೀಯ ಪಂದ್ಯಾವಳಿಗೆ ಆಯ್ಕೆಯಾಗಿರುವುದು ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ, ಮಕ್ಕಳ ಕ್ರೀಡೆಗೆ ಪ್ರೋತ್ಸಾಹ ಕೊಡಬೇಕು ಎಂದು ಹೇಳಿದರು. ಸರ್ಕಾರಿ ಶಾಲೆಗಳಲ್ಲಿ ಕ್ರೀಡೆಗೆ ಒತ್ತು ಕೊಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ವಾಲ್ಮೀಕಿ ಅಚ್ಚರಿ ಶಾಲೆಯ ಮಾದರಿಯಲ್ಲಿ ಜಿಲ್ಲೆಯಲ್ಲಿ ಕ್ರೀಡಾಶಾಲೆಗೆ ನಿರ್ಮಾಣಕ್ಕೆ ಚಿಂತಿಸಲಾಗುವುದು ಎಂದರು.

ಖುಷಿ ತಂದಿದೆ:

ಗುಜರಾತ್‌ನಲ್ಲಿ ನಡೆದ ರಾಷ್ಟ್ರೀಯ ಖೋಖೋ ಪಂದ್ಯಾವಳಿಯಲ್ಲಿ ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ಭಾಗವಹಿಸಿ ಗೆದ್ದಿರುವುದ ತುಂಬಾ ಖುಷಿ ತಂದಿದೆ. ಈ ನನ್ನ ಗೆಲವು ನಮ್ಮ ತಂದೆ, ತಾಯಿ, ದೊಡ್ಡಪ್ಪ....ಪಿಟ ಮಾಸ್ಕರ್, ಗ್ರಾಮಕ್ಕೆ ಸಲ್ಲುತ್ತದೆ ಎಂದು ರಾಷ್ಟ್ರೀಯ ಖೋಖೋ ಪಂದ್ಯಾವಳಿ ವಿಜೇತ ಚಂದನ್ ತಿಳಿಸಿದರು

ಸನ್ಮಾನ

ಭಾರತೀಯ ವಿದ್ಯಾರ್ಥಿ ಸಂಘ, ಅಖಿಲ ಭಾರತೀಯ ವೀರಶೈವ ಮಹಾಸಭಾ, ಕರ್ನಾಟಕ ಸೇನಾಪಡೆ, ಡಾ.ಬಿ.ಆರ್.ಅಂಬೇಡ್ಕರ್ ಮಹಾ ಸಭಾ, ಸಿದ್ದಯ್ಯನಪುರ ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಸಂಘ, ಸಿದ್ದಯ್ಯನಪುರ ಗ್ರಾಮಸ್ಥರಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಜಿ.ಪಂ.ಸಿಇಒ ಮೋನಾ ರೋತ್, ಡಿಡಿಪಿಐ ಚಂದ್ರಪಾಟೀಲ್, ನಿವೃತ್ತ ಡಿಡಿಪಿಐ ಮಂಜುನಾಥ್ ಪ್ರಸನ್ನ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಸಿ.ಎನ್ ರೇಣಕಾದೇವಿ, ಭರತ್ ಭೂಷಣ ಸೇರಿದಂತೆ ಇತರರು ಹಾಜರಿದ್ದರು.

ನಾಳೆ ಎಲ್‌ಐಸಿಗೆ 70 ಸಂಭ್ರಮ

ಮೈಸೂರು:ಎಲ್‌ಐಸಿ ಸ್ಥಾಪನೆಯಾಗಿ ಈಗ ಸುಮಾರು 70 ವರ್ಷಗಳಾಗಿದ್ದು, ಇದನ್ನು ನೆನಪಿಸಿಕೊಂಡು ಸಂಭ್ರಮಾಚರಿಸುವ ಕಾರ್ಯಕ್ರಮ ಜ. 19 ರಂದು ಎಲ್ಲ ಎಲ್‌ಐಸಿ ಕಚೇರಿಗಳಲ್ಲಿ ನಡೆಯಲಿದೆ. ಇದೇ ರೀತಿ ನಗರದ ಬನ್ನಿಮಂಟಪದಲ್ಲಿನ ಪ್ರಧಾನ ಕಚೇರಿ ಹಾಗು ಉಪ ಕಚೇರಿಗಳಲ್ಲಿಯೂ ಆಚರಿಸಲಾಗುವುದು ಎಂದು ವಿಮಾ ನಿಗಮ ನೌಕರರ ಸಂಘದ ಮೈಸೂರು ವಿಭಾಗದ ಅಧ್ಯಕ್ಷ ಎಸ್.ಕೆ. ರಾಮು ತಿಳಿಸಿದರು.

ಅಂದು ಮಧ್ಯಾಹ್ನ ಊಟದ ವೇಳೆ ನೌಕರರು, ಅಧಿಕಾರಿಗಳು ಗೇಟ್ ಮೀಟಿಂಗ್‌ನಲ್ಲಿ ಪಾಲ್ಗೊಂಡು ಎಲ್‌ಐಸಿಯನ್ನು ಇನ್ನಷ್ಟು ಬಲವರ್ಧನೆಗೊಳಿಸುವುದಕ್ಕೆ ಸಂಬಂಧಿಸಿದಂತೆ ಚರ್ಚಿಸುವರು. ಕಳೆದ 25 ವರ್ಷಗಳಿಂದ ಎಲ್‌ಐಸಿ ಹಲವಾರು ಖಾಸಗಿ ವಿಮಾ ಕಂಪನಿಗಳ ಪ್ರವೇಶ ಕಾರಣ ಸಾಕಷ್ಟು ಸವಾಲು ಎದುರಿಸುತ್ತಿದೆ. ಹೀಗಾಗಿ ಇದನ್ನು ನಿಭಾಯಿಸುವ ಬಗ್ಗೆ ಚರ್ಚಿಸಲಾಗುವುದೆಂದರು. ಜೊತೆಗೆ, ಎಲ್‌ಐಸಿಯಲ್ಲಿನ ಹಣ ಸುಭದ್ರ ಎಂಬುದನ್ನು ಗ್ರಾಹಕರಿಗೆ ಮನವರಿಕೆ ಮಾಡಿಕೊಡುವ ಕೆಲಸ ಸಹಾ ನಡೆಯಲಿದೆ. ಸದ್ಯದಲ್ಲಿ ಎಲ್‌ಐಸಿಯಲ್ಲಿ ಸುಮಾರು 40 ಸಾವಿರ ಮಂದಿ ಸಿಬ್ಬಂದಿ ಇದ್ದಾರೆ. 14 ಲಕ್ಷ ಏಜೆಂಟರಿದ್ದಾರೆ. ಹೀಗಾಗಿ ಈಗಿನ ಸ್ಪರ್ಧೆಗಳಲ್ಲಿ ಇವರನ್ನು ಹೇಗೆ ತೊಡಗಿಸಿಕೊಳ್ಳಬೇಕೆಂಬುದನ್ನು ಮನವರಿಕೆ ಮಾಡಿಕೊಡಲಾಗುವುದು ಎಂದು ಮಾಹಿತಿ ನೀಡಿದರು. ಇನ್ನಿತರ ಪದಾಧಿಕಾರಿಗಳಾದ ಸರ್ವಮಂಗಳ, ಎಚ್. ವಿಜಯಕುಮಾರ್, ವಿಲಿಯಂ ಸೆರಾವೋ ಇದ್ದರು.

ವೈಚಾರಿಕತೆ, ವೈಜ್ಞಾನಿಕತೆ ವಿಚಾರಗಳ ಜಾಗೃತಿ ಮೂಡಿಸಿ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿಕೆ



ಮೈಸೂರು: ವೈಚಾರಿಕತೆ ಮತ್ತು ವೈಜ್ಞಾನಿಕತೆಯಿಂದ ಕೂಡಿದ ವಿಚಾರಗಳ ಮುಖಾಂತರ ದೇಶದ ಜನರನ್ನ ಸಿದ್ದಮಾಡಬೇಕು ಎಂದು ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ ಮಹದೇವಪ್ಪ ಹೇಳಿದರು.

2026ರ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಬಹುರೂಪಿ ಬಾಬಾಸಾಹೇಬ್–ಸಮತೆಯೆಡೆಗೆ ನಡಿಗೆ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದ ಕಾರ್ಯಕ್ರಮದಲ್ಲಿ ಮಾತನಾಡಿ, ಮಹಾತ್ಮ ಜ್ಯೋತಿಬಾ ಫುಲೆ ಹಾಗೂ ಶಾಹು ಮಹಾರಾಜ್ ಅವರು ಕಟ್ಟಿದಂತಹ ಸಮಾಜ ಸತ್ಯಶೋಧ ಸಂಘಟನೆ ಮತ್ತು ಹೋರಾಟದಿಂದ ಕೂಡಿದೆ ಎಂದು ತಿಳಿಸಿದರು.

ಡಾ. ಬಿ.ಆರ್. ಅಂಬೇಡ್ಕರ್1924ರ ಜುಲೈ 20ರಂದು ಬಾಂಬೆಯಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಹಾಗೂ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಬೆಳವಣಿಗೆಗಾಗಿ 'ಬಹಿಷ್ಕೃತ ಹಿತಕಾರಿಣಿ ಸಭಾ'ವನ್ನು ಸ್ಥಾಪಿಸಿದರು ಎಂದರು.

ಸ್ವಾತಂತ್ರ್ಯ ಬಂದು 79 ವರ್ಷ ಆದರೂ ಇನ್ನು ಸಾಮಾಜಿಕ ಬಹಿಷ್ಕಾರ ಹಾಗೂ ಮರ್ಯಾದೆ ಹತ್ಯೆ ನಡೆಯುತ್ತಲೇ ಇದೆ. ಇದಕ್ಕಾಗಿಯೇ ಒಂದು ಕಾಯ್ದೆ ಮಾಡಬೇಕಾಗಿದೆ ಎಂದು ಹೇಳಿದರು.

ವಿಧಾನ ವಿಧಾನ ಪರಿಷತ್ ಸದಸ್ಯ ಡಾ.ಕೆಶಿವ ಕುಮಾರ್ ಮಾತನಾಡಿ ದೇಶದಲ್ಲಿ ಪ್ರಜಾಪ್ರಭುತ್ವ ವನ್ನು ಗಟ್ಟಿಗೊಳಿಸುವ ಕೆಲಸವಾಗಬೇಕು. ಜಾತಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕೊನೆಗೊಳಿಸುವ ಕಡೆ ಚಿಂತಿಸಬೇಕು. ಆಗ ಮಾತ್ರ ಸಮಾಜದಲ್ಲಿ ಶಾಂತಿ ನೆಮ್ಮದಿ ನೆಲೆಯಾಗುತ್ತದೆ ಎಂದರು. .

ಈ ಬಾರಿ ಮೈಸೂರಿನಲ್ಲಿ ಆಯೋಜಿಸಿರುವ ಬಹುರೂಪಿ ನಾಟಕವು ಉತ್ತಮ ಸಂದೇಶ ನೀಡುತ್ತಿದ್ದು, ದೇಶಾದ್ಯಂತ ಇಂತಹ ಕಾರ್ಯಕ್ರಮಗಳು ನಡೆಯಬೇಕು. ಬುದ್ದಿಜೀವಿಗಳಿಂದ ವಿದ್ಯಾರ್ಥಿಗಳು ದೇಶದ ಪ್ರಜಾಪ್ರಭುತ್ವವನ್ನು ಉಳಿಸಬೇಕಾಗಿದೆ ಎಂದು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಮಾತನಾಡಿ ಡಾ. ಬಿ.ಆರ್. ಅಂಬೇಡ್ಕರ್ ಸಾಮಾನ್ಯ ವ್ಯಕ್ತಿ ಶಿಕ್ಷಣದಿಂದ ಎಷ್ಟೊಂದು ಬದಲಾದರು ಎಂದು ನಾವು ತಿಳಿದುಕೊಳ್ಳಬೇಕು. ಶಿಕ್ಷಣ ಜೀವನವನ್ನು ಬದಲಾವಣೆ ಮಾಡುತ್ತದೆ, ಹಾಗೆಯೇ ತುಂಬಾ ಚೆನ್ನಾಗಿ ಶಿಕ್ಷಣ ಪಡೆದರೆ ಏನೆಲ್ಲಾ ಆಗಬಹುದು ಎನ್ನುವುದಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ಅವರೇ ಉದಾಹರಣೆ ಎಂದು ಹೇಳಿದರು. ದಿ ವೈರ್ ಸಂಸ್ಥಾಪಕ ಸಂಪಾದಕ ಸಿದ್ಧಾರ್ಥ ವರದರಾಜನ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಎಸ್.ನರೇಂದ ್ರಕುಮಾರ್, ರಂಗಾಯಣದ ಉಪ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮತ್ತಿತರರು ಉಪಸ್ಥಿತರಿದ್ದರು.

ಅನಿಷ್ಠ ಪದ್ಧತಿಗಳೆಂಬ ಗಾಯಕ್ಕೆ ಸಂವಿಧಾನ ಔಷಧ

ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿ ಲಕ್ಷಾಂತರ ಜನ, ಕವಿ, ಲೇಖಕ, ಕಲಾವಿದ, ಹಾಡುಗಾರರು, ಚಲನಚಿತ್ರ ನಿರ್ದೇಶಕ, ನಟ, ಚಿಂತಕ, ವಿದ್ವಾಂಸರು ಬಾಬಾ ಸಾಹೇಬರ ಪ್ರಭಾವದಿಂದ ತಮ್ಮ ತಮ್ಮ ಅಭಿವ್ಯಕ್ತಿ ಮಾಧ್ಯಮಗಳ ಮೂಲಕ ತಮ್ಮ ಅಭಿವ್ಯಕ್ತಿಗಳನ್ನ ಕಟ್ಟಿಕೊಳ್ಳುತ್ತಾ ಇದ್ದಾರೆ. ಪ್ರತಿರೋಧ ಹಾಗೂ ಉಪಾಶಕುನ ಈ ಎರಡು ಕೂಡ ಅಭಿವ್ಯಕ್ತಿಗಳಲ್ಲಿ ಬಹಳ ಗಟ್ಟಿಯಾಗಿ ಕಾಣಿಸುತ್ತ ಬಂದಿದೆ. ಸಮಾಜದ ಅನಿಷ್ಠ ಪದ್ಧತಿಗಳಿಂದ ಜನರಿಗೆ ಆದ ಗಾಯಗಳಿಗೆ ಔಷಧಿಯನ್ನು ಬಾಬಾ ಸಾಹೇಬರು ನೀಡಿದ ಸಂವಿಧಾನದಿಂದ ಹಚ್ಚಲಾಗಿದೆ. ಮುಂದೆ ಆಗುವ ಪ್ರತಿರೋದ ಗಾಯಗಳಿಗೆ ಬಾಬಾ ಸಾಹೇಬರ ಮಾರ್ಗದ ಮೂಲಕವೇ ಕಂಡುಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ರಾಮ–ಸೀತಾ ಇತಿಹಾಸ ಪ್ರತಿಯೊಬ್ಬರೂ ತಿಳಿಯಬೇಕಿದೆ

ಕೆ.ಆರ್.ನಗರ : ಶ್ರೀರಾಮ ಮತ್ತು ಸೀತಾಮಾತೆಯ ಇತಿಹಾಸವನ್ನು ಪ್ರತಿಯೊಬ್ಬರು ತಿಳಿಯಬೇಕು ಎಂದು ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರ ಸ್ವಾಮೀಜಿ ತಿಳಿಸಿದರು. ಚುಂಚನಕಟ್ಟೆ ಜಾತ್ರೆಯಲ್ಲಿ ಆಯೋಜಿಸಿದ ಧಾರ್ಮಿಕ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಇತಿಹಾಸ ಪೂರ್ವ ಚುಂಚನಕಟ್ಟೆ ಈ ಕ್ಷೇತ್ರಕ್ಕೆ ಶ್ರೀರಾಮ ಮತ್ತು ಸೀತಾ ಮಾತೆ ಹಾಗೂ ಲಕ್ಷ್ಮಣ ಇವರು ಬಂದ ಸಂದರ್ಭದಲ್ಲಿ ನಡೆದ ಘಟನೆ ಮತ್ತು ಪವಾಡಗಳ ಚರಿತ್ರೆಯನ್ನು ಪ್ರತಿಯೊಬ್ಬ ಭಕ್ತರು ತಿಳಿಯಬೇಕಿದೆ. ಅಂತಹ ಸತ್ಯ ಘಟನೆಗಳು ಇಂದಿಗೂ ನಮ್ಮ ಕಣ್ಮುಂದೆ ನಡೆಯುತ್ತಿರುವುದು ಆಶ್ಚರ್ಯ ಅದ್ಭುತ. ಏಕೆಂದರೆ ಶ್ರೀರಾಮ ಬ್ರಹ್ಮ ರಥೋತ್ಸವದಂದೇ ಆಕಾಶದಿಂದ ನೇರವಾಗಿ ಬಂದ ಗರುಡಗಳು ಶ್ರೀ ರಾಮನ ಪ್ರಸಾದ ಸ್ವೀಕರಿಸುತ್ತದೆ ಎಂದರೆ ಇದು ಕಟ್ಟುಕಥೆ ನಾ ಕಣ್ಮುಂದೆ ಕಾಣುತ್ತಿರುವ ಸತ್ಯ ಘಟನೆ ಅಲ್ಲವೇ ಹಾಗಾಗಿ ಈ ಕ್ಷೇತ್ರ ಪುಣ್ಯಕ್ಷೇತ್ರವಾಗಿದ್ದು ಇಲ್ಲಿ ಆಗಮಿಸಿ ದೇವರ ದರ್ಶನ ಪಡೆದ ಎಲ್ಲರೂ ಪುಣ್ಯವಂತರೆ ಎಂದರು.

ಶ್ರೀರಾಮ ಬ್ರಹ್ಮ ರಥೋತ್ಸವದ ಅಂಗವಾಗಿ ಶ್ರೀರಾಮ ದೇವಸ್ಥಾನದ ಆವರಣದಲ್ಲಿ ಆಯೋಜಿಸಿದ ಧಾರ್ಮಿಕ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಶಾಸಕ ಡಿ ರವಿಶಂಕರ್ ಇಂತಹ ಪುಣ್ಯಕ್ಷೇತ್ರದಲ್ಲಿ ನಡೆಯುತ್ತಿರುವ ಶ್ರೀರಾಮ ರಥೋತ್ಸವಕ್ಕೆ ಆಗಮಿಸಿ ಪಂಚ ಸ್ವಾಮಿಜಿಗಳ ಅಮೃತಾಸ್ಥದಿಂದ ದೇವರ ವಿಶೇಷ ಪೂಜೆ ಸಲ್ಲಿಸಿದ್ದು ನನ್ನ ಸೌಭಾಗ್ಯ. ಸ್ವಾಮೀಜಿಗಳ ಮಾರ್ಗದರ್ಶನದಲ್ಲಿ ಈ ಕ್ಷೇತ್ರ ಅಭಿವೃದ್ಧಿಪಡಿಸುವುದು ನನ್ನ ಜವಾಬ್ದಾರಿ ಎಂದರು. ಯಾವುದೇ ಸಮಸ್ಯೆಗಳು ಉಂಟಾಗದ ರೀತಿಯಲ್ಲಿ ಧಾರ್ಮಿಕ ದತ್ತಿ ಮತ್ತು ತಾಲೂಕು ಆಡಳಿತ ಹಾಗೂ ಪೊಲೀಸ್ ಇಲಾಖೆ ಹೆಚ್ಚು ಜವಾಬ್ದಾರಿ ತೆಗೆದುಕೊಂಡು ಕಾರ್ಯಕ್ರಮ ಯಶಸ್ವಿ ಮಾಡಿಕೊಟ್ಟಿದ್ದ ಎಲ್ಲ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಸ್ವಾಮೀಜಿಗಳು ಮತ್ತು ಭಕ್ತಾದಿಗಳಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ಪಂಚ ಸ್ವಾಮೀಜಿಗಳು ಮತ್ತು ತಾಲೂಕು ಆಡಳಿತ ಹಾಗೂ ಇನ್ನಿತರ ಮುಖಂಡರು ಇಲಾಖಾಧಿಕಾರಿಗಳನ್ನು ಸನ್ಮಾನಿಸಿ ಗೌರವಿಸಿದರು. ಪ್ರತಿವರ್ಷಕ್ಕಿಂತ ಈ ವರ್ಷ ಭಕ್ತಾದಿಗಳ ಸಂಖ್ಯೆ ಹೆಚ್ಚಾಗಿ ಆಗಮಿಸಿದ್ದು ಈ ದೇವರ ಶಕ್ತಿ ಆಗಿದೆ ಎಂದರು.

ದಾವಣಗೆರೆ ಮಠದ ಸ್ವಾಮೀಜಿ ಹಾಗೂ ಬೆಟ್ಟದಪುರ ಮಠದ ಸ್ವಾಮೀಜಿ ಮತ್ತು ಮೈಸೂರು ಚಾಮರಾಜನಗರ ಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡ ಸ್ವಾಮಿಗೌಡ ಇವರು ಮಾತನಾಡಿದರು. ಧಾರ್ಮಿಕ ಕಾರ್ಯಕ್ರಮಕ್ಕೂ ಮುಂಚೆ ಶಾಸಕ ಡಿ ರವಿಶಂಕರ್ ಅವರು ಕುಟುಂಬ ಸಮೇತರಾಗಿ ಆಗಮಿಸಿ ಶ್ರೀರಾಮನಿಗೆ ವಿಶೇಷ ಪೂಜೆ ಸಲ್ಲಿಸಿದರು.

ಸಂದರ್ಭದಲ್ಲಿ ಸಾಲಿಗ್ರಾಮ ತಹಸಿಲ್ದಾರ್ ರುಕಿಯಾ ಬೇಗಂ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ ಎಸ್ .ಮಹದೇವ್, ಉದಯ್ ಶಂಕರ್, ನಗರ ಅಧ್ಯಕ್ಷ ಪ್ರಭಾಕರ್, ವಕ್ತಾರ ಜಬೀರ್, ಕಾಂಗ್ರೆಸ್ ಎಸ್ ಟಿ ಘಟಕದ ಅಧ್ಯಕ್ಷ ತಿಪ್ಪೂರ್ ಮಹದೇವ್, ಕಲ್ಲಹಳ್ಳಿ ಶ್ರೀನಿವಾಸ್,ಮಾಜಿ ತಾಪಂ ಅಧ್ಯಕ್ಷ ಹಾಡ್ಯ ಮಹದೇವಸ್ವಾಮಿ, ಚಂದು, ಗಂಧನಹಳ್ಳಿ ಹೇಮಂತ್, ಇನ್ಸ್ಪೆಕ್ಟರ್ ಶಶಿಕುಮಾರ್, ಶಿವಪ್ರಸಾದ್, ಪಾಲ್ ಪತ್ತೆದಾರ ಯತಿರಾಜ್. ಹನಸೋಗೆ ನವೀನ್,ಗ್ರಾಪಂ ಸದಸ್ಯ ಹೇಮಂತ್, ಪತ್ರಕರ್ತರ ಸಂಘದ ಅಧ್ಯಕ್ಷ ವಿನಯ್, ಉಪಾ ತಹಸಿಲ್ದಾರ್ ಮಹೇಶ್, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಮುಖಂಡರು ಇದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ಅರುಣ್ ಕುಮಾರ್ ಸೂಚನೆ

ಗ್ಯಾರಂಟಿ ಯೋಜನೆ ಅರ್ಹರಿಗೆ ತಲುಪಲಿ

ಮೈಸೂರು: ಸರ್ಕಾರವು 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದು ಕಳೆದ ಎರಡೂವರೆ ವರ್ಷದಿಂದ ಫಲಾನುಭವಿಗಳಿಗೆ ತಲುಪುತ್ತಿದ್ದು, ಪಾರದರ್ಶಕವಾಗಿ ಅರ್ಹರಿಗೆ ಸೌಲಭ್ಯಗಳು ಫಲಾನುಭವಿಗಳಿಗೆ ತಲುಪ ಬೇಕು ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ಅರುಣ್ ಕುಮಾರ್ ತಿಳಿಸಿದರು.

ಜಿಲ್ಲಾ ಪಂಚಾಯತ್ ಡಿ ದೇವರಾಜು ಅರಸು ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪ್ರಾಧಿಕಾರ ಸ್ಥಾಪನೆ ಆದ ನಂತರದಿಂದ ಇದುವರೆಗೂ 9 ಸಭೆಗ ಳನ್ನು ನಡೆಸಲಾಗಿದೆ. ಜಿಲ್ಲೆಯಲ್ಲಿ ಗ್ಯಾರಂಟಿ ಯೋಜ ನೆಗಳು ಯಶಸ್ವಿಯಾಗಿ ಜಾರಿಗೆ ಬಂದಿದ್ದು, ಪಾರದರ್ಶ ಕವಾಗಿ ಫಲಾನುಭವಿಗಳಿಗೆ ತಲುಪುತ್ತಿವೆ ಎಂದು ಹೇಳಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷ ಪ್ರೊ.ಶಿವಕುಮಾರ್ ಮಾತನಾಡಿ ಜಿಲ್ಲಾ ಕೌಶಲ್ಯಾಭಿ ವೃದ್ಧಿ ಇಲಾಖೆಯ ವತಿಯಿಂದ ನಿರುದ್ಯೋಗ ಯುವಕ ಯುವತಿಯರಿಗೆ ತರಬೇತಿ ನೀಡಿ ಅವರಿಗೆ ಅವರು ಉತ್ತಮ ಕಂಪನಿಗಳಲ್ಲಿ ಕೆಲಸ ಪಡೆದುಕೊಳ್ಳುವಂತೆ ತರಬೇತಿಗೊಳಿಸಬೇಕೆಂದರು.

ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಇಲಾಖೆಯ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿ, ಯುವನಿಧಿ ಯೋಜನೆಗೆ ಪದವಿ 14913 ಮತ್ತು ಡಿಪ್ಲೊಮೊ 204 ಅಭ್ಯರ್ಥಿಗಳು ಸೇರಿದಂತೆ ಒಟ್ಟು 15117 ಅಭ್ಯರ್ಥಿಗಳು ಇದುವರೆಗೂ ನೋಂದಣಿ ಆಗಿ ದ್ದಾರೆ. ನವೆಂಬರ್ 2024 ರವರೆಗೂ ಡಿಬಿಟಿ ಆಗಿದೆ. ಇದುವರೆಗೂ 24 ಕಂತುಗಳ ಹಣ ಪಾವತಿ ಆಗಿದೆ. ಗೃಹ ಲಕ್ಷ್ಮಿ ಯೋಜನೆಯಡಿ ಜಿಲ್ಲೆಯಲ್ಲಿ 696080 ಫಲಾನುಭವಿಗಳು ನೋಂದಣಿಯಾಗಿ ದ್ದಾರೆ. ಸೆಪ್ಟೆಂ ಬರ್ ಅಂತ್ಯದ ವೇಳೆಗೆ 672538 ಫಲಾನುಭವಿಗಳಿಗೆ ಪಾವತಿಯಾಗಿದ್ದು ಶೇ. 97 ರಷ್ಟು ಸಾಧನೆ ಆಗಿದೆ ಎಂದರು. ಗೃಹ ಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ ಅರ್ಹರಿರುವ ಗ್ರಾಹಕರ ಸಂಖ್ಯೆ 967567 ಇದ್ದು ಇದರಲ್ಲಿ 963342 ಫಲಾನುಭವಿಗಳು ನೋಂದಣಿಯಾಗಿದ್ದು, ಸೌಲಭ್ಯವನ್ನು ಪಡೆಯುತ್ತಿದ್ದಾರೆ. ನೋಂದಣಿಗೆ 4225 ಫಲಾನುಭವಿಗಳು ಬಾಕಿ ಇದೆ. ಅನ್ನ ಭಾಗ್ಯ ಯೋಜನೆಯಡಿ ಜಿಲ್ಲೆಯಲ್ಲಿ 814836 ಪಡಿತರ ಚೀಟಿಗಳು ಇದ್ದು, 22,21,714 ಫಲಾನುಭವಿಗಳಿಗೆ ಪಡಿತರ ವಿತರಣೆ ಮಾಡಲಾಗುತ್ತಿದೆ. ಶಕ್ತಿ ಯೋಜನೆ ಜಾರಿಗೆ ಬಂದಾಗಿನಿಂದ ಡಿಸೆಂಬರ್ ಅಂತ್ಯದವರೆಗೆ ಜಿಲ್ಲೆಯಲ್ಲಿ 58.38 ಕೋಟಿ ಪ್ರಯಾಣಿಕರು ಪ್ರಯಾಣ ಮಾಡಿದ್ದು ಇದರಲ್ಲಿ 39.92 ಕೋಟಿ ಪ್ರಯಾಣಿಕರು ಪ್ರಯಾಣ ಮಾಡಿದ್ದಾರೆ. ಶಕ್ತಿ ಯೋಜನೆಯಡಿ ಶೇ. 68.39 ರಷ್ಟು ಪ್ರಯಾಣಿಕರು ಶಕ್ತಿ ಯೋಜನೆಯಡಿ ಉಚಿತ ಪ್ರಯಾಣ ಮಾಡಿದ್ದಾರೆ. ಶಕ್ತಿ ಯೋಜನೆಯ ಪ್ರಯಾಣಿಕರಿಂದ 1022.72 ಕೋಟಿ ಸಾರಿಗೆ ಆದಾಯ ಬಂದಿದೆ ಎಂದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವ ಹಣಾಧಿಕಾರಿ ಎಸ್.ಯುಕೇಶ್ ಕುಮಾರ್, ಜಿಲ್ಲಾ ಗ್ಯಾರಂಟಿ ಯೋಜನೆ ಪ್ರಾಧಿಕಾರದ ಉಪಾಧ್ಯಕ್ಷ ಹುಣಸೂರು ಬಸವಣ್ಣ ಸೇರಿ ಇತರರು ಉಪಸ್ಥಿತರಿದ್ದರು.

20ರಂದು ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರತಿಭಟನೆ

ಚಾಮರಾಜನಗರ: ಶಾಲಾ ಮಾನ್ಯತೆ ನವೀಕರಣ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಚಾಮರಾಜನಗರ ಜಿಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟವು ಜ.20 ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಗೌರವ ಅಧ್ಯಕ್ಷ ಬಾಲಸುಬ್ರಹ್ಮಣ್ಯಂ ತಿಳಿಸಿದರು

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಅಂದು ಬೆಳಿಗ್ಗೆ10 ಗಂಟೆಗೆ ಮೆರವಣಿಗೆ ಹೊರಟು ಬಿ.ರಾಚಯ್ಯಜೋಡಿ ರಸ್ತೆಯ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಜಿಲ್ಲಾಧಿಕಾರಿ ಗಳಿಗೆ ಮನವಿ ಸಲ್ಲಿಸಲಾಗುತ್ತದೆ ಈ.ಪ್ರತಿಭಟನೆಯಲ್ಲಿ ಜಿಲ್ಲೆಯ ಖಾಸಗಿ ಶಿಕ್ಷಣ ಸಂಸ್ಥೆಗಳು ಮುಖ್ಯಸ್ಥರು, ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿ ಕೊಡಬೇಕು ಎಂದು ಮನವಿ ಮಾಡಿದರು.

ಶಾಲೆಗಳಿಗೆ ಭೂ ಪರಿವರ್ತನೆ ನಿಯಮವನ್ನು ಸಂಪೂರ್ಣವಾಗಿ ಕೈಬಿಡಬೇಕು.ಶಾಲೆಗಳಿಂದ ತೆರಿಗೆ ಸೆಸ್ ಮಾತ್ರ ಪಡೆಯಬೇಕು. ಭೂ ಪರಿವರ್ತನೆ ಶುಲ್ಕ ವಿಧಿಸಬಾರದು. ಕೋರ್ಟ್‌ನ ಇತ್ತೀಚಿನ ಆದೇಶದಂತೆ 15 ಮೀಟರ್‌ಗಿಂತ ಕಡಿಮೆ ಎತ್ತರದ ಕಟ್ಟಡಗಳಿಗೆ ಸರಳ ಅಗ್ನಿ ಸುರಕ್ಷತಾ ನಿಯಮಗಳನ್ನು ಅನ್ವಯಿಸಬೇಕು. ಮಾನ್ಯತೆ ನವೀಕರಣ ಪ್ರಕ್ರಿಯೆಯನ್ನು ಏಕಗವಕ್ಷಿ ಯೋಜನೆಯಡಿ ಜಾರಿಗೆ ತರಬೇಕು.ಎಲ್ಲಾ ಶಾಲೆಗಳಿಗೂ ಮಾನ್ಯತೆ ನವೀಕರಣವನ್ನು ಕನಿಷ್ಠ 10 ವರ್ಷಗಳ ಅವಧಿಗೆ ನೀಡಬೇಕು. ಆರ್.ಟಿ.ಇ ಯೋಜನೆಯಡಿ ಬಾಕಿ ಇರುವ ಸಂಪೂರ್ಣ ಹಣವನ್ನು ತಕ್ಷಣ ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿದರು. ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ಅಧ್ಯಕ್ಷ ಎಲ್.ಲಿಂಗರಾಜು, ಗೌರವ ಅಧ್ಯಕ್ಷ ರಾಜೇಂದ್ರ, ಖಜಾಂಚಿ ಮೋಹನ ಕುಮಾರ್, ನಿಕಟಪೂರ್ವ ಅಧ್ಯಕ್ಷ ನಂಜುಂಡಸ್ವಾಮಿ, ಪ್ರಧಾನ ಕಾರ್ಯದರ್ಶಿ ಮಂಜುನಾಥ್, ಕಾರ್ಯದರ್ಶಿ ಮಹೇಶ್, ಜ್ಞಾನದೀಪ ಶಾಲೆಯ ಕಾರ್ಯದರ್ಶಿ ಆರ್.ಪಿ.ನಂಜುಂಡಸ್ವಾಮಿ ವಿವೇಕಾನಂದ ಸಂಸ್ಥೆಯ ಕಾರ್ಯದರ್ಶಿ ಸುರೇಶ್ ನಾಯ್ಡು ಹಾಜರಿದ್ದರು.

ಶಾಸಕ, ಸಂಸದರಿಗೆ ಪತ್ರಕರ್ತರ ಮನವಿ

ಪತ್ರಿಕೋದ್ಯಮ ವಿಭಾಗ ತೆರೆಯುವಂತೆ ಮನವಿ

ಎಚ್.ಡಿ.ಕೋಟೆ: ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ನಂತರ ಪತ್ರಿಕಾ ಮಾಧ್ಯಮಕ್ಕೂ ಹೆಚ್ಚಿನ ಮಹತ್ವ ನೀಡಲಾಗಿದೆ. ಪ್ರಜಾಪ್ರಭುತ್ವದ ನಾಲ್ಕನೆ ಅಂಗವಾಗಿ ಪತ್ರಿಕಾ ಮಾಧ್ಯಮವಿರುವುದರಿಂದ, ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪದವಿ ವಿದ್ಯಾರ್ಥಿಗಳಿಗೆ ಪತ್ರಿಕೋದ್ಯಮ ಕೋರ್ಸ್ ತೆರೆಯುವಂತೆ ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ಅಧ್ಯಕ್ಷ ರಮೇಶ್, ಉಪಾಧ್ಯಕ್ಷ ಸೋಮೇಶ್, ಕಾರ್ಯದರ್ಶಿ ಶಿವಲಿಂಗ, ನಿರ್ದೇಶಕರಾದ ಉಮೇಶ್ ಬಿ ನೂರಲಕುಪ್ಪೆ, ತುಂಬಸೋಗೆ ಶಿವಕುಮಾರ, ತಿಮ್ಮರಾಜು, ಕಬಿನಿ ಗೋವಿಂದ್ ರಾಜ್ ಅವರು ಸಂಸದ ಸುನೀಲ್ ಬೋಸ್ ಹಾಗೂ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ನೂತನ ಕಟ್ಟಡ ಉದ್ಘಾಟನೆ ಕಾರ್ಯಕ್ರಮದಲ್ಲಿ ಮನವಿ ಸಲ್ಲಿಸಿದರು.

ಮನವಿ ಸ್ವೀಕರಿಸಿ ಸಂಸದರು, ಶಾಸಕರು ಮಾತನಾಡಿ, ಪತ್ರಿಕಾ ಕ್ಷೇತ್ರವೂ ಮಹತ್ವ ಪಡೆದಿರುವುದರಿಂದ ಪತ್ರಿಕೋದ್ಯಮ ಕೋರ್ಸ್ ತೆರೆಯಲು ಉನ್ನತ ಶಿಕ್ಷಣ ಸಚಿವ, ಶಿಕ್ಷಣ ಸಚಿವರೊಂದಿಗೆ ಚರ್ಚಿಸಿ ಕ್ರಮವಹಿಸಲಾಗುವುದು. ಬಿಎಸ್ಸಿ ಓದುವ ವಿದ್ಯಾರ್ಥಿಗಳು ಮೈಸೂರಿಗೆ ತೆರಳಬೇಕಿತ್ತು. ಈ ವೇಳೆ ಸಮಯದ ಹೊಂದಾಣಿಕೆ ಹಾಗೂ ಇತರೆ ತೊಂದರೆಗಳನ್ನು ಮನಗಂಡು ಪ್ರಸಕ್ತ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಎಸ್ಸಿ ಕೋರ್ಸ್ ಆರಂಭಿಸಲಾಗಿದೆ. ಪತ್ರಿಕೋದ್ಯಮ ಕೋರ್ಸ್ ತೆರೆಯುವ ಸಂಬಂಧ ಮುಂದಿನ ವಾರ ತಾಲೂಕಿಗೆ ಆಗಮಿಸುವ ಶಿಕ್ಷಣ ಸಚಿವ ಮಧುಬಂಗಾರಪ್ಪ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರೊಟ್ಟಿಗೆ ಚರ್ಚಿಸಿ, ಮಾರ್ಚ್ ತಿಂಗಳಲ್ಲಿ ಮಂಡನೆಯಾಗುವ ರಾಜ್ಯ ಬಜೆಟ್ ನಲ್ಲಿ ಸೇರಿಸಲಾಗುವುದು. ಮುಂದಿನ ದಿನಗಳಲ್ಲಿ ಈ ಕಾಲೇಜಿನಲ್ಲಿ ಪತ್ರಿಕೋದ್ಯಮ ತರಗತಿಗಳು ನಡೆಯಲಿವೆ ಎಂದು ಶಾಸಕ ಅನಿಲ್ ಚಿಕ್ಕಮಾದು ಹಾಗೂ ಸಂಸದ ಸುನಿಲ್ ಬೋಸ್ ಭರವಸೆ ನೀಡಿದರು. ಪುರಸಭೆ ಮಾಜಿ ಸದಸ್ಯ ಎಚ್.ಸಿ ನರಸಿಂಹಮೂರ್ತಿ, ಜೀವಿಕ ಬಸವರಾಜ್, ಭಾಗ್ಯಲಕ್ಷ್ಮಿ ನಿಂಗರಾಜ್, ಪ್ರಾಂಶುಪಾಲರಾದ ಅರುಣ್ ಕುಮಾರ್, ಸಿದ್ದರಾಮೇಗೌಡ ಸೇರಿದಂತೆ ಅನೇಕರಿದ್ದರು.

ಗಣರಾಜ್ಯೋತ್ಸವ ಪರೇಡ್‌ಗೆ ಮುದ್ರಾ ಯೋಜನೆ ಫಲಾನುಭವಿ

2019–2025ರವರೆಗೆ ಜಿಲ್ಲೆಯಲ್ಲಿ 10 ಸಾವಿರ ಕೋಟಿ ರೂ. ಸಾಲ: ಶಾಸಕ ಶ್ರೀವತ್ಸ

ಮೈಸೂರು: ಕೇಂದ್ರ ಸರ್ಕಾರದ 'ಮುದ್ರಾ' ಯೋಜನೆಯಡಿ ಸಾಲ ಪಡೆದು ಸಣ್ಣಉದ್ಯಮ ನಡೆಸುತ್ತಿರುವ ನಗರದ ರಾಮ ಕೃಷ್ಣನಗರ 'ಎಚ್' ಬ್ಲಾಕ್ ನಿವಾಸಿ ಸರಸ್ವತಿ ಎಂ. ಅವರನ್ನು ಜ.26ರಂದು ನವದೆಹಲಿಯಲ್ಲಿ ನಡೆಯುವ ಗಣರಾಜ್ಯೋ ತ್ಸವ ಪರೇಡ್‌ನಲ್ಲಿ ಪಾಲ್ಗೊಳ್ಳಲು ಆಹ್ವಾನಿಸಲಾಗಿದೆ.

ಆರ್ಥಿಕ ಒಳಗೊಳ್ಳುವಿಕೆ ವಿಭಾಗದಿಂದ ಅವರನ್ನು ಆಹ್ವಾನಿಸಲಾಗಿದೆ. ತಂಡದ ಪಿ.ಪುಷ್ಪಾ ಅವರನ್ನೂ ಕರೆದುಕೊಂಡು ಬರುವಂತೆ ತಿಳಿಸಲಾಗಿದೆ.

ಈ ಫಲಾನುಭವಿಗಳನ್ನು ಇಲ್ಲಿನ ಬಿಜೆಪಿ ಕಚೇರಿಯಲ್ಲಿ ಸನ್ಮಾನಿಸಲಾಯಿತು.ಈ ವೇಳೆ ಮಾತನಾಡಿದ ಶಾಸಕ ಟಿ.ಎಸ್. ಶ್ರೀವತ್ಸ, 'ಮುದ್ರಾ ಯೋಜನೆಯಲ್ಲಿ ಜಿಲ್ಲೆಗೆ 2019ರಿಂದ 2025ರವರೆಗೆ ರೂ. 10ಸಾವಿರ ಕೋಟಿ ಸಾಲ ದೊರೆತಿದೆ. ಇದರಲ್ಲಿ 2025ರ ಏ.1ರಿಂದ ಅಕ್ಟೋ ಬರ್ 31ರವರೆಗೆ ರೂ. 3ಸಾವಿರ ಕೋಟಿ ನೀಡಲಾಗಿದೆ. 5.60 ಲಕ್ಷ ಮಂದಿ



ಫಲಾನುಭವಿಗಳಾಗಿ ಹಣಕಾಸಿನ ನೆರವು ಪಡೆದಿದ್ದಾರೆ ಎಂದು ತಿಳಿಸಿದರು.

ಗಣರಾಜ್ಯೋತ್ಸವ ಪರೇಡ್‌ಗೆ ಸರಸ್ವತಿ ಅವರನ್ನು ಆಹ್ವಾನಿಸಲಾಗಿದೆ. ಅವರು ಮೂರು ಬಾರಿ ಹಣಕಾಸಿನ ನೆರವು ಪಡೆದು ಸಕಾಲದಲ್ಲಿ ಸಾಲ ಪಾವತಿಸಿದ್ದಾರೆ. ಹೊಲಿಗೆ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಮನೆಯ ಮೇಲೆ ಬೊಟಿಕ್ ಇಟ್ಟುಕೊಂಡಿದ್ದಾರೆ. ಯೂನಿಯನ್ ಬ್ಯಾಂಕ್ ಮೂಲಕ ಹಣಕಾಸಿನ ನೆರವು ಪಡೆದುಕೊಂಡಿ ದ್ದಾರೆ. ಅವರು ದೆಹಲಿಗೆ ಹೋಗಿ ಬರಲು ತಗಲುವ ಖರ್ಚನ್ನು ಸರ್ಕಾರ ನೋಡಿಕೊಳ್ಳುತ್ತದೆ ಎಂದು ಹೇಳಿದರು.

ಸಹಕಾರಿಯಾಗಿದೆ: "ಈ ಮೂಲಕ ಮಹಿಳೆಯರಿಗೆ ಗೌರವ ಸಲ್ಲಿಸುವ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ ಎಂದರು. ಬಿಜೆಪಿ ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಲ್. ನಾಗೇಂದ್ರ, ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಪದಾಧಿಕಾರಿಗಳಾದ ಸೋಮಸುಂದರ್, ಎಂ.ಎ. ಮೋಹನ್, ಮಹೇಶ್‌ರಾಜೇ ಅರಸ್ ಪಾಲ್ಗೊಂಡಿದ್ದರು.

> ರಾಜಕೀಯಕ್ಕಾಗಿ ಮಾತನಾಡುತ್ತಿಲ್ಲ, ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಖಂಡಿಸಿ ಪ್ರತಿಭಟಿಸುತ್ತಿರುವ ಈ ವೇಳೆಯಲ್ಲಿ ಕೇಂದ್ರ ಸರ್ಕಾರ ಸಾಮಾನ್ಯ ಮಹಿಳೆಗೆ ಮುದ್ರಾ ಯೋಜನೆ ನೇರವು ಸಹಕಾರ ನೀಡಿದೆ. ಮಾತ್ರವಲ್ಲದೆ, ಗಣರಾಜ್ಯೋತ್ಸವದಲ್ಲಿ ಭಾಗವಹಿಸಲು ಗೌರವಯುತವಾಗಿ ಆಹ್ವಾನ ನೀಡುವ ಮೂಲಕ ಮೈಸೂರಿನ ಹೆಮ್ಮೆ ಇಮ್ಮಡಿಗೊಳಿಸಿದೆ.
>
> –**ಶ್ರೀವತ್ಸ** ಶಾಸಕ

ಸ್ವಾವಲಂಬಿ ಬದುಕಿಗೆ ಸಹಕಾರಿ: ಫಲಾನುಭವಿ ಸರಸ್ವತಿ

ಸರಸ್ವತಿ ಮಾತನಾಡಿ, ನನ್ನನ್ನು ಗುರುತಿಸಿ ಗೌರವಿಸುತ್ತಿರುವುದಕ್ಕೆ ವಂದಿಸುತ್ತೇನೆ. ಮುದ್ರಾ ಯೋಜನೆಯಿಂದ ತುಂಬಾ ಅನುಕೂಲವಾಗಿದೆ. ಸ್ವಾವಲಂಬಿ ಬದುಕು ರೂಪಿಸಿಕೊಳ್ಳಲು ಸಹಕಾರಿಯಾಗಿದೆ. ಸಣ್ಣ ಉದ್ಯಮದಿಂದ ಇಬ್ಬರಿಂದ ಮೂವರಿಗೆ ಕೆಲಸ ಕೊಟ್ಟಿದ್ದೇನೆ. ಇದು ಹೆಮ್ಮೆ ಮೂಡಿಸಿದೆ ಎಂದು ಹೇಳಿದರು. ಪ್ರಧಾನಿ ನರೇಂದ್ರ ಮೋದಿ ಅವರು ಮುದ್ರಾ ಯೋಜನೆಗೆ ಚಾಲನೆ ನೀಡಿದ ಹೊಸದರಲ್ಲೇ ನಾನು ರೂ. 2.25 ಲಕ್ಷ ಸಾಲ ತೆಗೆದುಕೊಂಡಿದ್ದೆ. ಈಗ ರೂ. 10 ಲಕ್ಷ ಸಾಲ ಪಡೆದುಕೊಂಡಿದ್ದೇನೆ ಎಂದು ತಿಳಿಸಿದರು. ಸಣ್ಣ ಬಾಡಿಗೆ ಮನೆಯಲ್ಲಿದ್ದೆ. ಸಾಲ ಮಾಡಿ ಸ್ವಂತ ಮನೆ ತೆಗೆದುಕೊಳ್ಳುವಷ್ಟು ಸಾಮರ್ಥ್ಯ ಬಂದಿದೆ. ಇದಕ್ಕಾಗಿ ಮುದ್ರಾ ಯೋಜನೆ ರೂಪಿಸಿದ ಪ್ರಧಾನಿ ಅವರನ್ನು ಸ್ಮರಿಸುತ್ತೇನೆ' ಎಂದರು.

ಜಾನುವಾರುಗಳ ರಕ್ಷಕ ದೇವರಾದ ಗವಿರಂಗನಾಥ ಸ್ವಾಮಿ ರಥೋತ್ಸವ



ಕೆ.ಆರ್.ಪೇಟೆ ತಾಲ್ಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಬಿಲ್ಲೇನಹಳ್ಳಿ ಶ್ರೀ ಗವಿರಂಗನಾಥಸ್ವಾಮಿ ಯವರ ಬ್ರಹ್ಮ ರಥೋತ್ಸವವು ಸಡಗರ ಸಂಭ್ರಮದಿಂದ ನಡೆಯಿತು.

ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಚೆಲುವರಾಯಸ್ವಾಮಿ, ಶಾಸಕ ಹೆಚ್.ಟಿ.ಮಂಜು, ಅಪರ ಜಿಲ್ಲಾಧಿಕಾರಿ ಶಿವನಂದಮೂರ್ತಿ, ಪಾಂಡವಪುರ ಉಪವಿಭಾಗಾಧಿಕಾರಿ ಡಾ.ಕೆ.ಶ್ರೀನಿವಾಸ್, ತಹಸೀಲ್ದಾರ್ ಎಸ್.ಯು.ಅಶೋಕ್ ಹಾಗೂ ಇತರೆ ಗಣ್ಯರು ಅವರು ರಥಕ್ಕೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು. ನಂತರ ಸಣ್ಣ ನೀರಾವರಿ ಇಲಾಖೆಯಿಂದ ನಿರ್ಮಿಸಲಾಗಿರುವ ಕಲ್ಯಾಣಿಯನ್ನು ಗಣ್ಯರು ಉದ್ಘಾಟಿಸಿದರು. ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಭಕ್ತಾಧಿಗಳು ಜಾನುವಾರುಗಳ ರಕ್ಷಕ ಶ್ರೀ ರಂಗನಾಥಸ್ವಾಮಿಗೆ ಉಘೇ.. ಉಘೇ...ಶ್ರೀ ಗವಿರಂಗಪ್ಪನಿಗೆ ಉಘೇ.. ಉಘೇ.. ಎಂದು ರಥವನ್ನು ಎಳೆದು, ರಥಕ್ಕೆ ಹಣ್ಣು–ಜವನ ಅರ್ಪಿಸಿ ರಥವನ್ನು ತಮ್ಮ ಭಕ್ತಿ–ಭಾವ ಸಮರ್ಪಿಸಿದರು.

ರಥೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಕೃಷಿ ಸಚಿವರಾದ ಎನ್.ಚೆಲುವರಾಯಸ್ವಾಮಿ ಅವರು ಜಾತ್ರೆ–ರಥೋತ್ಸವಗಳು ಹಾಗೂ ಹಬ್ಬ–ಹರಿದಿನಗಳು ನಮ್ಮ ಸಂಸ್ಕೃತಿ–ಪರಂಪರೆಯ ಪ್ರತೀಕವಾಗಿವೆ. ನಮ್ಮ ಹಿರಿಯರು ಗ್ರಾಮ ದೇವತೆ ಹಬ್ಬಗಳನ್ನು ಹಾಗೂ ರಥೋತ್ಸವ, ಜಾತ್ರೆಗಳನ್ನು ಪ್ರತಿ ವರ್ಷವೂ ಆಚರಣೆ ಮಾಡಿಕೊಂಡು ಬರುತ್ತಿದ್ದಾರೆ. ಇದನ್ನು ನಾವು ಸಹ ಉಳಿಸಿ ಬೆಳಸಿಕೊಂಡ ಹೋಗಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ನಾನು ಶ್ರೀ ಕ್ಷೇತ್ರದ ಮಹಿಮೆಯ ಬಗ್ಗೆ ಕೇಳಿದ್ದೆನು. ಆದರೆ ಕ್ಷೇತ್ರಕ್ಕೆ ಬೇಟಿ ನೀಡಲು ಆಗಿರಲಿಲ್ಲ. ಈ ಭಾರಿ ಗವಿರಂಗನಾಥಸ್ವಾಮಿಯ ರಥೋತ್ಸವದಲ್ಲಿ ಭಾಗವಹಿಸಿದ್ದು ನನ್ನ ಪುಣ್ಯವಾಗಿದೆ ಎಂದರು.

ಶಾಸಕ ಹೆಚ್.ಟಿ.ಮಂಜು ಮಾತನಾಡಿ ಶ್ರೀ ಗವಿರಂಗನಾಥ ಕ್ಷೇತ್ರದ ಅಭಿವೃದ್ಧಿ ನನ್ನ ಅಧಿಕಾರದ ಅವಧಿಯಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದಾಗಿ ತಿಳಿಸಿದರು. ಗವಿರಂಗಪ್ಪ ಸ್ವಾಮಿಯನ್ನು ಜಾನುವಾರುಗಳಿಗೆ ರಕ್ಷಣೆ ನೀಡು ದೇವರೆಂದೇ ಐದಾರು ಜಿಲ್ಲೆಗಳ ಸಾವಿರಾರು ಭಕ್ತಾಧಿಗಳು ಪೂಜೆಸುತ್ತಾ ಬರುತ್ತಿದ್ದಾರೆ. ಗವಿರಂಗಪ್ಪ ದೇವರಿಗೆ ಕರು ಹಾಕಿದ ಹಸು, ಎಮ್ಮೆಗಳ ಮೊದಲ ದಿನದ ಹಾಲು ಮತ್ತು ಗಿಣ್ಣನ್ನು ದೇವರಿಗೆ ಅರ್ಪಿಸಿ, ಪೂಜೆ ಸಲ್ಲಿಸುವುದು ಇಲ್ಲಿನ ವಾಡಿಕೆಯಾಗಿದೆ. ಇಂತಹ ಶಕ್ತಿ ದೇವರಾಗಿರುವ ಶ್ರೀ ಗವಿರಂಗನಾಥಸ್ವಾಮಿ ದೇವಾಲಯದ ಸಮಗ್ರ ಅಭಿವೃದ್ಧಿಗೆ ನನ್ನ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ಸೂಕ್ತ ಅನುಧಾನ ಹಾಗೂ ಮುಜರಾಯಿ ಇಲಾಖೆಯ ಅನುಧಾನದಿಂದ ಸೂಕ್ತ ಅನುಧಾನ ನೀಡುವ ಮೂಲಕ ಶ್ರೀ ಕ್ಷೇತ್ರದ ಅಭಿವೃದ್ಧಿಗೆ ಕೈಜೋಡಿಸುವುದಾಗಿ ಹೆಚ್.ಟಿ.ಮಂಜು ತಿಳಿಸಿದರು.

ರಥೋತ್ಸವದಲ್ಲಿ ಶಾಸಕ ಹೆಚ್.ಟಿ.ಮಂಜು, ಮಾಜಿ ಸಚಿವ ಕೆ.ಸಿ.ನಾರಾಯಣಗೌಡ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಬಿ.ಆರ್.ಕುಮಾರ್, ಗೊರವಿ ಕುಮಾರ್, ಟಿಎಪಿಸಿಎಂಎಸ್ ನಿರ್ದೇಶಕ ಮಲ್ಲೇನಹಳ್ಳಿ ಮೋಹನ್, ನಾಗರಘಟ್ಟ ದಿಲೀಪ್‌ಕುಮಾರ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಬಿ.ಎಲ್.ದೇವರಾಜು, ಡಿಸಿಸಿ ಬ್ಯಾಂಕ್ ನಿರ್ದೇಶಕ ಎಸ್.ಅಂಬರೀಶ್, ಮನ್‌ಮುಲ್ ನಿರ್ದೇಶಕ ಎಂ.ಬಿ.ಹರೀಶ್, ಜೆಡಿಎಸ್ ಮುಖಂಡ ಸಂತೇಬಾಚಹಳ್ಳಿ ಕುಮಾರ್, ಪುರಸಭಾ ಸದಸ್ಯ ರವೀಂದ್ರಬಾಬು, ಡಿ.ಪ್ರೇಮಕುಮಾರ್, ಪಿ.ಎಲ್.ಡಿ.ಬ್ಯಾಂಕ್ ಮಾಜಿ ಅಧ್ಯಕ್ಷ ಎ.ಎಸ್.ರಮೇಶ್, ಪಿ.ಎಲ್.ಡಿ.ಬ್ಯಾಂಕ್ ನಿರ್ದೇಶಕ ಮಾಳಗೂರು ಜಗದೀಶ್, ಗೊರವಿ ಕುಮಾರ್, ಜಿಲ್ಲಾ ಗ್ಯಾರಂಟಿ ಸಮಿತಿಯ ನಿರ್ದೇಶಕಿ ಆದಿಹಳ್ಳಿ ಮೀನಾಕ್ಷಿ, ತಾಲ್ಲೂಕು ಕೆಡಿಪಿ ಸದಸ್ಯ ಆಕಾಶ್, ಇಲ್ಯಾಸ್ ಅಹಮದ್, ಸಣ್ಣ ನೀರಾವರಿ ಇಲಾಖೆಯ ಎಇಇ ನಿರ್ಮಲೇಶ್, ಸಂತೇಬಾಚಹಳ್ಳಿ ನಾಡಕಚೇರಿ ಉಪತಹಸೀಲ್ದಾರ್ ಗೌರಮ್ಮ, ರಾಜಸ್ವ ನಿರೀಕ್ಷಕ ಹರೀಶ್, ಜ್ಞಾನೇಶ್, ಚಂದ್ರಕಲಾಪ್ರಕಾಶ್, ಶಾಸಕರ ಆಪ್ತ ಸಹಾಯಕ ಅರಳಕುಪ್ಪೆ ಪ್ರತಾಪ್ ಸೇರಿದಂತೆ ನೂರಾರು ಗಣ್ಯರು ಹಾಗೂ ನಾಡಿನ ವಿವಿಧ ಭಾಗಗಳಿಂದ ಸಾವಿರಾರು ಭಕ್ತಾಧಿಗಳು ಭಾಗವಹಿಸಿದ್ದರು.

ಅಭಿವೃದ್ಧಿ ಯೋಜನೆಗಳಿಂದ ನವಕರ್ನಾಟಕ

ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿಕೆ। ಗ್ಯಾರಂಟಿ ಯೋಜನೆಗಳ ವಸ್ತುಪ್ರದರ್ಶನ

ಕೊಳ್ಳೇಗಾಲ. ರಾಜ್ಯಸರ್ಕಾರವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನರ ಅಭಿವೃದ್ಧಿಗಾಗಿ ರೂಪಿಸಿರುವ ಕಾರ್ಯಕ್ರಮಗಳು ಹಾಗೂ ಪಂಚ ಗ್ಯಾರಂಟಿ ಯೋಜನೆಗಳು ನವಕರ್ನಾಟಕದ ನಿರ್ಮಾಣಕ್ಕೆ ಸಹಕಾರಿಯಾಗಿವೆ ಎಂದು ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು ತಿಳಿಸಿದರು.

ಪಟ್ಟಣದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ 3 ದಿನಗಳ ಕಾಲ ಆಯೋಜಿಸಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನರ ಅಭಿವೃದ್ಧಿಗಾಗಿ ರಾಜ್ಯಸರ್ಕಾರ ರೂಪಿಸಿರುವ ಕಾರ್ಯಕ್ರಮಗಳು ಹಾಗೂ ಪಂಚ ಗ್ಯಾರಂಟಿ ಯೋಜನೆಗಳ ಕುರಿತ ವಸ್ತುಪ್ರದರ್ಶನ ಮಳಿಗೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ನೇತೃತ್ವದ ರಾಜ್ಯಸರ್ಕಾರವು 2013–18ರ ಅವಧಿಯಲ್ಲಿ ಜನತೆಗೆ ಭಾಗ್ಯಗಳ ಭಾಗ್ಯ ನೀಡಿತ್ತು. ಇಡೀ ದೇಶದಲ್ಲಿಯೇ ಭಾಗ್ಯಗಳ ಭಾಗ್ಯ ನೀಡಿದವರು ಎಂದರೇ ಅದು ಸಿದ್ದರಾಮಯ್ಯನವರು ಮಾತ್ರ ಎಂದು ದೇಶವೇ ಕೊಂಡಾಡುತ್ತಿದೆ. ಮುಂದುವರಿದು 2ನೇ ಬಾರಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಅವರು ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಅಭಿವೃದ್ಧಿ ಕೆಲಸ–ಕಾರ್ಯಗಳಿಗೆ ಮುಂದಾಗಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅನೇಕ ನಿರುದ್ಯೋಗಿ ಯುವಕ, ಯುವತಿಯರಿಗೆ ಸಾಕಷ್ಟು ಅನುಕೂಲಗಳಾಗಿದ್ದು, ಆ ಮೂಲಕ ನವಕರ್ನಾಟಕದ ನಿರ್ಮಾಣಕ್ಕೆ ನಾಂದಿ ಹಾಡಿದ್ದಾರೆ ಎಂದರು.

ರಾಜ್ಯದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ವಾರ್ಷಿಕವಾಗಿ 56 ಸಾವಿರ ಕೋಟಿ ರೂ. ಅನುದಾನ ಮೀಸಲಿಟ್ಟಿದ್ದು, ಜಿ.ಎಸ್.ಟಿ ಕಡಿಮೆಯಾದ ಬಳಿಕ 54 ಸಾವಿರ ಕೋಟಿ ರೂ.ಗಳಿಗೆ ಮಿತಿಗೊಂಡಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನರಿಗೆ ರಾಜ್ಯಸರ್ಕಾರ ರೂಪಿಸಿರುವ ಕಾರ್ಯಕ್ರಮಗಳ ಬಗ್ಗೆ ಹಾಗೂ

ಗ್ಯಾರಂಟಿ ಸರ್ವರಿಗೂ ಅನುಕೂಲ

ಗ್ಯಾರಂಟಿ ಯೋಜನೆಗಳು ರಾಜ್ಯದ ಸರ್ವಜನರಿಗೂ ಅನುಕೂಲ ಕಲ್ಪಿಸಿವೆ. ಪ್ರತಿ ಕುಟುಂಬಕ್ಕೆ ಪ್ರತಿತಿಂಗಳು ಅಂದಾಜು ತಲಾ 5 ಸಾವಿರ ರೂ. ದೊರೆಯುತ್ತಿದೆ. ಗ್ಯಾರಂಟಿ ಯೋಜನೆಗಳಿಂದ ಬಡವರ ಬದುಕು ಬಂಗಾರವಾಗಿದೆ. ಸಾಮಾನ್ಯ ಜನರು ಸರ್ಕಾರಿ ಬಸ್‌ಗಳಲ್ಲಿ ಪ್ರಯಾಣಿಸಲು ಬಸ್ ನಿಲ್ದಾಣಕ್ಕೆ ಬರುವುದರಿಂದ ಇಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಮಳಿಗೆ ತೆರೆದು ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಜನರಿಗೆ ಅರಿವು ಮೂಡಿಸಲಾಗುತ್ತಿದೆ ಎಂದು ಶಾಸಕರು ಹೇಳಿದರು. ಸರ್ಕಾರವು ಅಧಿಕಾರಕ್ಕೆ ಬಂದ ಬಳಿಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅನೇಕ

ಪ್ರತಿಭಾವಂತ ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಅಭಿವೃದ್ಧಿಪರ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಇದಕ್ಕಾಗಿ ಸರ್ಕಾರವು ಹೆಚ್ಚಿನ ಅನುದಾನವನ್ನು ಸದ್ವಿನಿಯೋಗ ಮಾಡುತ್ತಿದೆ ಎಂದು ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು ತಿಳಿಸಿದರು.

ಪಂಚ ಗ್ಯಾರಂಟಿ ಯೋಜನೆಗಳ ಕುರಿತು ಅರಿವು ಮೂಡಿಸಲು ರಾಜ್ಯದ ಮೀಸಲು ವಿಧಾನಸಭಾ ಕ್ಷೇತ್ರಗಳಲ್ಲಿ 3 ದಿನಗಳ ಕಾಲ ವಸ್ತುಪ್ರದರ್ಶನ ಮಳಿಗೆ ತೆರೆಯಲಾಗುತ್ತಿದೆ. ಹಾಗೆಯೇ ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರವಾಗಿದ್ದು, ಈ ಭಾಗದ ಜನತೆಗೆ ಸರ್ಕಾರದ ಜನಪರ ಕಾರ್ಯಕ್ರಮಗಳ ಮನವರಿಕೆ ಮಾಡಿಕೊಡಲು ಮಳಿಗೆ ತೆರೆಯಲಾಗಿದೆ ಎಂದು ತಿಳಿಸಿದರು.

ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನರ ಅಭಿವೃದ್ಧಿಗಾಗಿ ರಾಜ್ಯಸರ್ಕಾರ ರೂಪಿಸಿರುವ ಕಾರ್ಯಕ್ರಮಗಳು ಹಾಗೂ ಪಂಚ ಗ್ಯಾರಂಟಿ ಯೋಜನೆಗಳ ಕುರಿತ ವಸ್ತುಪ್ರದರ್ಶನ ಮಳಿಗೆಯನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕೊಳ್ಳೇಗಾಲ ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷರಾದ ರಾಜೇಂದ್ರ, ಉಪಾಧ್ಯಕ್ಷರಾದ ರವಿ, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷರಾದ ಉಮಾಪತಿ, ಯಳಂದೂರು ತಾಲೂಕು ಅಧ್ಯಕ್ಷರಾದ ಪ್ರಭುಪ್ರಸಾದ್, ತಾಲೂಕು ಸಮಿತಿ ಸದಸ್ಯರಾದ ಶಿವಕುಮಾರ್, ಪರಮೇಶ್ವರ, ರಾಜೇಗೌಡ, ಸಹನಾ ಪ್ರಿಯಾ, ಕೃಷ್ಣವೇಣಿ, ಮಾಜ್, ಸಿಕ್ಮತ್ ಬಾಬು, ನಗರಸಭೆ ಪೌರಾಯುಕ್ತರಾದ ರುದ್ರಮ್ಮ ಶರಣಯ್ಯ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಗುರುಶಾಂತಪ್ಪ ಬೆಳ್ಳುಂಡಗಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಎ. ರಮೇಶ, ವಾರ್ತಾ ಸಹಾಯಕರಾದ ಸುರೇಶ್‌ಕುಮಾರ್, ಯಳಂದೂರು ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷರಾದ ಎಲ್. ರಾಮಚಂದ್ರ, ಪಿ.ಎ.ಸಿ.ಸಿ ಬ್ಯಾಂಕ್ ನಿರ್ದೇಶಕರಾದ ಮಂಜುನಾಥ್, ಇತರರು ಇದ್ದರು.

ಚಾ.ನಗರ ಜಿಲ್ಲೆ ಗ್ಯಾರಂಟಿ ಪ್ರಗತಿಯಲ್ಲಿ ಮುಂಚೂಣಿ

ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷರಾದ ಎಚ್.ವಿ. ಚಂದ್ರು ಅವರು ಮಾತನಾಡಿ ರಾಜ್ಯಸರ್ಕಾರವು ಪಂಚ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ. ಬಡವರು ಹಾಗೂ ಮಹಿಳೆಯರು ಆರ್ಥಿಕವಾಗಿ ಸದೃಢಗೊಂಡು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಯೋಜನೆಗಳು ನೆರವಾಗಿವೆ. ಗ್ಯಾರಂಟಿ ಯೋಜನೆಗಳನ್ನು ಜಿಲ್ಲೆಯಲ್ಲಿ ಅಧಿಕಾರಿಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುತ್ತಿದ್ದು, ಚಾಮರಾಜನಗರ ಜಿಲ್ಲೆ ಗ್ಯಾರಂಟಿ ಯೋಜನೆಗಳ ಪ್ರಗತಿಯಲ್ಲಿ ಮುಂಚೂಣಿಯಲ್ಲಿದೆ ಎಂದರು.

ಪರವಾನಗಿ ಇ–ಹರಾಜು ಅವೈಜ್ಞಾನಿಕ: ಆರೋಪ

ಚಾಮರಾಜನಗರ: ಕರ್ನಾಟಕ ರಾಜ್ಯದ ಅಬಕಾರಿ ಇಲಾಖೆ ಸನ್ನದ್ದು ಪರವಾನಗಿ ಇ–ಹರಾಜಿನಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಬೇಕು ಎಂದು ಬಿಜೆಪಿ ಯುವಮೋರ್ಚಾದ ಅಧ್ಯಕ್ಷ ಸೂರ್ಯಕುಮಾರ್ ಆಗ್ರಹಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕರ್ನಾಟಕ ರಾಜ್ಯ ಸರ್ಕಾರವು ಚಾಮರಾಜನಗರ ಜಿಲ್ಲೆಯ 7 ಸೇರಿದಂತೆ ರಾಜ್ಯದಲ್ಲಿನ ಅಬಕಾರಿ ಪರವಾನಗಿಗಳಾದ ಸಿ ಎಲ್– 2, ಸಿಎಲ್ – 9 ಮತ್ತು ಎಂಎಸ್‌ಐಎಲ್ ಸೇರಿದಂತೆ ಒಟ್ಟು 600 ಕ್ಕೂ ಹೆಚ್ಚು ನವೀಕರಣಗೊಳ್ಳದ ಪರವಾನಗಿ ರದ್ದಾಗಿರುವ ಮತ್ತು ಇತರೆ ಕಾರಣಗಳಿಂದ ಸರ್ಕಾರದ ಸುಪರ್ದಿಯಲ್ಲಿರುವ ಅನೇಕ ಪರವನಾಗಿಗಳನ್ನು ಲಾಭದಾಯಕ ಉದ್ದೇಶದಿಂದ ಇ–ಹರಾಜು ಮಾಡಲು ನಿರ್ಧರಿಸಿರುವ ಪ್ರಕ್ರಿಯೇ ಸಂಪೂರ್ಣವಾಗಿ ಅವೈಜ್ಞಾನಿಕವಾಗಿದೆ ಎಂದು ಆರೋಪಿಸಿದರು. ಇದೇ

ಉದ್ಯಮವನ್ನು ನಂಬಿಕೊಂಡು ಜೀವನ ನಡೆಸಿಕೊಂಡು ಬಂದಿರುವ ಅಥವಾ ಬದುಕು ಕಟ್ಟಿಕೊಂಡಿರುವ ಉದ್ಯಮಿಗಳು ಹಾಗೂ ನೌಕರರನ್ನು ಬೀದಿಗೆ ತಳ್ಳುವ ಯೋಜನೆ ಇದಾಗಿದೆ ಎಂದು ದೂರಿದರು.

ಪ್ರಥಮ ಬಾರಿಗೆ ಅಬಕಾರಿಯಲ್ಲಿ ಮೀಸಲಾತಿ ತಂದಿರುವುದು ಸ್ವಾಗತಾರ್ಹ, ಆದರೆ ಜಿಲ್ಲಾವಾರು ಮೀಸಲಾತಿ ತರದೆ ರಾಜ್ಯದಾದ್ಯಂತ ಬೇರೆ ಬೇರೆ ಜಿಲ್ಲೆಗಳಲ್ಲಿ ಮೀಸಲಾತಿ ತಂದಿರುವುದರಿಂದ, ಶ್ರೀಮಂತ ದಲಿತರಿಗೆ ಅವಕಾಶವಾಗುವುದೇ ಹೊರೆತು ಜಿಲ್ಲೆಯಲ್ಲಿನ ನಿಜವಾದ ಬಡ ದಲಿತ ಉದ್ಯಮಿಗಳ ಹಕ್ಕನ್ನು ಕಸಿದು ಕೊಂಡಂತಾಗಿದೆ. ಆದರಿಂದ ಜಿಲ್ಲಾವಾರು ಪರವಾನಗಿಗಳನ್ನು ಜಿಲ್ಲೆಯ ಒಳಗಿನ ಜನರಿಗೆ ಮೀಸಲಿಟ್ಟು ಮತ್ತು ಮೀಸಲಾತಿಯನ್ನು ಸಹ ಜಿಲ್ಲೆಯ ಒಳಗಿನ ಜನರಿಗೆ ಮೀಸಲಿಡ ಬೇಕಾಗಿ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ಮನೋಜ್ ಪಟೇಲ್, ಮುಖಂಡರಾದ ಬಂಗಾರನಾಯಕ, ಮಹೇಶ್ ಪ್ರಸಾದ್, ಜಿಲ್ಲಾ ಮಾಧ್ಯಮ ಪ್ರಮುಖ ರಾಮಸಮುದ್ರ ಶಿವಣ್ಣ, ಮಾಜಿ ಚುಡಾ ಸದಸ್ಯ ಕೂಸಣ್ಣ, ಗ್ರಾ.ಪಂ.ಮಾಜಿ ಉಪಾಧ್ಯಕ್ಷ ಮಹೇಶ್ ಹಾಜರಿದ್ದರು.

ನಾಳೆ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ದುಂಡು ಮೇಜಿನ ಸಭೆ

ಮೈಸೂರು: ದೃಷ್ಟಿ ವಿಶೇಷ ಚೇತನರು ಔಷಧಿ ಸೇವಿಸುವ ವೇಳೆ ತಮ್ಮ ಕೈಯ್ಯಲ್ಲಿರುವುದು ಯಾವ ಔಷಧಿ, ಅದರ ಸಂಯೋಜನೆ ಏನು, ಎಷ್ಟು ಪ್ರಮಾಣದಲ್ಲಿ ಸೇವಿಸಬೇಕು ಎಂಬುದನ್ನು ತಿಳಿಯಲು ಇತರರ ನೆರವು ಬೇಕಾಗುವ ಪರಿಸ್ಥಿತಿ ಈಗ ಇದೆ. ಕೆಲವರು ಈ ವೇಳೆ ಪರದಾಡುವುದೂ ಉಂಟು. ಈ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಜೆಎಸ್‌ಎಸ್ ಫಾರ್ಮಸಿ ಕಾಲೇಜು ಕ್ಯೂಆರ್ ಕೋಡ್ ಆಧರಿತ ಮಾರ್ಗದರ್ಶನ ನಿಟ್ಟಿನಲ್ಲಿ ಮುಂದಾಗಿದೆ. ಹೀಗಾಗಿ ಜ. 19 ರ ಬೆಳಗ್ಗೆ 9ಕ್ಕೆ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ದುಂಡು ಮೇಜಿನ ಸಭೆ ಆಯೋಜಿಸಲಾಗಿದೆ ಎಂದು ಪ್ರಾಚಾರ್ಯ ಡಾ.ಟಿ.ಎಂ. ಪ್ರಮೋದ್‌ಕುಮಾರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅತಿಥಿಗಳಾಗಿರುವರು, ಜೆಎಸ್‌ಎಸ್ ಎಎಚ್‌ಇಆರ್ ಪ್ರೊ ಚಾನ್ಸಲರ್ ಡಾ.ಬಿ. ಸುರೇಶ್ ಅಧ್ಯಕ್ಷತೆ ವಹಿಸುವರು, ಡಾ.ಎಚ್. ಬಸವನಗೌಡಪ್ಪ, ಡಾ.ಬಿ. ಮಂಜುನಾಥ್, ಜಪಾನಿನ ತಜ್ಞರಾದ ಟೊಕುಹಿರೊ ಅರಕಾವಾ, ಬ್ರಿಟ್ಟಾನಿ ಪಾರ್ಟಿನ್ ಪಾಲ್ಗೊಳ್ಳುವರು. ಈಗಾಗಲೇ ಜಪಾನಿನ ಸಂಸ್ಥೆಯೊಂದು ಈ ವ್ಯವಸ್ಥೆ ಅಭಿವೃದ್ಧಿ ಪಡಿಸಿದ್ದು, ಯಾವುದೇ ಔಷಧದ ಪ್ಯಾಕೆಟ್ ಮೇಲಿನ ಕ್ಯೂಆರ್ ಕೋಡ್ ಸ್ಕಾ ?ಯನ್ ಮಾಡಿದಾಗ ಸುಮಾರು 40 ಭಾಷೆಗಳಲ್ಲಿ ಔಷಧದ ವಿವರ ಧ್ವನಿ ಮೂಲಕ ಕೇಳಿ ಬರಲಿದೆ. ಈ ವ್ಯವಸ್ಥೆಯನ್ನು ಏಕೆ ನಮ್ಮಲ್ಲಿಯೂ ತರಬಾರದೆಂಬ ಚಿಂತನೆಯೊಡನೆ ಈ ದುಂಡು ಮೇಜಿನ ಸಭೆ ಆಯೋಜಿಸಲಾಗಿದೆ ಎಂದರು.

ಔಷಧದ ಪ್ಯಾಕೆಟ್ ಮೇಲೆ ಸ್ಪರ್ಶಕ್ಕೆ ಸಿಗುವ ರೀತಿ ಉಬ್ಬು ತಗ್ಗು ಇರುತ್ತವೆ. ದೃಷ್ಟಿ ವಿಶೇಷ ಚೇತನರು ಅದರ ಮೇಲೆ ಸ್ಕಾ ?ಯನ್ ಮಾಡಿದಾಗ ಔಷಧಿ ಕುರಿತ ಮಾಹಿತಿ ಕೇಳಿಬರುತ್ತದೆ. ಸದ್ಯದಲ್ಲಿ ದಕ್ಷಿಣ ಭಾರತದ ಐದು ಭಾಷೆಗಳನ್ನು ಬಳಸಿಕೊಳ್ಳಲಾಗುವುದು. ಸ್ಕ್ಯಾನ್ ಮಾಡಿದವರು ತಮಗೆ ಅರ್ಥವಾಗುವ ಭಾಷೆ ಆಯ್ದುಕೊಳ್ಳಬಹುದಾಗಿದೆ. ಈಗಾಗಲೇ ಈ ನಿಟ್ಟಿನಲ್ಲಿ ದಕ್ಷಿಣದ ಕೆಲ ರಾಜ್ಯಗಳಲ್ಲಿ ಸರ್ವೆ ನಡೆಸಲಾಗಿದೆ ಎಂದು ವಿವರಿಸಿದರು. ಡಾ ನಂದನ್ ಡಾ. ಶ್ರೀಹರ್ಷ ಚಲ್ಲಸಾನಿ ಇದ್ದರು.

ಇಕೋ–ವೀಲ್ಸ್" ಮಹಿಳಾ ಸಬಲೀಕರಣ ಯೋಜನೆಗೆ ಚಾಲನೆ

ಪರಿಸರ ಸ್ನೇಹಿ 'ಇಕೋ–ವೀಲ್ಸ್'ಗೆ ಚಾಲನೆ

ಮೈಸೂರು: ಜಾಗತಿಕ ಆರೋಗ್ಯ ಮತ್ತು ಕ್ಷೇಮ ಸಂಸ್ಥೆಯಾದ ಹರ್ಬಲೈಫ್ ಕಳೆದ ಮೂರು ದಶಕಗಳಿಂದ ಸಮಾಜದ ಹಿಂದುಳಿದ ವರ್ಗಗಳ ಏಳಿಗೆಗಾಗಿ ಶ್ರಮಿಸುತಿರುವ ಬೆಂಗಳೂರಿನ "ಶಿಶು ಮಂದಿರ" ಹಾಗೂ ಮೈಸೂರಿನ "ನಾವಿಯೋ ಟ್ರಸ್ಟ್" ಸಹಯೋಗದೊಂದಿಗೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ "ಇಕೋ–ವೀಲ್ಸ್" ಮಹಿಳಾ ಸಬಲೀಕರಣ ಯೋಜನೆಗೆ ಚಾಲನೆ ನೀಡಿತು.

ಈ ಮಹತ್ವದ ಯೋಜನೆಯಡಿ ಮೈಸೂರಿನ 75 ಮಹಿಳೆಯರಿಗೆ ಎಲೆಕ್ಟ್ರಿಕ್ ಆಟೋಗಳನ್ನು ವಿತರಿಸುವ ಮೂಲಕ ಅವರಿಗೆ ಸುಸ್ಥಿರ ಜೀವನೋಪಾಯವನ್ನು ಕಲ್ಪಿಸಲಾಯಿತು. ನಗರದಲ್ಲಿ ಪರಿಸರ ಸ್ನೇಹಿ ಸಾರಿಗೆ ವ್ಯವಸ್ಥೆಗೆ ಉತ್ತೇಜನ ನೀಡುವ ಜೊತೆಗೆ ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿ ಗಳನ್ನಾಗಿ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶ. ಇದೇ ಸಂದರ್ಭದಲ್ಲಿ ಮಹಿಳೆಯರನ್ನು ಹಸಿರು ಸಾರಿಗೆಯ ರಾಯಭಾರಿಗಳನ್ನಾಗಿ ಬಿಂಬಿಸುವ ವರ್ಷಪೂರ್ತಿ ನಡೆಯ ಲಿರುವ "ಹಸಿರು ಮೈಸೂರು,

ಸ್ವಚ್ಛ ಮೈಸೂರು" ಅಭಿಯಾನಕ್ಕೂ ಚಾಲನೆ ನೀಡಲಾಯಿತು.

ಶಾಸಕ ಟಿ.ಎನ್.ಶ್ರೀವತ್ಸ ಮಾತನಾಡಿ, "ಮಹಿಳೆಯರು ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳಲು ಮತ್ತು ನಗರದ ಹಸಿರು ಸಾರಿಗೆ ವ್ಯವಸ್ಥೆಗೆ ಕೊಡುಗೆ ನೀಡಲು ಇಕೋ–ವೀಲ್ಸ್ ಯೋಜನೆ ಉತ್ತಮ ವೇದಿಕೆ ಸಮಾನತೆ ಮತ್ತು ಸಾಮಾಜಿಕ ಪ್ರಗತಿ ಪ್ರತಿಪಾದಿಸುವ ಇಂತಹ ಕಾರ್ಯಗಳಿಗೆ ಮೈಸೂರು ಸದಾ ಬೆಂಬಲ ನೀಡುತ್ತದೆ." ಎಂದರು. ಹರ್ಬಲೈಫ್‌ನ ಉಪಾ ಧ್ಯಕ್ಷ ಉದಯ್ ಪ್ರಕಾಶ್ ಮಾತನಾಡಿ, ಸುಸ್ಥಿರ ಪ್ರಗತಿ ಮತ್ತು ಸಮುದಾಯದ ಏಳಿಗೆಗೆ ಹರ್ಬಲೈಫ್ ಬದ್ಧವಾಗಿದೆ. ಬೆಂಗಳೂ ರಿನ ಯಶಸ್ಸಿನ ನಂತರ ಮೈಸೂರಿನಲ್ಲಿ ಈ ಯೋಜನೆಯನ್ನು ಜಾರಿಗೊಳಿಸುತ್ತಿರುವುದು ಸಂತಸ ತಂದಿದೆ. ಇದು ಕೇವಲ ಮಹಿಳೆಯರಿಗೆ ಆಟೋ ನೀಡುವ ಯೋಜನೆಯಲ್ಲ, ಬದಲಾಗಿ ಅವರ ಕುಟುಂಬ ಮತ್ತು ಸಮುದಾಯವನ್ನು ಉಜ್ವಲ ಭವಿಷ್ಯ ದತ್ತ ಮುನ್ನಡೆಸುವ ಪ್ರಯತ್ನವಾಗಿದೆ," ಎಂದು ಹೇಳಿದರು. ಶಿಶು ಮಂದಿರದ ನಿರ್ದೇಶಕ ಸಿ.ಆನಂದ್ ಮಾತನಾಡಿ, 'ಮೂರು ದಶಕಗಳಿಂದ ನಾವು ಗೌರವಯುತ ಜೀವನೋಪಾಯ ಮಾರ್ಗ ಕಲ್ಪಿಸಲು ಶ್ರಮಿಸುತ್ತಿದ್ದೇವೆ. ಇಕೋ–ವೀಲ್ಸ್ ಕೇವಲ ಒಂದು ಯೋಜನೆಯಲ್ಲ, ಇದೊಂದು ಆತ್ಮವಿಶ್ವಾಸದ ಆಂದೋಲನ. ಮೈಸೂರಿನಲ್ಲಿ ಹೆಚ್ಚಿನ ಮಹಿಳೆಯರು ಮತ್ತು ತೃತೀಯ ಲಿಂಗಿಗಳು ಸಮಾಜದಲಿ ಗೌರವಯುತ ಸ್ಥಾನ ಪಡೆಯಲು ಇದು ನೆರವಾಗಲಿದೆ," ಎಂದು ಅಭಿಪ್ರಾಯಪಟ್ಟರು. ಸಾವಿಯೋ ಟ್ರಸ್ಟ್ ಸಂಸ್ಥಾಪಕ ವಿಜಯ್ ಮಾತನಾಡಿದರು.

ಜಾತ್ರೆ ಮಧ್ಯೆ ನಡೆಯುವ ಜೀವನಯಾತ್ರೆ



। ಸಾಕ್ಷಿ

ಮನದ ಮಾತು...

ಜಾತ್ರೆ ಅಂದ್ರೆ ಯಾರಿಗೆಲ್ಲ ಇಷ್ಟವಾಗುವುದಿಲ್ಲ. ಜಗಮಗಿಸುವ ದೀಪಗಳು, ತರ ತರಹದ ತಿಂಡಿಗಳು ಬಣ್ಣ ಬಣ್ಣದ ಆಟಿಕೆಗಳು ಮನೋಹರ ಬಳೆಗಳ ಸಾಲು.. ರೋಮಾಂಚನಗೊಳಿಸುವ ಜೆಂಟ ವ್ಹೀಲ ತೊಟ್ಟಿಲು, ಬ್ರೆಕ್ ಡಾನ್ಸ, ಟೆರ್ರಾ ಟೋರ್ರಾ....... ಅಬ್ಬಾ ಅದೆಷ್ಟು ವಿಧಗಳು. ಆ ದೊಡ್ಡ ತೊಟ್ಟಿಲಿನಲಿ ಕುಳಿತು ಈಡೀ ಜಾತ್ರೆಯನು ಕಣ್ಣಾಡಿಸಬೇಕು ಎಷ್ಟು ಚಂದ... ಎತ್ತರದಿಂದ ಈಡೀ ಜಾತ್ರೆ ತೇರು ಗುಡಿ, ಗೋಪುರ ಪುಟಾಣಿಯಾಗಿ ಅಖಂಡವಾಗಿ ಕಾಣುತ್ತದೆ. ಆಕಾಶಕ್ಕೆ ಹಾರಿ ಹೋದ ಅನುಭವದ ರೋಮಾಂಚನ.

ಇನ್ನು ವಿವಿಧ ವಿನ್ಯಾಸದ ಸುಂದರ ಬಳೆಗಳ ಸಾಲು, ಸರ ಮತ್ತು ಆಟಿಕೆಗಳ ಅಂಗಡಿಗಳು.

ಇನ್ನು ಗೋಪುರಾಕರವಾಗಿ ಅಲಂಕರಿಸಿದ ಅರಿಷಣ ಕುಂಕುಮ ಬುಕ್ಕಿಟುಗಳ ತಟ್ಟೆಗಳು ನೋಡಲು ಎಷ್ಟು ಚಂದ. ಮುಂದೆಬಂದಂತೆ ಕಾಣುವ ಫಳಾರ(ತಿಂಡಿ) ಸಾಲು. ಬೆಂಡು ಬೆತ್ತಾಸು ಪೇಢೆ ಉಂಡೆ ಹುರಿಗಡಲೆ ಸೇವು, ಖಾರಾ, ಅವಲಕ್ಕಿ ಮೈಸೂರಪಾಕ ಜಿಲೇಬಿ ಇಂತಹ ತಿಂಡಿಗಳ ಸಾಲು.

ಕೊಪ್ಪಳ, ಗದಗಳಲ್ಲಿ ಒಂದು ವಿಶೇಷ ಖಾದ್ಯ ಉಂಟು. ಅದೇ ಬದನೆಕಾಯಿ ಬೋಂಡ ಮತ್ತು ಗಿರಮಿಟ್...

ಈಡಿಯಾದ ಬದನೆಕಾಯಿಯನ್ನು ನಾಲ್ಕು ಭಾಗಗಳಲ್ಲಿ ಹೋಳಾಗದಂತೆ ಸೀಳಿ ಅದನು ಹಬೆಯಲಿ ಬೇಯಿಸಿ, ಆ ಸೀಳುಗಳ ಮಧ್ಯೆ ಒಂದು ವಿಶೇಷ ಮಸಾಲೆಯನ್ನು ತುಂಬಿ ಕಡಲೆ ಹಿಟ್ಟಿನಲಿ ಎದ್ದಿ ಎಣ್ಣೆಯಲಿ ಕರೆಯುವದು. ಇದಕ್ಕೆ ಜೊತೆಯಾಗಿ ಮಂಡಕ್ಕಿಗೆ ಒಗ್ಗರಣೆ, ಟೊಮೇಟೋ ಈರುಳ್ಳಿ ಪುಟಾಣಿ ಹಿಟ್ಟು ಲಿಂಬೆಹಣ್ಣು ಎಲ್ಲವನು ಒಂದು ಚಿಕ್ಕ ಗುಂಡಿ ಅಥವಾ ತಪ್ಪೆಲಿಯಲಿ ಹಾಕಿ ಗರಗರನೆ ಸೌಟಿನಿಂದ ಕಲಿಸುತ್ತಾರೆ. ಅದಕ್ಕೆ ಇದನ್ನು ಗಿರ್ಮಿಟ ಅಂತಾರೆ.

ಈ ಸಂಭ್ರಮ ಸದ್ದು ಗದ್ದಲಗಳ ಉತ್ಸಾಹದ ಅಂಕಣ ಒಂದು ಕಡೆ ಆದರೆ ಇನ್ನು ತೆರೆಯ ಹಿಂದೆ ಇರುವ ಕತೆ ಬೇರೆ.

ಅಂಗಡಿ ಹಿಂದೆ ಇರುವ ಪರದೆಯಲ್ಲಿ ಒಂದು ಪುಟ್ಟ ಸಂಸಾರವೇ ಇರುತ್ತದೆ. ಜಾತ್ರೆಯ ಒಂದು ವಾರ ಮುನ್ನವೇ ಬಂದು ತಮಗೆ ನಿಗದಿಸಿದ ಸ್ಥಳದಲಿ ಒಲೆಯನು ಹೂಡಬೇಕು. ಅದನ್ನು ಅಚ್ಚುಕಟ್ಟಾಗಿ ಮಣ್ಣು, ಸುಣ್ಣ ಮತ್ತು ಇಟ್ಟಂಗಿಯಿಂದ ಕಟ್ಟಬೇಕು. ಹೊಗೆ ಹೋಗಲು ಸರಿಯಾದ ನಳಿಗೆ ಕೂಡಿಸಬೇಕು. ಇರುವ ಜಾಗದಲೆ ತಿಂಡಿ ಮಾಡಲು ಸಕ್ಕರೆಪಾಕ, ಮಂಡಕ್ಕಿಯ ಚೀಲ, ಮೆಣಸಿನಕಾಯಿ ಮೂಟೆ, ತೌಡಿನಚೀಲಗಳನು ಪೇರಿಸಿ ಇಡಬೇಕು. ಸುತ್ತಲು ಇರುವ ಬಟ್ಟೆಯ ಪರದೆಯ ಕೋಣೆಯಲಿ ಉರಿ ಏರದಂತೆ ಮತ್ತೆ ಆರದಂತೆ ಭತ್ತದ ಹೊಟ್ಟು ಮತ್ತು ಗೋವಿನಜೋಳದ ತೆನೆಯ ದಂಟು ನಿಧಾನವಾಗಿ ಒಲೆಯ ಹೊಟ್ಟೆಗೆ ಹಾಕುತ ಪಾಕವನು ತಿರುವುತ ಇರ ಬೇಕು ಹದ ಕೆಡದಂತೆ. ಕುದಿಯುವ ಎಣ್ಣೆ ಕಡಾಯಿಗೆ ಮಿರ್ಚಿ ಬಿಡಬೇಕು.....

ಅಂಗಡಿಯ ಗೌಜು ಗದ್ದಲಗಳ ನಡುವೆ ಯಾರು ಏನು ತೆಗೆದುಕೊಂಡರು ಎಂದು ಲೆಕ್ಕವನು ಇಡುತ ತಿಂದು ದುಡ್ಡು ಕೊಡದೇ ಹೋಗುವವರನು ಗಮನಿಸ ಬೇಕು.

ಹೀಗೆ ಹಗಲಿಡಿ ದುಡಿದು ದಣಿದ ಜೀವಗಳು ರಾತ್ರಿ ಅದೇ ಅಂಗಡಿಯ ಮುಗಟ್ಟಿನಲಿ ಮಲಗುವರು. ಹೀಗೆ ಜಾತ್ರೆಗೆ ಬಂದ ಪ್ರತಿ ಅಂಗಡಿಗೆ ಒಂದು ಕುಟುಂಬವಿರುತ್ತದೆ. ಜಾತ್ರೆಯ ಸಂಭ್ರಮ ಮುಗಿಸಿ ಜನರು ಹೊರಟು ಹೋದ ಮೇಲೆ ಅಂಗಡಿಗೆ ಪರದೆ ಎಳೆದು ಮುಚ್ಚುತ್ತಾರೆ. ಅಲ್ಲಿಯೇ ಒಂದು ಚಿಕ್ಕ ಸ್ಟವ್ ಅಥವಾ ಸಣ್ಣ ಸಿಲಿಂಡರ್ ನ ಕ್ಲಿಕ್ ಇಟ್ಟುಕೊಂಡು ಅನ್ನ ಬೇಯಿಸಿಕೊಳ್ಳುತ್ತಾರೆ ಹಗಲಿಡಿ ನಿಂತ ಮಣ್ಣಿನ ನೆಲವನ್ನು ಗುಡಿಸಿ ಸ್ವಚ್ಚ ಮಾಡಿಕೊಳ್ಳುತ್ತಾರೆ. ಅಂಗಡಿ ಮುಂದೆ ಬಿದ್ದ ಹಾಳೆಗಳನ್ನು ಮಕ್ಕಳು ಗುಡಿಸಿ ಕಸ ತುಂಬುತ್ತಾರೆ.ಬೇಯಿಸಿದ ಅನ್ನಕ್ಕೆ ಹೋಟೆಲ್ ಒಂದರಲ್ಲಿ ಉಳಿದ ಸಾಂಬಾರನ್ನು ಅಥವಾ ಖಾನಾವಳಿಯಲ್ಲಿರುವ ಸಾರನ್ನು ತಂದು ಹಾಕಿಕೊಂಡು ಮಕ್ಕಳು ಮತ್ತು ಕುಟುಂಬದವರು ಊಟ ಮಾಡುತ್ತಾರೆ. ಅಲ್ಲಿಯೇ ಹಾಸಿಗೆ ಒಂದನ್ನು ಬಿಡಿಸಿಕೊಂಡು ಉರುಳಿಕೊಳ್ಳುತ್ತಾರೆ. ಸೊಳ್ಳೆಗಳ ಕಾಟ ಚಳಿಯ ತಂಪು ಒರಟು ನೆಲದ ಬಿರುಸುತನ ಯಾವುದನ್ನು ಗಮನಿಸುವುದಿಲ್ಲ! ಅವರೊಡನೆ ಪಾಪ ಸಣ್ಣ ಸಣ್ಣ ಮಕ್ಕಳು ಕೂಡ ಇರುತ್ತವೆ. ಅದೇ ರೀತಿ ಕಬ್ಬಿನ ಹಾಲು, ಮತ್ತಿತರ ತಿಂಡಿಯ ಸ್ಟಾಲಿನವರಾದರೆ ಕಸದ ಗಾಡಿಗೆ ಕಬ್ಬಿನ ಸಿಪ್ಪೆ ಪೇಪರ್ ತಟ್ಟೆ ಲೋಟ ಗಳನ್ನು ತುಂಬಿ ಕಸದ ವಿಲೇವಾರಿ ಮಾಡಬೇಕು. ಕುರ್ಚಿಗಳನ್ನು ಎತ್ತಿಟ್ಟು ಟೇಬಲ್ ಗಳನ್ನು ಒರೆಸಿ ಕೆಳಗೆ ಬಿದ್ದ ಕಸವನ್ನೆಲ್ಲ ಗುಡಿಸಿ ಸ್ವಚ್ಚ ಮಾಡಬೇಕು. ಇದು ಒಂದು ಹಂತವಾದರೆ ಬೆಳಗ್ಗೆ ಎದ್ದ ಮೇಲೆ ಇನ್ನೊಂದು ಅಂಕಣ, ಜಾತ್ರೆಯಲ್ಲಿರುವ ಸಾರ್ವಜನಿಕ ಶೌಚಾಲಯದಲ್ಲಿ ಮಕ್ಕಳು ಹೆಣ್ಣು ಮಕ್ಕಳು ಸರತಿ ಸಾಲಿನಲ್ಲಿ ಹೋಗಬೇಕು. ಅಲ್ಲಿರುವ ತಾತ್ಕಾಲಿಕ ಸ್ನಾನ ಗೃಹಗಳಲ್ಲಿ ಸ್ನಾನವನ್ನು ಮುಗಿಸಿ ತಮ್ಮ ಅಂಗಡಿಗಳಿಗೆ ಬರಬೇಕು.

ಮತ್ತೆ ಆ ಇಕ್ಕಟ್ಟಿನ ಜಾಗದಲಿ ತಿಂಡಿ, ಅಡುಗೆಯ ಸಂಭ್ರಮ.

ಆ ಇಕಟ್ಟಿನ ಜಾಗದಲ್ಲಿ ಈಡೀ ದಿನಚರಿಗೆ ಬೇಕಾಗಿರುವಂತಹ ಸಲಕರಣೆಗಳನ್ನು ಜೋಡಿಸಿ ಊಟ ತಿಂಡಿ ಅಂತ ದಿನದ ಬಹು ಕೆಲಸಗಳನ್ನು ಮುಗಿಸಿ ಮತ್ತೆ ಸಂಜೆಯ ಸಂಭ್ರಮಕ್ಕೆ ಸಿದ್ಧವಾಗಬೇಕು. ಮತ್ತು ಕೆಲವು ಜನ ಹೋಟಲಿಟ್ಟವರು ಸಂಜೆಯ ತಿಂಡಿಗೆ ತಯಾರಿಯನ್ನು ಬೆಳಗ್ಗೆಯಿಂದಲೇ ಮಾಡಬೇಕು. ತರಕಾರಿಗಳನ್ನು ಹೆಚ್ಚುವುದು,ಹಿಟ್ಟನ್ನು ರುಬ್ಬೋದು

ಮಸಾಲೆಗಳನ್ನು ತಯಾರಿಸುವುದು ಮತ್ತೆ ಕುರ್ಚಿಗಳನ್ನು ಜೋಡಿಸಿ ಅತ್ತಿತ್ತ ಹೋಗದಂತೆ ಒಂದು ಸೆಣಬಿನ ನಾರಿನಿಂದ ಕಟ್ಟಿಡುವುದು.

ಹೀಗೆ ಸಂಜೆ ಆದಂತೆ ಮತ್ತೆ ಜಾತ್ರೆಗಳು ಹೊಳಪನ್ನು ಪಡೆದುಕೊಳ್ಳುತ್ತವೆ. ಜಗ ಮಗಿಸುವ ದೀಪಗಳು ಬಾಯಲ್ಲಿ ನೀರೂರಿಸುವ ವಿವಿಧ ನಮೂನೆಯ ತಿಂಡಿಗಳು ರೋಮಾಂಚನಕಾರಿ ಆಟಗಳು. ದೊಡ್ಡ ದೊಡ್ಡ ಯಂತ್ರದಂತಹ ಆಟಗಳ ಹತ್ತಿರ ವಂತು ತುಂಬಾ ಜೋರಾದ ಶಬ್ದದಲ್ಲಿ ಹಾಡುಗಳನ್ನು ಹಚ್ಚಿರುತ್ತಾರೆ . ಸ್ವಲ್ಪ ಹೊತ್ತು ಮುದವೆನಿಸಿದರು ಹೆಚ್ಚು ಹೊತ್ತು ಅಲ್ಲೇ ನಿಂತರೆ ತಲೆನೋವು ಬರುವುದು , ಬಣ್ಣ ಬಣ್ಣದ ಮಿಣಮಿಣಿಸುವ ಆ ದೀಪಗಳು ಕಣ್ಣಿಗೆ ಕಿರಿಕಿರಿ ಉಂಟನ್ನು ಮಾಡುತ್ತದೆ. ಸಂಜೆಯಿಂದ ತಡರಾತ್ರಿವರೆಗೆ ಆ ಗೌಜು ಗದ್ದಲ ಶಬ್ದ ಕೇಳುತ್ತಲೇ ಇರಬೇಕು. ಆಟವನ್ನು ಪ್ರಾರಂಭಿಸುವಾಗ ಸುರಕ್ಷತೆಯ ಪ್ರತಿ ವಿಧಾನಗಳನ್ನು, ನಟ್ಟು ಬೋಲ್ಟುಗಳನ್ನು ಪರೀಕ್ಷಿಸಲೇಬೇಕು. ಕುಟುಂಬದೊಂದಿಗೆ ಬಂದ ಸಣ್ಣ ಸಣ್ಣ ಮಕ್ಕಳು ಶಾಲೆ ಓದಿನಿಂದ ವಂಚಿತರಾಗಿ ಅಲ್ಲಲ್ಲಿ ಓಡಾಡುತ್ತಾ ಆಟವಾಡುತ್ತಿರುತ್ತಾರೆ. ಆ ಗೌಜು ಗದ್ದಲನಲ್ಲಿ ಕೂಡ ಆವರ ತಂದೆ ತಾಯಿಗಳಿಗೆ ಗಮನಿಸಲು ಪುರುಸೊತ್ತು ಕೂಡ ಇರುವುದಿಲ್ಲ. ಅವರ ಬಾಲ್ಯವು ಕಮರಿ ಹೋಗುತ್ತಿರುತ್ತದೆ. ಹೀಗೆ ಜಾತ್ರೆಯಲಿ ಸುರಕ್ಷತೆ ಎಂಬುದು ಇಲ್ಲಿ ಕೆಲವು ಸಾರಿ ಪ್ರಶ್ನೆಯಾಗಿ ಉಳಿಯುತ್ತದೆ. ಈ ಯಾತ್ರೆ ಹೀಗೆ ನಿಲ್ಲುವುದಿಲ್ಲ ಒಂದು ಜಾತ್ರೆ ಮುಗಿದ ನಂತರ ಮತ್ತೆ ಮುಂದಿನ ಊರಿನ ಜಾತ್ರೆಯಲ್ಲಿ ಎಂದು ತಿಳಿದುಕೊಂಡು ಗುಂಪಾಗಿ ಅಲ್ಲಿ ಹೋಗುತ್ತಾರೆ. ಅಲ್ಲಿ ಮತ್ತೆ ಹೊಸ ಅಂಗಡಿ ಹೊಸ ಸಂಸಾರ ಹೂಡುತ್ತಾರೆ. ಮತ್ತೆ ಎಲ್ಲವೂ ಮೊದಲಿನಿಂದ ಪ್ರಾರಂಭವಾಗುತ್ತದೆ. ಊರಿನಲ್ಲಿರುವ ಸಾಲಗಳು, ಮನೆ ಕಟ್ಟುವ ಕನಸು ಮತ್ತಿತರ ಜವಾಬ್ದಾರಿಗಳಿಗೆ ಹೆಗಲಾಗಿ ಹೀಗೆ ವರುಷ ಪೂರ್ತಿ ಬೇರೆ ಬೇರೆ ಜಾತ್ರೆಗಳಿಗೆ ಅಲೆಯುತ್ತಾರೆ. ಜಾತ್ರೆ ಮುಗಿದಮೇಲೆ ತಮ್ಮ ಪರಿಕರಗಳನ್ನೆಲ್ಲ ಮತ್ತೆ ಚೀಲಗಳಿಗೆ ಕಟ್ಟಿ ಬೇರೆ ಊರಿನ ಜಾತ್ರೆ ಅಲ್ಲಿಯ ಗಳಿಸುವ ಕನಸುಗಳನ್ನು ಕಾಣುತ್ತಾರೆ.

ದೊಡ್ಡ ದೊಡ್ಡ ಆಟಗಳನ್ನು ಆಡಿಸುವರಂತೂ ಆಟದ ವಿನ್ಯಾಸಗಳ ಜೋಡಿಯನ್ನು ಬಿಚ್ಚಲು ಎರಡು ದಿನಗಳು ಬೇಕಾಗುತ್ತವೆ. ಕೆಲವು ಸಾರಿ ಲಾಭವಾದರೆ ಕೆಲವು ಸಾರಿ ಅಂದುಕೊಂಡಷ್ಟು ದುಡ್ಡು ಕೈಗೆ ಬರುವುದಿಲ್ಲ. ವಿದ್ಯುತ್ ಪಾವತಿ ಮತ್ತು ಅಂಗಡಿಯ ಮುಂಗಟ್ಟುಗಳ ಬಾಡಿಗೆ ಹಣವನ್ನು ಕೊಟ್ಟು ಉಳಿದ ಲಾಭವನ್ನು ಲೆಕ್ಕ ಹಾಕುವುದು ಕೆಲವು ಸಾರಿ ಕಷ್ಟಕ್ಕೂ ದಾರಿ. ಇನ್ನು ಮಳೆ ಬೆಳೆ ಚೆನ್ನಾಗಿದ್ದರೆ ಜಾತ್ರೆಗಳು ಹುರುಪಿನಿಂದ ನಡೆಯುತ್ತವೆ. ಟ್ರ್ಯಾಕ್ಟರಗಳ ಹಾವಳಿ ಹೆಚ್ಚಾದಂತೆ ಎತ್ತಿನ ಪರಿಕರಗಳಾದ, ಕೊರಳುಗೆಜ್ಜೆ, ಗಂಟೆ, ಕೋಡಿನ ಬಾಸಿಂಗ, ಕರಿ, ಬೆನ್ನು ಹೊದಿಕೆ, ಬಾರುಕೋಲು, ಕಾಲಿನ ಹುರಿ ಇಂತಹ ಹಲವು ಹತ್ತು ವಸ್ತುಗಳ ಬಳಿಕೆ ಕೂಡ ಕಡಿಮೆ ಆಗಿದೆ. ಇದರಿಂದ ಈ ವ್ಯಾಪಾರ ಕುಸಿದಿದೆ. ಮೊದಲು ಎತ್ತನ್ನು ಕೂಡ ರೈತರು ತಮ್ಮ ಪರಿವಾರದ ಒಂದು ಭಾಗವನ್ನಾಗಿ ಕಾಣುತ್ತಿದ್ದರು . ಹೀಗಾಗಿ ಜಾತ್ರೆಯಲ್ಲಿ ಅದರ ಶೃಂಗಾರದ ಸಾಮಗ್ರಿಗಳನ್ನು ಹೊಸದಾಗಿ ಖರೀದಿಸುತ್ತಿದ್ದರು . ಆದರೆ ಟ್ರ್ಯಾಕ್ಟರ್ ಗಳಿಗೆ ಅವಲಂಬಿತರಾಗಿ ಹಲವು ರೈತರು ಎತ್ತುಗಳನ್ನು ಸಾಕುವುದನ್ನೇ ಬಿಟ್ಟುಬಿಟ್ಟಿದ್ದಾರೆ.

ಈ ಪ್ರತಿ ಜಾತ್ರೆಗಳಲ್ಲಿ ಇಂತಹ ಜನಾಂಗದೊಂದು ಯಾತ್ರೆ ನಡೆದಿರುತ್ತದೆ. ಇವರು ಅಲೆಮಾರಿಯಾಗಿಯೇ ಜೀವನವನ್ನು ನಡೆಸುತ್ತಾರೆ. ಬಹು ಜನರಿಗೆ ಕನ್ನಡ ಸಹ ಬರುವುದಿಲ್ಲ ಹೊರರಾಜ್ಯಗಳಿಂದ ಕೂಡ ಬಂದಿರುತ್ತಾರೆ . ವಿಶೇಷವಾಗಿ ದೊಡ್ಡ ಆಟಗಳನ್ನು ಆಡಿಸುವರು ಮತ್ತು ಗೋಬಿ ಮಂಚೂರಿ ಡೆಲ್ಲಿ ಪಾಪಡ್ ಇಂತಹ ಮಾರಾಟದ ಮಳಿಗೆಗಳು ಬೇರೆ ರಾಜ್ಯದಿಂದ ಬಂದಿರುತ್ತವೆ. ದಿನದ ಆಯಾಸವನ್ನು ಕಳೆಯಲು ಕುಡಿಯುವುದು ಮತ್ತು ಬಾಯಲ್ಲಿ ಗುಟುಕ ಹಾಕಿಕೊಳ್ಳುವುದು ಇಂತಹ ಚಟಗಳು ಯುವಕರಲ್ಲಿ ಕೂಡ ಸಾಮಾನ್ಯವಾಗಿರುತ್ತದೆ.

ಇನ್ನು ಜಾತ್ರೆಗೆ ಕಲಾಕಾರರಾಗಿ ಬಂದಿರುವಂತಹ ದೊಡ್ಡ ದೊಡ್ಡ ನಾಟಕ ಕಂಪನಿಗಳು ಸಾಧ್ಯವಾದರೆ ಬಾಡಿಗೆ ಮನೆಯನ್ನು ಹಿಡಿಯುತ್ತಾರೆ . ಜನರು ಬಾಡಿಗೆ ಕೊಡಲು ಬೇಗ ಒಪ್ಪುವದಿಲ್ಲ. ರಂಗ ಮಂದಿರದ ಹಿಂದೆಯೇ ಟೆಂಟುಗಳನ್ನು ನಿರ್ಮಿಸಿ ರಾತ್ರಿಯಿಡಿ ನಾಟಕವನ್ನು ಪ್ರದರ್ಶಿಸೆ ಹಗಲಿಗೆ ಮಲಗುತ್ತಾರೆ. ಇಂಥ ರಂಗಭೂಮಿ ಕಲಾವಿದರು ತಮಗೆ ವಯಸ್ಸಾದರೂ ಕೂಡ ಬಣ್ಣವನ್ನು ಬಳಿದುಕೊಂಡು ಯುವತಿಯರಂತೆ ನರ್ತನ ಮಾಡುತ್ತಾರೆ. ಆದರೂ ಬೆಳ್ಳಿ ಪರದೆಯ ಮೇಲೆ ಇರುವ ಕಲಾಕಾರರಿಗೆ ಸಿಗುವ ಮನ್ನಣೆ ಇವರಿಗೆ ಇರುವುದಿಲ್ಲ. ಕೆಲವೊಂದು ಸಾರಿ ನಾಟಕದ ಮಧ್ಯೆ ಕೆಲವು ಜನರು ಮಹಿಳಾ ಕಲಾಕಾರರೊಂದಿಗೆ ಅಸಭ್ಯ ಮಾತುಗಳನ್ನು ಆಡುತ್ತಾ ಹಾಸ್ಯ ಚಟಾಕಿಗಳನ್ನು ಹಾರಿಸುವ ಪ್ರಯತ್ನವನ್ನು ಮಾಡುತ್ತಾರೆ. ಅವುಗಳನ್ನೆಲ್ಲ ಕಡೆಗಣಿಸಿ ನಾಟಕವನ್ನು ಅವರು ಮುಂದುವರಿಸುತ್ತಾರೆ . ಕನಿಷ್ಟ ಸೌಲಭ್ಯ ವಿರದ ಟೆಂಟುಗಳಲ್ಲಿ ಜೀವನವನ್ನು ಕೂಡ ಸಾಗಿಸುತ್ತಾರೆ . ಬೆಳ್ಳಿ ಪರದೆಯ ಮೇಲೆ ಇರುವ ನಾಯಕ ನಾಯಕಿಯರ ಅಭಿಮಾನಿಗಳು ಲಕ್ಷಾಂತರ ಜನವಾದರೆ ನಾಟಕಗಳಲ್ಲಿ ಅಭಿನಯಿಸುವ ಮಹಿಳೆಯರ ಬಗ್ಗೆ ಹೆಚ್ಚು ಗೌರವ ಕೂಡ ಇರುವುದಿಲ್ಲ. ಪಾಪ ಅವರಿಗೆ ನೋವಿನ ಇದು ಸಂಗತಿ.

ಮೊದಲಾದರೆ ಕೆಲವು ವಸ್ತುಗಳು ಜಾತ್ರೆಯಲ್ಲಿ ಮಾತ್ರ ಸಿಗುತ್ತಿದ್ದವು . ಹೀಗಾಗಿ ಜಾತ್ರೆ ಅಂದು ಸಂತೋಷ ಸಂಭ್ರಮ ಮತ್ತು ಹುಮ್ಮಸ್ಸಿನ ಪ್ರತೀಕವಾಗಿದ್ದವು . ಆದರೆ ಈಗ ಎಲ್ಲ ವಸ್ತುಗಳು ಸದಾಕಾಲವೂ ಸಿಗುತ್ತವೆ. ಅದಲ್ಲದೆ ಆನ್ಲೈನ್ ನಲ್ಲಿ ಹುಟ್ಟಿಕೊಂಡಂತಹ ಫ್ಲಿಪ್ಕಾರ್ಟ್ ಅಮೆಜಾನ್ ಗಳಂತ ವೆಬಸ ಟನಲಿ ಜನರು ವಸ್ತುಗಳನ್ನು ಖರೀದಿಸುತ್ತಾರೆ. ಅವರು ಮನೆ ಬಾಗಿಲಿಗೆ ವಸ್ತುಗಳನು ತಂದುಕೊಡುತ್ತಾರೆ. ಹೀಗಾಗಿ ಜಾತ್ರೆಯಲ್ಲಿ ಖರೀದಿಸಲೇಬೇಕೆಂಬ ಯಾವ ಒತ್ತಡವು ಜನರಿಗೆ ಉಳಿದಿಲ್ಲ. ಜಾತ್ರೆ ಎಂಬುದು ಜನರ ನೆಲದ ಸಂಸ್ಕೃತಿಯ ಪ್ರತೀಕ.ಅದನ್ನು ಉಳಿಸುವುದು ಅವಶ್ಯಕ. ಕೊಪ್ಪಳದ ಗವಿಸಿದ್ದೇಶ್ವರನ ಜಾತ್ರೆಯು ದಕ್ಷಿಣ ಭಾರತದ ಕುಂಭಮೇಳ ಎಂದೇ ಕರೆಯುತ್ತಾರೆ. ಅಷ್ಟು ಕಡೆಯಿಂದ ಲಕ್ಷಾಂತರ ಜನರು ಹರಿದು ಬರುತ್ತಾರೆ. ಇಲ್ಲಿಯ ಜಾತ್ರೆಯು ನೋಡಲು ಆಕರ್ಷಕ ಮತ್ತು ಮನೋಹರವಾಗಿರುತ್ತದೆ. ಜಾತ್ರೆಯಲ್ಲಿ ಯಾರೂ ಕಸ ಕಡ್ಡಿಗಳನ್ನು ಹಾಕದಂತೆ ಪೇಪರ್ ಲೋಟಗಳನ್ನು ಎಸೆಯದಂತೆ ಸ್ವಚ್ಚತೆಯ ಕಟ್ಟುನಿಟ್ಟಿನ ಶಿಸ್ತಿನ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಹೀಗಾಗಿ ಲಕ್ಷಾಂತರ ಭಕ್ತರು ಬಂದರೂ ಇಲ್ಲಿ ಸ್ವಚ್ಚತೆಯನ್ನ ಕಾಣಬಹುದು. ಇದಲ್ಲದೆ ವ್ಯವಸ್ಥಿತ ವಿದ್ಯುತ್ ದೀಪಗಳ ಸೌಕರ್ಯ,ಶೌಚಾಲಯ ಮತ್ತು ಸ್ನಾನದ ಗೃಹಗಳ ಸೌಕರ್ಯವನ್ನು ಕೂಡ ಜಾತ್ರೆಯಲ್ಲಿ ನಿರ್ಮಿಸಿದ್ದಾರೆ. ಜಾತ್ರೆಯಲ್ಲಿ ಹಗಲು ರಾತ್ರಿ ಎನ್ನದೆ ದಾಸೋಹ ಇರುವುದರಿಂದ ಜಾತ್ರೆಗಾಗಿ ಮನೆ ಬಿಟ್ಟು ಬಂದವರಿಗೆ ತುಸು ಉಂಡು ವಿರಮಿಸಲು ಅವಕಾಶವಿರುತ್ತದೆ

ಜಾತ್ರೆಯಲ್ಲಿ ಕೆಲವು ಅಂಗಡಿಗಳು ದಶಮಾನಗಳಿಂದ ತಲೆತಲಾಂತರ ಗಳಿಂದ ಪ್ರಸಿದ್ಧಿ ಆಗಿರುತ್ತವೆ. ಜನರು ಅಂತಹ ಅಂಗಡಿಗಳನ್ನು ನೆನಪಿಟ್ಟುಕೊಂಡು ಇಂತಹದನ್ನು ಇಲ್ಲಿಯೇ ಖರೀದಿಸಬೇಕು ಎಂದು ಹುಡುಕಿಕೊಂಡು ಬರುತ್ತಾರೆ.ಚಿತ್ರದಲ್ಲಿರುವುದು ಕೊಪ್ಪಳದ ಪ್ರಸಿದ್ಧ ಬದನೆಕಾಯಿ ಬೋಂಡ ಮಾಡುವವರ ಅಂಗಡಿ. ಅವರು ತಮ್ಮ ತಂದೆ ಮತ್ತು ಮುತ್ತಜ್ಜನ ಕಾಲದಿಂದಲೂ ಅದರಲ್ಲಿ ಪಳಗಿದವರು.ಅವರೆ ಹೂಡಿದ ಒಲೆ. ಇದು ಜಾತ್ರೆಯ ವಿಶೇಷ.

ಹೀಗೆ ಪ್ರತಿಯೊಂದು ಸಂಭ್ರಮದ ಹಿಂದೆ ಕೆಲವು ಕಷ್ಟ ಕಾರ್ಪಣ್ಯಗಳ ಬಿಸಿ ಉಸಿರುಗಳು ಇರುತ್ತವೆ.

ಮತ್ತೊಂದು ಮನದ ಮಾತು ಮತ್ತೆ ಮುಂದಿನ ವಾರ.

ಬಿರ್ಯಾಣಿ

ಪುಟ್ಟ ಕತೆ

ಸ್ನೇಹ ಲೋಕ



। ಸ್ನೇಹಾ ಆನಂದ್

ದೇವು ನಿದ್ದೆ ಇಲ್ಲದೆ ಹೊರಳಾಡುತಿದ್ದ, ಗಂಡನ ಕಡೆಗೆ ನೋಡಿ ಯಾಕೆ ನಿದ್ರೆ ಬರ್ತಿಲ್ವಾ ದೇವು ಎಂದು ಭಾನು ಕೇಳಿದಾಗ,

ಉಹುಂ... ಎಂದು ಗೋಣಾಡಿಸಿದ ದೇವು!

ಯಾಕೆ ಎರಡು ದಿನಗಳಿಂದ ನೋಡ್ತಿದಿನಿ ಕೋಳಿ,ಕುರಿಗಳ ಮೈ ಬೆನ್ನು ಸವರುತ್ತ ಏನೋ ಯೋಚಿಸ್ತಾ ಕೂತಿರ್ತಿಯಾ !

ಏಕೆ ಏನು ಚಿಂತೆಯಾಗಿದೆ ನಿನಗೆ!

ನಾಡಿದ್ದು ಹಬ್ಬಕ್ಕೆ ನನ್ನ ಮನೆಯವರು ನಿನ್ನ ಕಡೆಯವರು ಎಲ್ಲರೂ ಬರ್ತಿದ್ದಾರೆ, ಇನ್ನೂ ಅಡುಗೆಗೆ ತಯಾರಿ ಮಾಡಿಕೊಳ್ಳಬೇಕು, ಸಿಹಿ ಅಡುಗೆಗೆ ಹಾಗು ಮಟನ್,ಚಿಕನ್ ಮಾಡ್ಲಿಕ್ಕೆ ದಿನಸಿ ತರಬೇಕು ಇನ್ನು ಸಮಯವಿಲ್ಲ, ಈಗ ಬೇಗ ಮಲಗಿದ್ರೆ ನಾಡಿದ್ದು ಹಬ್ಬದ ತಯಾರಿ ಮಾಡಬಹುದು!

ನೋಡು ದೇವು, ನಾನು ಮನೆ ಬೇರೆ ಕ್ಲೀನ್ ಮಾಡಬೇಕು, ನಾಳೆಯ ಕೆಲಸ ನೆನಪಿಸಿಕೊಂಡ್ರೆ ಈಗ ನನಗೂ ನಿದ್ದೆ ಹಾರಿ ಹೋಗುತ್ತೆ ಎಂದಳು ಭಾನು!

ಭಾನು...ನಾನು ನಿನ್ನ ಎಲ್ಲಾ ಕೆಲಸದಲ್ಲಿ ಕೈ ಜೋಡಿಸ್ತೀನಿ ಚಿಂತೆ ಬೇಡ!

ಆದ್ರೆ ನನ್ನ ಮನಸಿಗೆ ಒಂದು ವಿಷಯ ತುಂಬಾ ನೋವು ಕೊಡುತ್ತಿದೆ!

ಹೌದಾ!!!! ಏನು ದೇವು

ಭಾನು ಅದನ್ನು ಹೇಗೆ ಹೇಳ್ಬೇಕು ಗೊತ್ತಿಲ್ಲ!

ಯಾಕೆ ಏನು ಚಿಂತೆ, ನೋವು ನಿನಗೆ... !!

ನನಗೂ ಹೇಳು, ಇಬ್ಬರೂ ಸೇರಿ ಪರಿಹರಿಸೋಣ!

ಹಮ್,,, ಎಂದು ಉಸಿರು ಬಿಟ್ಟು ಎದ್ದು ಕುಳಿತ

ದೇವು!

ಭಾನು,ನೋಡು ನಾವು ಆಡು,ಕುರಿ, ಕೋಳಿಗಳನ್ನು ಎಷ್ಟು ಪ್ರೀತಿಯಿಟ್ಟು ಬೆಳಸಿದ್ದೀವಿ, ನಾನು ಹೊರಗಡೆಯಿಂದ ಬಂದರೆ ಸಾಕು ಓಡಿ ಬಂದು ನನ್ನ ಕಾಲು ಮಕ್ಕಳಂತೆ ಅಪ್ಪುತ್ತವೆ !

ಹೀಗಾಗಿ ಅವುಗಳನ್ನು ಯಾಕೋ ನಮ್ಮ ಆಹಾರವನ್ನಾಗಿ ಅವುಗಳನ್ನು ಕಡಿದು ತಿನ್ನಲು ಮನಸ್ಸೇ ಬರ್ತಿಲ್ಲ ಈ ನಡುವೆ ನನಗೆ! ನೀನೂ ನನ್ನ ಒಂದೆರಡು ಬಾರಿ ಬೇರೆ ಕಡೆಗೆ ಊಟಕ್ಕೆ ಹೋದಾಗ ಕೇಳ್ದೆ ಅಲ್ವಾ!

ಹೌದು ಕೇಳಿದ್ದೇ, ಆಗ ನೀನು ನನ್ನ ಹೊಟ್ಟೆ ಸರಿಯಿಲ್ಲ ಎಂದಿದ್ದೆ ಅಲ್ವಾ!!

ಹುಂ ಹಾಗೆ ಹೇಳಿದ್ದು ಸುಳ್ಳು, ನನಗೆ ಈ ನಡುವೆ ಚಿಕನ್,ಮಟನ್ ಎಲ್ಲಾ ಪ್ರಾಣಿ ಹಿಂಸೆ ಎನ್ನುವ ಹಾಗೆ ಅನಿಸ್ತಿದೆ, ಆ ಕಾರಣಕ್ಕೆ ಬೇಡ ಅಂತ ಹೇಳದೇ ಹಾಗೆ ಹೇಳ್ದೆ ಅಷ್ಟೇ! ಈಗಲೂ ನನಗೆ ನಮ್ಮ ಮನೆಯ ಹಬ್ಬದಲ್ಲಿ ಅದೆಲ್ಲ ಬೇಡ ಅನಿಸ್ತಿದೆ!

ಈ ಮಾತು ಕೇಳಿ ಭಾನು ಧಕ್ಕನೇ ಎದ್ದು ಕುಳಿತು, ಈಗ ಹೀಗೆ ಹೇಳಿದ್ರೆ ಹೇಗೆ ದೇವು, ಮನೆಗೆ ಬೇರೆ ಅಷ್ಟು ಜನ ಬರ್ತಾರೆ, ಯಾರೂ ಚಿಕನ್,ಮಟನ್ ಇಲ್ಲದೇ ಊಟಕ್ಕೆ ಕೈ ಹಚ್ಚುವುದಿಲ್ಲ ಅದು ನಿನಗೆ ಗೊತ್ತಿಲ್ವಾ!

ನನಗೂ ಗೊತ್ತಿದೆ ಭಾನು! ಆದ್ರೆ ನನ್ನ ಮನಸ್ಸು ಆ ಮುಗ್ಧ ಪ್ರಾಣಿಗಳನ್ನು ನಮ್ಮ ಆಹಾರಕ್ಕಾಗಿ ಬಲಿ ಕೊಡಲು ಇಷ್ಟ ಆಗ್ತಿಲ್ಲ,ಒಂದು ವಾರದಿಂದ ಇದೇ ಚಿಂತೆಯಾಗಿದೆ! ಇನ್ನೂ ಮೇಲೆ ನಾವು ಆ ರೀತಿಯ ಅಡುಗೆ ಮಾಡುವುದು ಬೇಡ!

ಹಾಗಂದ್ರೆ ಹೇಗೆ ದೇವು, ಹುಟ್ಟಿದಾಗಿನಿಂದ ಹಾಗೆ ಊಟ ಮಾಡಿ ಬೆಳೆದವರು ನಾವು ಈಗ ಸಡನ್ ಆಗಿ ಬಿಟ್ಟರೆ ಕಷ್ಟ ಆಗುತ್ತದೆ, ಸರಿ ನಿಧಾನವಾಗಿ ಅಭ್ಯಾಸ ಮಾಡಿ ಕೊಳ್ಳೋಣ ನಾವಿಬ್ರೂ, ಈ ಒಂದು ಹಬ್ಬಕ್ಕೆ ಮಾತ್ರ ಒಪ್ಪಿ ಬಿಡು ಆಯ್ತಾ, ಮುಂದೆ ಹೇಗಾಗುತ್ತೋ ಹಾಗೆ ನೋಡೋಣ ಎಂದು ರಮಿಸಿದಂತೆ ಆತನ ತಲೆಯಲ್ಲಿ ಕೈಯಾಡಿಸಿದಳು!

ಇದಕ್ಕೆ, ನಾ ನಿನ್ನ ಮುಂದೆ ಹೇಳಿದ್ದಿಲ್ಲ ಬಿಡು, ನನ್ನ ಮನಸ್ಸು ನಿನಗೆ ಅರ್ಥ ಆಗ್ತಿಲ್ಲ ಎಂದನು ನೋವಿನಿಂದ ದೇವು !

ಇಬ್ಬರೂ ರಾತ್ರಿ ನಿದ್ದೆ ಇಲ್ಲದೇ ಕಳೆದರು, ಬೆಳಿಗ್ಗೆ ಎದ್ದ ತಕ್ಷಣ ಮತ್ತೇ ದೇವು ಸಾಕಿದ ಪ್ರಾಣಿಗಳ ಮುಂದೆ ಹೋಗಿ ಕುಳಿತ, ಅವುಗಳು ಬಂದು ಅವನ ತೊಡೆಯ ಮೇಲೆ ಕುಳಿತು ಕೊಳ್ಳಲು ಪ್ರಯತ್ನಿಸಿದವು! ಎಲ್ಲವನ್ನೂ ಒಂದೇ ಹಿಡಿತಕ್ಕೆ ಅಪ್ಪಿಕೊಂಡು ಮುತ್ತು ಕೊಟ್ಟ, ಕೋಳಿ ಅವನ ಹೆಗಲೇರಿತು ಪ್ರೀತಿಯಿಂದ!

ಛೇ ನಾಳೆಯೊಳಗೆ ಇವು ಯಾವುವೂ ಇರುವುದಿಲ್ಲ, ಊಟಕ್ಕೆ ಜನರು ಬೇರೆ ಜಾಸ್ತಿ, ಒಂದನ್ನೂ ಉಳಿಸಲು ಸಾಧ್ಯವಿಲ್ಲ ನನ್ನಿಂದ!

ದೇವುನ ಮನಸ್ಥಿತಿ ಭಾನುಗೆ ಗೊತ್ತಾಯಿತು! ಅವಳೂ ಎಲ್ಲ ಪ್ರಾಣಿಗಳನ್ನು ಪ್ರೀತಿಯಿಂದ ಸವರಿ ಒಳಗೆ ಬಂದು ತಲೆಯ ಮೇಲೆ ಕೈ ಹೊತ್ತು ಕುಳಿತಳು!

ಮತ್ತೇ ದೇವು ಹತ್ತಿರ ಬಂದು ನಿಂತು, ಸರಿ ದೇವು, ಹಾಗಾದ್ರೆ ಅಂಗಡಿಯಿಂದ ತಂದು ಅಡುಗೆ ಮಾಡೋಣ ಆಯ್ತಾ, ನಿನಗೆ ಈಗ ಸಮಾಧಾನನಾ!

ಇಲ್ಲ ಭಾನು...ಬೇಡವೇ ಬೇಡ ಎನ್ನುವ ಹಾಗಾಗಿದೆ !

ಈಗ ಏನೂ ಹೇಳಲು ತೋಚದೇ ಭಾನು ಮೌನ ವಹಿಸಿದಳು!

ದೇವು ಮೌನದಿಂದ ಕುಳಿತು ತಲೆಯನ್ನು ಗೋಡೆಗಾನಿಸಿ ಕಣ್ಣು ಮುಚ್ಚಿ ಕುಳಿತ!

ಭಾನು ಧಕ್ಕನೆದ್ದು ಬಂದು ಅವನೆಡೆಗೆ ನೋಡಿ ಸರಿ ದೇವು ತರಕಾರಿ ಹಾಕಿ ಅದೇ ರೀತಿಯ ಬಿರ್ಯಾನಿ ಮಸಾಲಾ ಹಾಕಿ ಅಡುಗೆ ಮಾಡೋಣ!

ನೀನು ಹೋಗಿ ಹೂಕೋಸು, ಪಪ್ಪಾಯಿ ಆಲೂಗಡ್ಡೆ, ಬಾಳೆಕಾಯಿ,ಗಟ್ಟಿಯಾಗಿ ಇರುವ ಯಾವುದಾದರೂ ತರಕಾರಿ ಎಲ್ಲಾ ತೆಗೆದುಕೊಂಡು ಬಾ ಎಂದಾಗ!

ದೇವು... ಆಯ್ತು ತರ್ತಾನಿ ಎಂದ ಸಂಭ್ರಮದಿಂದ! ಅವನಿಗೆ ಭಾನು ಒಪ್ಪಿದ್ದೇ ಒಂದು ಖುಷಿ!

ಅವನ ಖುಷಿ ನೋಡಿ ಹೇಗಾದರೂ ಸರಿ, ದೇವು ಮನದಂತೆ ಆಗಲಿ ನೋಡುವ ಎಂದುಕೊಂಡಳು ಭಾನು! ದೇವ್ರೇ, ಶಕ್ತಿ ಕೊಡು ನನಗೆ ಅದೇ ರುಚಿಯನ್ನು ತರಕಾರಿ ಬಳಸಿ ಮಾಡುವ ಹಾಗೆ ಎಂದು ಬೇಡಿಕೊಂಡಳು!

ರಾತ್ರಿಯಲ್ಲಾ ತರಕಾರಿ ಹೆಚ್ಚಿ ಕೊಂಡು, ಮಸಾಲೆ ಮಾಡಿಕೊಂಡು ಬೆಳಿಗ್ಗೆ ಎದ್ದು ಅಡುಗೆಯ ತಯಾರಿ ನಡೆಸಿದಳು!

ಹೇಗೋ ಕಷ್ಟಪಟ್ಟು ಯಾವುದ್ಯಾವುದೋ ಹಿಟ್ಟುಗಳನ್ನು ತರಕಾರಿಗೆ ಕಲಸಿ ಅದನ್ನು ಹಬೆಯಲ್ಲಿ ಬೇಯಿಸಿ ಮತ್ತೇ ಸ್ವಲ್ಪ ಎಣ್ಣೆಯಲ್ಲಿ ಕರಿದು, ಹುರಿದು ರುಬ್ಬಿದ ಮಸಾಲೆ ಹಾಕಿ ರುಚಿಯಾದ ಬಿರ್ಯಾನಿಯ ರೀತಿಯಲ್ಲಿ ಮಾಡಿ ಜೊತೆಗೆ ಗ್ರೇವಿಯನ್ನು ಮಾಡಿದಳು!

ನೋಡಿದರೆ ಉದ್ದುದ್ದ ಹೆಚ್ಚಿ ಮಾಡಿದ ಆ ದೊಡ್ಡ ಗಟ್ಟಿ ಹೋಳುಗಳು ಮಟನ್ ಆಕಾರ ಪಡೆದಂತೆ ಕಾಣುತಿದ್ದವು!

ಗಾಜರ್ ಹಲ್ವಾ, ಬೊಂಡ, ಪೂರಿ, ಅನ್ನ, ರಸಂ ಮಾಡಿದರು ಇಬ್ಬರೂ ಸೇರಿ!

ಕುರಿ, ಕೋಳಿಗಳನ್ನು ಯಾರಿಗೂ ಕಾಣದಂತೆ ಮನೆಯಿಂದ ಸ್ವಲ್ಪ ದೂರ ಒಂದು ಕಡೆಗೆ ಮೂಲೆಗೆ ಕಟ್ಟಿ ಪ್ರೀತಿಯಿಂದ ಮೈ ಸವರಿ ಬಂದನು ದೇವು!

ಇಬ್ಬರಿಗೂ ಒಂದು ರೀತಿಯ ಹೇಳದ ಆತಂಕ ಬಂಧು, ಬಳಗದವರು ನಾವು ಮಾಡಿದ ಅಡುಗೆ ಕಂಡು ಹಿಡಿದರೆ ಏನು ಹೇಳುವುದು ಎಂದು..!

ಒಂದು ವೇಳೆ ಕಂಡು ಹಿಡಿದು ಬೇಸರ ಪಟ್ಟರೆ ಇದ್ದ ವಿಷಯವನ್ನು ಇದ್ದಂತೆ ಹೇಳಿ ಕ್ಷಮೆ ಕೇಳುವುದು ಎಂದು ನಿರ್ಧರಿಸಿದರು!

ಆಶ್ಚರ್ಯವೆಂದರೆ ಬಂದ ಜನರು ಅಡುಗೆಯ ರುಚಿ ಯಾಕೋ ವ್ಯತ್ಯಾಸವಾಗಿದೆ, ಆದರೆ ತುಂಬಾ ರುಚಿಯಾಗಿ ಕೈ ಬೆರಳು ಚೀಪುವಂತಿದೆ , ಎಂದು ಇವರ ಊಟ ಮತ್ತು ಆತಿಥ್ಯವನ್ನು ಹೊಗಳಿ, ನಮಗೂ ಹೀಗೆ ಮಾಡುವುದನ್ನು ಕಲಿಸು ಭಾನು ಎಂದಾಗ, ದೇವು ಭಾನು ಕಡೆಗೆ ತಿರುಗಿ ನಕ್ಕನು ಅಭಿಮಾನದಿಂದ, ಸಂತೋಷದಿಂದ ಹೊರಟ

ಅತಿಥಿಗಳನ್ನು ಬೀಳ್ಕೊಟ್ಟು ಒಳಗೆ ಬಂದರು!

ಏನೋ ಬೇರೇ ರುಚಿ ಇದೆ ಎಂದರೇ ಹೊರತು ಅನುಮಾನ ಪಡಲಿಲ್ಲವಲ್ಲ ಅಷ್ಟ ಸಾಕು ಎನ್ನುವ ಸಾರ್ಥಕತೆ ಇಬ್ಬರಿಗೂ! ಭಾನು ಅಡುಗೆಯಲ್ಲಿ ಆ ರೀತಿಯ ತನ್ನ ಕೈ ಚಳಕ ತೋರಿಸಿದ್ದಳು !

ಎಲ್ಲರೂ ಮನೆಗೆ ಹೋದ ತಕ್ಷಣ ದೇವು ಭಾನುವನ್ನು ಅಪ್ಪಿಕೊಂಡ ಮೌನದಿಂದ! ನೀನು ನನ್ನ ಮೇಲಿಟ್ಟಿರುವ ಪ್ರೀತಿಗೆ ನನ್ನಲ್ಲಿ ಹೇಳಲು ಪದಗಳಿಲ್ಲ ಭಾನು!

ಇಷ್ಟು ದಿನ ನಿನ್ನ ಅಡುಗೆಯನ್ನು ಮೆಚ್ಚುತಿದ್ದೆ ಇವತ್ತು ವಿಸ್ಮಯನಾದೆ ಎಂದು ಅಭಿಮಾನಪಟ್ಟು ಹೇಳಿದಾಗ ಭಾನು ಸಂತೃಪ್ತಿಯಿಂದ ನಕ್ಕಳು! ಬೇರೆ ಕಡೆಗೆ ಬಿಟ್ಟ ಕುರಿ, ಕೋಳಿಯನ್ನು ತಂದಾಗ ಅವು ಮನೆ ತುಂಬಾ ಓಡಾಡುತ್ತಾ ಇರುವುದನ್ನು ನೋಡಿ ಇಬ್ಬರೂ ಅವುಗಳನ್ನು ಮಕ್ಕಳಂತೆ ತಬ್ಬಿ ಕೊಂಡರು! ಅವು ಇವರಿಗೆ ಕೃತಜ್ಞತೆ ಸಲ್ಲಿಸುವಂತೆ ತಮ್ಮ ತಲೆಯನ್ನು ಇವರಿಗೆ ಆನಿಸಿಕೊಂಡು ಕುಳಿತವು!

ಪುರಂದರರೆಂಬ ದಾಸ ಸಾಹಿತ್ಯದ ಅಶ್ವಿನಿ ದೇವತೆ

। ಕಾವೇರಿ ಭಾರದ್ವಾಜ್

ದೇವರ್ಷಿ ನಾರದರ ಅಂಶವೆಂದೇ ಪ್ರಖ್ಯಾತರಾದ ಪುರಂದರದಾಸರು ಕರ್ನಾಟಕ ಮಹಾರಾಷ್ಟ್ರದ ಗಡಿಯಲ್ಲಿರುವ ಪುರಂದರಗಡದಲ್ಲಿ ಜನಿಸಿದರು ಎಂಬ ಪ್ರತೀತಿ ಇದೆ. ಶ್ರೀನಿವಾಸ ಎಂಬ ಹೆಸರಿನಿಂದ ಖ್ಯಾತಿ ಪಡೆದಿದ್ದ ಇವರು,ಅಂದಿನ ವಿಜಯನಗರ ಸಾಮ್ರಾಜ್ಯವನ್ನು ಆಳ್ವಿಕೆ ನಡೆಸುತ್ತಿದ್ದ ಶ್ರೀಕೃಷ್ಣದೇವರಾಯನಿಂದಲೇ " ನವಕೋಟಿ ನಾರಾಯಣ " ಎಂಬ ಬಿರುದನ್ನು ಪಡೆದಿದ್ದರು.

ಕಡು ಲೋಭಿಯಾಗಿದ್ದ ಇವರನ್ನು ಶ್ರೀ ಹರಿಯೇ ವೃದ್ಧ ಬ್ರಾಹ್ಮಣನ ವೇಷದಲ್ಲಿ ಬಂದು ಪರೀಕ್ಷಿಸಿ ಜ್ಞಾನದ ಕಣ್ಣನ್ನು ತೆರೆಸಿದ ಎಂಬ ಕತೆಯಿದೆ. ಭಗವಂತನ ದರ್ಶನದಿಂದ ತಮ್ಮ ಸಮಸ್ತ ಲೋಭವನ್ನು ತೊರೆದು ಹರಿದಾಸ ಪಂಥಕ್ಕೆ ಸೇರಿ ದಾಸವರೇಣ್ಯರಾದರು. ಇವರು ತಿರುಪತಿ ತಿಮ್ಮಪ್ಪನ ಹರಕೆಯಿಂದ ಜನಿಸಿದವರಾದ ಹಿನ್ನೆಲೆಯಲ್ಲಿ ಶ್ರೀನಿವಾಸ ಎಂಬ ಹೆಸರನ್ನು ಪಡೆದರು ಎಂಬ ಐತಿಹ್ಯವಿದೆ. ತಿರುಪತಿ ತಿಮಪ್ಪನ ಕುರಿತಾಗಿ ಅನೇಕ ಕೃತಿಗಳನ್ನು ಪುರಂದರದಾಸರು ರಚಿಸಿದ್ದಾರೆ.

ದಾಸರೆಂದರೆ ಪುರಂದರ ದಾಸರಯ್ಯ ಎಂದು ತಮ್ಮ ಗುರುಗಳಾದ ವ್ಯಾಸರಾಜರಿಂದಲೇ ಪ್ರಶಂಸೆ ಪಡೆದ ಪುರಂದರದಾಸರು ಕರ್ನಾಟಕ ಸಂಗೀತ ಪಿತಾಮಹ ಎಂದೆನಿಸಿಕೊಂಡರು. ಇವರ ರಚನೆಗಳು ಪುರಂದರೋಪನಿಷತ್ತು ಎಂದು ಕರೆಯಲ್ಪಟ್ಟಿತು. ಉಗಾಭೋಗ, ಸುಳಾದಿಗಳನ್ನು ಸೇರಿ ಸುಮಾರು 4.75 ಲಕ್ಷ ಕೃತಿಗಳನ್ನು ರಚಿಸಿದ್ದಾರೆ ಎಂದು ಹೇಳಲಾಗಿದೆ. ಇದರ ಕುರಿತು ಸಾಕಷ್ಟು ಅಭಿಪ್ರಾಯಗಳೂ ಇವೆ. ಪುರಂದರರ ಕೃತಿಗಳು ಸಾಹಿತ್ಯ, ಸಂಗೀತ ಮತ್ತು ಸ್ವಧರ್ಮಗಳ ತ್ರಿವೇಣಿ ಸಂಗಮವಾಗಿವೆ. ಪುರಂದರದಾಸರು ಪಾಂಡುರಂಗನ ಅಪ್ಪಣೆ ಮೇರೆಗೆ ಪಂಪಾಕ್ಷೇತ್ರಕ್ಕೆ ಹೋಗಿ ವ್ಯಾಸರಾಜರ ಉಪದೇಶ ಪಡೆದು ಪುರಂದರ ವಿಠಲ ಎಂಬ ಅಂಕಿತ ಪಡೆದರೆಂಬ ಪ್ರತೀತಿ ಇದೆ. ದೇಶದ ಅನೇಕ ತೀರ್ಥ ಕ್ಷೇತ್ರಗಳನ್ನು ದರ್ಶಿಸಿ ಆಯಾ ಕ್ಷೇತ್ರದ ಮೂರ್ತಿಗಳ ಕುರಿತು, ತೀರ್ಥ, ಸ್ಥಳ ಪುರಾಣಗಳ ಕುರಿತು ನೂರಾರು ದೇವರ ನಾಮಗಳನು ರಚಿಸಿದಾರೆ.

ಸಮಾಜವನ್ನು ತಿದ್ದುವ ದೆಸೆಯಲ್ಲಿ ಪುರಂದರದಾಸರ ಪದಗಳು ಬಹಳ ಪ್ರಭಾವ ಬೀರಿದೆ. ಪುಷ್ಯ ಅಮಾವಾಸ್ಯೆಯ ದಿನ ಪುರಂದರದಾಸರು ಇಹಲೋಕ ತ್ಯಜಿಸಿದರು. ದಾಸ ಸಾಹಿತ್ಯಕ್ಕೆ ಅಪ್ರತಿಮ ಕೊಡುಗೆ ನೀಡಿರುವ ಪುರಂದರದಾಸರ ಆರಾಧನೆಯನ್ನು ದೇಶದ ವಿವಿಧೆಡೆ ಅದರಲ್ಲೂ ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಆಚರಿಸಲಾಗುತ್ತದೆ.

ದಾಸ ಸಾಹಿತ್ಯಕ್ಕೆ ತನ್ನದೇ ಆದ ಸುದೀರ್ಘ ಇತಿಹಾಸವಿದೆ. ದಾಸರ ಸಮೂಹ ಮನುಕುಲಕ್ಕೆ ಬಹುದೊಡ್ಡ ಸಂಪತ್ತನ್ನು ನೀಡಿದೆ. ಈ ಉತ್ತಮ ಸಾಹಿತ್ಯ ಜೀವನ ಪಾಠಗಳೊಂದಿಗೆ ವ್ಯಕ್ತಿತ್ವ ರೂಪಿಸಲು ಸಹಕಾರಿ. ಇಂತಹ ದಾಸ ಸಾಹಿತ್ಯಕ್ಕೆ ಅಪಾರ ಮಟ್ಟದ ಕೊಡುಗೆಯನ್ನು ಪುರಂದರದಾಸರು ತಮ್ಮ ದಾಸರಪದಗಳ ಮೂಲಕ ನೀಡಿದ್ದಾರೆ. ಇವರನ್ನು ದಾಸ ಸಾಹಿತ್ಯದ ಅಶ್ವಿನಿ ದೇವತೆಗಳಲ್ಲಿ ಒಬ್ಬರು ಎಂದು ಪರಿಗಣಿಸಲಾಗಿದೆ. ಭಕ್ತಿಗೆ ದಾಸ ಸಾಹಿತ್ಯ ಭದ್ರ ಬುನಾದಿಯಾಗಿದೆ.

ಕೃತಯುಗದಲ್ಲಿ ಧ್ಯಾನದಿಂದ, ಯಜ್ಞಯಾಗಾದಿಗಳಿಂದ ತ್ರೇತಾಯುಗದಲ್ಲಿ, ಅರ್ಚನೆಯಿಂದ ದ್ವಾಪರಯುಗದಲ್ಲಿ ಮತ್ತು ಕಲಿಯುಗದಲ್ಲಿ ಕೀರ್ತನೆ ಮಾತ್ರದಿಂದಲೇ ಭಗವಂತ ಮುಕ್ತಿಯನ್ನು ನೀಡುತ್ತಾನೆ ಎಂದು ಪುರಂದರದಾಸರು ಹಾಡಿದ್ದಾರೆ.

ಮಾನವ ಜನ್ಮ ದೊಡ್ಡದು ಇದನ್ನು ಹಾಳು ಮಾಡಿಕೊಳ್ಳಬೇಡಿರೋ ಹುಚ್ಚಪ್ಪಗಳಿರಾ, ಆಚಾರವಿಲ್ಲದೆ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ, ಆದದ್ದೆಲ್ಲಾ ಒಳಿತೇ ಆಯಿತು, ಗಿಳಿಯು ಪಂಜರದೊಳಿಲ್ಲ ರಾಮ,ಉದರ ವೈರಾಗ್ಯವಿದು ನಮ್ಮ ಪದುಮನಾಭನಲಿ, ಆರು ಹಿತವರು ನಿನಗೆ ಈ ಮೂವರೊಳಗೆ ಸೇರಿದಂತೆ ಅನೇಕ ಮನುಷ್ಯನ ಜೀವನಕ್ಕೆ ಅವಶ್ಯವಾದ ತಾತ್ವಿಕ ನೆಲೆಗಟ್ಟಿನ ಕೀರ್ತನೆಗಳನ್ನು ಪುರಂದರದಾಸರು ರಚಿಸಿದ್ದಾರೆ. ಈ ಕೀರ್ತನೆಗಳು ಸಾಮಾನ್ಯವಾದ ಆಡುಭಾಷೆಯ ಸಾಹಿತ್ಯದಲ್ಲಿದ್ದು ಬುದ್ದಿಮಾತುಗಳಾಗಿವೆ. ಅವರ ಸಾಹಿತ್ಯ ಪ್ರಕಾರದಲ್ಲಿ ಸಾಮಾಜಿಕ ವಿಮರ್ಶೆ ಕಂಡುಬರುತ್ತದೆ.

ಪುರಂದರದಾಸರ ಕೃತಿಗಳನ್ನು ಪಟ್ಟಿ ಮಾಡಲು ಹೊರಟರೆ ಅದು ಒಂದೆರಡು ದಿನಗಳಲ್ಲಿ ಆಗುವಂತಹ ಕೆಲಸವಲ್ಲ. ಅವರು ರಚಿಸಿರುವ ಕೃತಿಗಳು ಎಣಿಕೆಗೆ ಮೀರಿದ್ದು. ಭಗವಂತನ ಸ್ಮರಣೆಯನ್ನು ತಮ್ಮ ಕೃತಿಗಳ ಮೂಲಕ ಎಲ್ಲೆಡೆ ಹರಡಿದ್ದಾರೆ. ತಮ್ಮ ಪ್ರತೀ ದೇವರನಾಮದಲ್ಲೂ ಪುರಂದರ ವಿಠಲ ಎಂಬ ಅಂಕಿತದೊಂದಿಗೆ ಎಲ್ಲ ಹಾಡುಗಳನ್ನು ತಮ್ಮ ಆರಾಧ್ಯದೈವಕ್ಕೆ ಅರ್ಪಿಸಿ ದ್ದಾರೆ. ವಿಷ್ಣು,ನೃಸಿಂಹ ಸೇರಿದಂತೆ ದಶಾವತಾರಗಳಾದ ರಾಮ, ಕೃಷ್ಣರ ದೇವರ ನಾಮಗಳು, ಈಶ್ವರ, ಲಕ್ಷ್ಮೀ, ಗಣೇಶ ಸೇರಿದಂತೆ ಭಗವಂತನ ರೂಪಗಳ ಕುರಿತು ನೂರಾರು ಕೃತಿಗಳನ್ನು ರಚಿಸಿದ್ದಾರೆ. ಭಗವಂತನನ್ನು ಮನುಷ್ಯನಂತೆ ಕಂಡು ಅವನ ಲೌಕಿಕ ಗುಣಗಳನ್ನು ಕೃತಿಯ ಮೂಲಕ ಹಾಡಿದ್ದಾರೆ, ಇದಕ್ಕೆ ಕೂಸನು ಕಂಡೀರಾ ಮತ್ತು ಜಗದೋದ್ಧಾರನ ಆಡಿಸಿದಳೆ ಯಶೋಧೆ ದೇವರ ನಾಮಗಳು ಉತ್ತಮ ಉದಾಹರಣೆಗಳು.

ಕೇವಲ 50 ರೂ.ನಿಂದ ಭಾರತಿ ಟೀಚರ್ ಏಳನೇ ತರಗತಿ ಚಿತ್ರ ವೀಕ್ಷಿಸಬಹುದು

ಭಾರತಿ ಟೀಚರ್ ಏಳನೇ ತರಗತಿ ಚಿತ್ರವನ್ನು ಕೇವಲ ಐವತ್ತು ರೂಪಾಯಿ ಟಿಕೆಟ್ ದರದಲ್ಲಿ ಸಿನಿಮಾ ನೋಡಬಹುದೆಂದು ನಿರ್ಮಾಪಕ ರಾಘವೇಂದ್ರ ರೆಡ್ಡಿ ಸಂಕ್ರಾಂತಿ ಹಬ್ಬಕ್ಕೆ ಉಡುಗೊರೆ ಅಂತ ಪ್ರಿ ರಿಲೀಸ್ ಇವೆಂಟ್ ಕಾರ್ಯಕ್ರಮದಲ್ಲಿ ಘೋಷಣೆ ಮಾಡಿದ್ದಾರೆ. ಇದು ಕರ್ನಾಟಕದಲ್ಲಿರುವ ಸಿಂಗಲ್ ಸ್ಕ್ರೀನ್ ಚಿತ್ರಮಂದಿರಗಳಿಗೆ ಮಾತ್ರ ಅನ್ವಯವಾಗುತ್ತದೆ.

ಸಿರಗುಪ್ಪ ಮೂಲದ ಉದ್ಯಮಿ ರಾಘವೇಂದ್ರ ರೆಡ್ಡಿ ಅವರು ಪೂಜ್ಯಾಯ ಫಿಲಂಸ್ ಅಡಿಯಲ್ಲಿ ಬಂಡವಾಳ ಹೂಡಿದ್ದಾರೆ. ಗುರುರಾಜ್ ರೆಡ್ಡಿ ಸಹ ನಿರ್ಮಾಪಕರಾಗಿ ಗುರುತಿಸಿಕೊಂಡಿದ್ದಾರೆ. ಕಥೆ,ಚಿತ್ರಕಥೆ,ಸಂಭಾಷಣೆ,ಸಾಹಿತ್ಯ, ಸಂಗೀತ ಮತ್ತು ನಿರ್ದೇಶನವನ್ನು ಎಂ.ಎಲ್.ಪ್ರಸನ್ನ ನಿರ್ವಹಿಸಿದ್ದಾರೆ. ಕ್ರಿಷಿ ಸಂಸ್ಥೆಯ ವೆಂಕಟ್‌ಗೌಡ ಕ್ರಿಯೇಟೀವ್ ಹೆಡ್ ಆಗಿರುತ್ತಾರೆ.

ಕನ್ನಡ ಪರ ಹೋರಾಟಗಾರನಾಗಿ ರೋಹಿತ್ ರಾಘವೇಂದ್ರ ನಾಯಕ. ಶಿಕ್ಷಕರಾಗಿ ಸಿಹಿಕಹಿಚಂದ್ರು, ಟೈಟಲ್ ರೋಲ್‌ದಲ್ಲಿ ಕು. ಯಶಿಕಾ, ಕಾಮಿಡಿ ಕಿಲಾಡಿಗಳು ಖ್ಯಾತಿಯ ಗೋವಿಂದೇಗೌಡ ಮೊದಲಬಾರಿ ಖಳನಾಗಿ ಕಾಣಿಸಿಕೊಂಡರೆ, ಇನ್ಸ್‌ಪೆಕ್ಟರ್ ಆಗಿ ಅಶ್ವಿನ್‌ಹಾಸನ್. ಉಳಿದಂತೆ ದಿವ್ಯಾ ಅಂಚನ್, ಬೆನಕಾ ನಂಜಪ್ಪ, ಸೌಜನ್ಯಸುನಿಲ್, ಎಂ.ಜೆ.ರಂಗಸ್ವಾಮಿ ಮುಂತಾದವರು ನಟಿಸಿದ್ದಾರೆ. ಛಾಯಾಗ್ರಹಣ ಎಂ.ಬಿ.ಹಳ್ಳಿಕಟ್ಟಿ, ಸಂಕಲನ ಸುಜಿತ್‌ನಾಯಕ್, ವಾದ್ಯ ಸಂಯೋಜನೆ ಕೆ.ಎಂ.ಇಂದ್ರ, ನೃತ್ಯ ಕಂಬಿರಾಜ್, ಕಾರ್ಯಕಾರಿ ನಿರ್ಮಾಪಕ ರಾಘವ್‌ಸೂರ್ಯ-ದರ್ಶನ್‌ಗೌಡ ಅವರದಾಗಿದೆ.

ಇನ್ನು ಚಿತ್ರವನ್ನು ಯಾಕೆ ನೋಡಬೇಕು ಎಂದು ನಿರ್ದೇಶಕರು ವಿವರ ನೀಡಿದ್ದಾರೆ. ಇಡೀ ಕರ್ನಾಟಕ ಕನ್ನಡಿಗರಿಂದ ತುಂಬಿರಬೇಕು. ನಾನು ಮನಸ್ಸು ಮಾಡಿ ಒಂದು ಹಳ್ಳಿ ಬದಲಾಯಿಸಿದೆ. ಹಾಗೆಯೇ ಇಲ್ಲಿ ಲಕ್ಷಾಂತರ ಮಕ್ಕಳು ಇದ್ದಾರೆ. ಪ್ರತಿ ವಿದ್ಯಾರ್ಥಿ ಕನಿಷ್ಠ 10 ಮಕ್ಕಳಿಗೆ ವಿದ್ಯಾದಾನ ಮಾಡಿದರೆ, ಇಡೀ ರಾಜ್ಯ ಕನ್ನಡಿಗರಿಂದ ತುಂಬಿರುತ್ತದೆಂದು ಮನವಿ ಮಾಡಿರುವ ಪಾತ್ರವನ್ನು ಹಾಲಿ ಕಾರ್ಮಿಕ ಸಚಿವರಾದ ಸಂತೋಷ್.ಎಸ್.ಲಾಡ್ ನಿಭಾಯಿಸಿದ್ದಾರೆ. ಚಿತ್ರ ನೋಡಿ ಸ್ಪೂರ್ತಿಗೊಳ್ಳುವ ಮಕ್ಕಳು ಕನಿಷ್ಠ 10 ಮಂದಿಗೆ ವಿದ್ಯಾದಾನ ಮಾಡುತ್ತಾರೆ. ದೊಡ್ಡವರು ಸಿನಿಮಾ ನೋಡಿ ಮಕ್ಕಳ ಮನಸ್ಥಿತಿ ಅರ್ಥಮಾಡಿಕೊಂಡು ಅವರಿಗೆ ಸ್ಪೂರ್ತಿ ಜತೆಗೆ ಪ್ರೋತ್ಸಾಹ ನೀಡಿದರೆ ಅವರುಗಳು ಬೇರೆಯವರಿಗೆ ಮಾದರಿಯಾಗುತ್ತಾರೆ. ನಿರ್ಮಾಪಕರು ಐವತ್ತು ರೂಪಾಯಿ ಟಿಕೆಟ್ ದರದಲ್ಲಿ ಚಿತ್ರ ನೋಡಬಹುದೆಂದು ಜನತೆಯನ್ನು ಕೋರಿಕೊಂಡಿದ್ದಾರೆ.

ಭಾರತಿ ಎನ್ನುವ ಏಳನೇ ತರಗತಿ ವಿದ್ಯಾರ್ಥಿಯೊಬ್ಬಳು ಟೀಚರ್ ಕನಸನ್ನು ಹೇಗೆ ನನಸು ಮಾಡುತ್ತಾಳೆ. ಇದರಿಂದ ಮುಂದಕ್ಕೆ ಕರ್ನಾಟಕದಲ್ಲಿ ಕನ್ನಡ ಹಾಗೂ ಶಿಕ್ಷಣ ಎಷ್ಟು ಮುಖ್ಯ ಜತೆಗೆ ಮಗು ನನ್ನ ಹಾಗೆ ಲಕ್ಷಾಂತರ ಮಕ್ಕಳು ಕನಿಷ್ಠ ಹತ್ತು ಜನರಿಗೆ ಕನ್ನಡ ಕಲಿಸಬೇಕು. ಅದಕ್ಕೊಂದು ಯೋಜನೆ ಬೇಕು. ಇವರೆಡು ಅಂಶಗಳನ್ನು ಕ್ಲೈಮಾಕ್ಸ್‌ದಲ್ಲಿ ಹೇಳಲಾಗಿದೆ. ಚಿತ್ರವು ಕನ್ನಡ ಕಾಳಜಿಯ ಕಥೆಯಾಗಿದೆ ಎಂದು ಎಂ.ಎಲ್.ಪ್ರಸನ್ನ ಮಾಹಿತಿ ಹಂಚಿಕೊಂಡಿದ್ದಾರೆ.

ವೆಂಕಟ್‌ಗೌಡ ಸಾರಥ್ಯದಲ್ಲಿ ಚಿತ್ರವು ಇದೇ ಶುಕ್ರವಾರದಂದು ಸುಮಾರು 100 ಕೇಂದ್ರಗಳಲ್ಲಿ ರಾಜ್ಯಾದ್ಯಂತ ತೆರೆ ಕಾಣುತ್ತಿದೆ.

ತುಳು ಹಾಗೂ ಜವಾರಿ ಭಾಷೆಯಲ್ಲಿ ಹಾಲಿವುಡ್ ಸಿನಿಮಾಗಳ ವೈಭವ

ಕನ್ನಡಿಗರ 'ಟಾಕೀಸ್' ಆಪ್ ಓಟಿಟಿಯಿಂದ ಹೊಸ ಇತಿಹಾಸ

ಡಿಜಿಟಲ್ ಮನೋರಂಜನೆಯ ಹೊಸ ಅಧ್ಯಾಯವನ್ನು ಟಾಕೀಸ್ ಆ ಯಪ್ ಓಟಿಟಿ ಬರೆದಿದೆ. ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಹಾಲಿವುಡ್ ಸಿನಿಮಾಗಳು ತುಳು ಭಾಷೆಯಲ್ಲಿ ಡಬ್ ಆಗಿ ಪ್ರೇಕ್ಷಕರಿಗೆ ಲಭ್ಯವಾಗುತ್ತಿದ್ದು, ಜೊತೆಗೆ ಉತ್ತರ ಕರ್ನಾಟಕದ ಜವಾರಿ ಭಾಷೆಯಲ್ಲೂ ಹಾಲಿವುಡ್ ಚಿತ್ರಗಳನ್ನು ಪ್ರಸಾರ ಮಾಡುವ ಮಹತ್ವದ ಪ್ರಯತ್ನ ಪ್ರಾರಂಭವಾಗಿದೆ. ಪ್ರಾದೇಶಿಕ ಭಾಷೆಗಳ ಗೌರವ ಮತ್ತು ವ್ಯಾಪ್ತಿಯನ್ನು ವಿಸ್ತರಿಸುವ ಈ ಕಾರ್ಯವನ್ನು ಟಾಕೀಸ್ ಆ ಯಪ್ - ಸೋನಿ ಪಿಕ್ಚರ್ಸ್ ಫಿಲ್ಮ್ಸ್ ಅವರ ಸಹಯೋಗದಲ್ಲಿ ಯಶಸ್ವಿಯಾಗಿ ಮುನ್ನಡೆಸುತ್ತಿದೆ.

ತಮ್ಮ ಪ್ರಾದೇಶಿಕ ಭಾಷೆಯಲ್ಲಿ ಸಿನಿಮಾ ನೋಡಿ ಆನಂದಿಸಬೇಕೆನ್ನುವ ವೀಕ್ಷಕರಿಗೆ ಇದೊಂದು ಸಿಹಿ ಸುದ್ದಿ ಎಂಬುದು ಸಂಸ್ಥೆಯ ಅನಿಸಿಕೆ.

ಇದು ಭಾರತದಲ್ಲಿ ಆಮೇಜಾನ್ ಪ್ರೈಮ್, ನೆಟ್ ಫ್ಲಿಕ್ಸ್, ಜೀಯೋ ಹಾಟ್ ಸ್ಟಾರ್ ನಂತರ ನಾಲ್ಕನೇ ಓಟಿಟಿಯಾಗಿ ಹಾಲಿವುಡ್ ಚಿತ್ರಗಳನ್ನು ಸ್ಥಳೀಯ ಭಾಷೆಯಲ್ಲಿ ಪ್ರದರ್ಶಿಸುವ ವೇದಿಕೆಯಾಗಿ ಟಾಕೀಸ್ ಆ ಯಪ್ ಹೆಸರಾಗಿದೆ. ವಿಶೇಷವೇನೆಂದರೆ ಪ್ರಥಮ ಬಾರಿಗೆ ತುಳು ಮತ್ತು ಜವಾರಿ ಭಾಷೆಗಳಲ್ಲಿ ಪ್ರಸಾರವಾಗುತ್ತಿದೆ. ಈ ಪ್ರಯತ್ನಕ್ಕೆ ತುಳುವಿನಲ್ಲಿ ಅಸ್ತ್ರ ಪ್ರೊಡಕ್ಷನ್ ಹಾಗೂ ಸಿಟಡೆಲ್ ಡೆವಲಪರ್ಸ್ ಪ್ರಾಯೋಜಕರಾಗಿ ಜೊತೆಯಾದರೆ, ಜವಾರಿ ಭಾಷೆಗೆ ಮಂಗಳಮ್ ಪೈಪ್ಸ್ ಜೊತೆಯಾಗಿದ್ದಾರೆ.

ಸ್ಪೈಡರ್ ಮ್ಯಾನ್, ಗಾಡ್ಜಿಲ್ಲ, ಕರಾಟೆ ಕಿಡ್, ಅನಕೊಂಡ, ಮೆನ್ ಇನ್ ಬ್ಲಾಕ್ ಸೇರಿದಂತೆ ಹಲವು ಸಿನಿಮಾಗಳು ದೇಸಿ ಭಾಷೆಯಲ್ಲಿ ಲಭ್ಯವಾಗಲಿದೆ.

ಹ್ಯಾಟ್ರಿಕ್ ಹೀರೋ ಡಾ. ಶಿವರಾಜ್ ಕುಮಾರ್ ಅವರಿಂದ ಲೋಕಾರ್ಪಣೆಗೊಂಡ ಟಾಕೀಸ್ ಆ ಯಪ್ ಕರಾವಳಿಯ, ಕನ್ನಡದ ಮತ್ತು ಇತರೆ ಪ್ರಾದೇಶಿಕ ಕಲಾವಿದರಿಗೊಂದು ದೊಡ್ಡ ಡಿಜಿಟಲ್ ವೇದಿಕೆಯಾಗಿ ಅವಕಾಶ ಕಲ್ಪಿಸಿದೆ. ಸಿನಿಮಾಗಳು, ವೆಬ್ ಸೀರಿಸ್, ಕಿರುಚಿತ್ರಗಳು, ಕಾರ್ಟೂನ್ ಶೋಗಳು, ಕಾಮಿಡಿ, ಡ್ರಾಮಾ ರಿಯಾಲಿಟಿ ಶೋಗಳು ಮತ್ತು ಟಾಕೀಸ್ ಕಿಚನ್ ಮುಂತಾದ ವಿಭಿನ್ನ ಕಾರ್ಯಕ್ರಮಗಳ ಜತೆಗೆ ಈಗ ವಿಶ್ವ ಸಿನಿಮಾವನ್ನು ಸ್ವಂತ ಭಾಷೆಯಲ್ಲಿ ನೋಡಬಹುದಾದ ವೇದಿಕೆ ಒದಗಿಸಿದೆ ಟಾಕೀಸ್ ಆ ಯಪ್.

ಪ್ರಾದೇಶಿಕ ಭಾಷೆಗಳ ವೈಭವವನ್ನು ಜಾಗತಿಕ ತಾಣಕ್ಕೆ ತಲುಪಿಸುವಲ್ಲಿ ಇದು ಕೇವಲ ತಂತ್ರಜ್ಞಾನ ಪ್ರಗತಿ ಅಲ್ಲ, ಸಂಸ್ಕೃತಿ ಸಂರಕ್ಷಣೆಯ ಮೌಲ್ಯಯುತ ಹೆಜ್ಜೆ. ಭಾಷೆ ಬದುಕಿದಾಗ ಸಂಸ್ಕೃತಿ ಬಾಳುತ್ತದೆ ಎಂಬ ನಂಬಿಕೆಗೆ ಟಾಕೀಸ್ ಆ ಯಪ್ ಪ್ರಾಯೋಗಿಕ ಸಾಕ್ಷಿಯಾಗಿದೆ.

ಅಮೃತಾಂಜನ್ ಶಾರ್ಟ್ ಮೂವಿ ಈಗ ಬಿಗ್ ಮೂವಿ

ಅಮೃತಾಂಜನ್ ಚಾಲೆಂಜಸ್ ಬಗ್ಗೆ ಡೈರೆಕ್ಟರ್ ಟಾಕ್

ಅಮೃತಾಂಜನ್ ಶಾರ್ಟ್ ಮೂವಿ ಎಲ್ಲರಿಗೂ ನೆನಪಿದ್ದೆ ಇದೆ. ನಕ್ಕು ನಕ್ಕು ಖುಷಿಯಾಗಿದ್ದರು. ಇದೀಗ ಅದೇ ತಂಡ ಸಿನಿಮಾವೊಂದನ್ನ ಮಾಡಿದೆ. ನಿರ್ದೇಶಕ ಜ್ಯೋತಿ ರಾವ್ ಮೋಹಿತ್ ಅನುಭವವನ್ನ ಹಂಚಿಕೊಂಡಿದ್ದಾರೆ.

ಅಮೃತಾಂಜನ್ ಹೆಸರಿನಲ್ಲೇ ಮೂವಿ ಮಾಡೋದಕ್ಕೆ ಕಾರಣ..

ಅಮೃತಾಂಜನ್ ಶಾರ್ಟ್ ಮೂವಿಗೂ ಅಮೃತಾಂಜನ್ ಸಿನಿಮಾಗೂ ಬಹಳ ವ್ಯತ್ಯಾಸವಿದೆ. ನಾನು ಇದಕ್ಕೂ ಮೊದಲು ಸೋಡಾಬುಡ್ಡಿ ಎಂಬ ಸಿನಿಮಾ ಮಾಡಿದ್ದೆ ಅದು ಸೋತು ಹೋಯ್ತು. ಆಮೇಲೆ ಕೆಲಸ ಇಲ್ಲದೆ ಇದ್ದಾಗ ಒಂದು ಶಾರ್ಟ್ ಮೂವಿ ಮಾಡಿದ್ದೆ, ಅದೇ ಅಮೃತಾಂಜನ್. ಇತಿಹಾಸದ ಥರನೇ ಆಗೋಯ್ತು. ಆಮೇಲೆ ಏನಾದ್ರು ಮಾಡ್ಬೇಕು ಅಂತ ಯೋಚ್ನೆ ಮಾಡ್ತಾ ಇದ್ದಾಗ ಅಮೃತಾಂಜನ್ ಸಿನಿಮಾವನ್ನೇ ಬಿಗ್ ಸ್ಕ್ರೀನ್ ಗೆ ಮಾಡಣಾ ಅಂತ ನಿರ್ಧಾರ ಮಾಡುದ್ವಿ. ಸಿನಿಮಾ ಫಾರ್ಮೆಟ್ ಗೆ ಏನೆಲ್ಲಾ ಬೇಕೋ ಅದೆಲ್ಲವನ್ನು ಮಾಡಿದ್ದೀವಿ.

ಶಾರ್ಟ್ ಮೂವಿ ಗೆದ್ದಿದೆ.. ಮೂವಿ ಮೇಲೆ ನಿರೀಕ್ಷೆ..

ಈ ಸಿನಿಮಾದ ಮೇಲೂ 100% ನಿರೀಕ್ಷೆಯನ್ನ ಇಟ್ಟುಕೊಳ್ಳಬಹುದು. ಎಷ್ಟು ಡೀಪ್ ಆಗಿ ವರ್ಕ್ ಮಾಡಿದ್ದೀವಿ ಅಂದ್ರೆ ಒಂದು ವರ್ಷ ಕೂತು ಕಥೆ ಬರೆದಿದ್ದೀವಿ, 3 ತಿಂಗಳು ರಿಹರ್ಸಲ್ ಮಾಡಿದ್ದೀವಿ, ಸೇಮ್ ಟೀಂ ವರ್ಕ್ ಮಾಡಿದ್ದೀವಿ. ಸಿನಿಮಾ ನೋಡುವಾಗ ಮನಸ್ಸಾರೆ 40-45 ಸಲ ಮನಸ್ಸಾರೆ ನಗಬಹುದು. ಪ್ರತಿ ಸೀನ್ ನಲ್ಲೂ ನಗುವಿಗೆ ಪ್ರಾಮುಖ್ಯತೆ ನೀಡಿದ್ದೇವೆ. ಶಾರ್ಟ್ ಫಿಲ್ಮ್ ನಲ್ಲಿ ಏನು ಹೊಸವಿಷಯ ಕೊಟ್ವಿ, ಇಲ್ಲು ಒಂದಷ್ಟು ಹೊಸ ವಿಷಯಗಳನ್ನ ಜನರಿಗೆ ಕೊಟ್ಟಿದ್ದೀವಿ. ನಾನು ಕುಡಿಯೋದು ಬಿಟ್ಟರೆ ನೀನು ಮೇಕಪ್ ಹಾಕೋದು ಬಿಡ್ತೀಯಾ. ಈ ಡೈಲಾಗ್ ಒಂದು ಕ್ಯಾರಿ ಮಾಡಿದ್ದೀವಿ. ಬಿಟ್ರೆ ಕಥೆ ಎಳೆ ತುಂಬಾನೇ ಹೊಸದಾಗಿದೆ. ಪ್ರತಿಯೊಬ್ಬ ತಂದೆ - ತಾಯಿನು ಮಕ್ಕಳಿಗೆ ಈ ಥರ ಮಾಡ್ಬೇಕು ಅಂದ್ಕೊಳ್ತಾರೆ.

ಅದೇ ಟೈಟಲ್ ನ ಸಿನಿಮಾ ಮಾಡೋಕೆ ಏನು ಚಾಲೆಂಜ್ ಅನ್ಸಿದ್ದು..

ನಾವೂ ಸಿನಿಮಾ ಮಾಡೋಕೆ ಹೊರಟಾಗ ನೀವೂ ಶಾರ್ಟ್ ಫಿಲ್ಮ್ ಮೇಕರ್ಸ್ ಅಂದ್ರು, ಶಾರ್ಟ್ ಫಿಲ್ಮ್ ಮಾಡಿದಂಗೆ ಮಾಡುದ್ರೆ ಯಾರು ಸಿನಿಮಾ ನೋಡಲ್ಲ. ಮೊಬೈಲ್ ನೋಡೋ ವೀವರ್ಸ್ ಥಿಯೇಟರ್ ಗೆ ಬರಲ್ಲ, ಇದು ವರ್ಕೌಟ್ ಆಗಲ್ಲ ಹೀಗೆ ಸಾಕಷ್ಟು ಚಾಲೆಂಜಸ್ ಬಂತು. ನಾರ್ಮಲ್ ಆಗಿ ಹೊಸದಾಗಿ ಮಾಡ್ತೀವಿ ಅಂದಾಗ ಈ ರೀತಿಯ ಮಾತುಗಳು ಸರ್ವೇ ಸಾಮಾನ್ಯ. ಸೆನ್ಸಾರ್ ಆಗಿದೆ. ಕರೆಕ್ಷನ್ ಇದ್ರೆ ಒಳಗೆ ಕರೆದು ಹೇಳ್ತಾರೆ. ಆದರೆ ಅವರೆ ಬಂದು, ಕೈ ಕುಲುಕಿ ತುಂಬಾ ಚೆನ್ನಾಗ್ ಮಾಡಿದ್ದೀಯಾ ಸಿನಿಮಾನ ಅಂತ ಹೇಳಿದ್ರು. ಅದೊಂದು ಈಗ ಪ್ಲಸ್ ಪಾಯಿಂಟ್. ಫ್ಯಾಮಿಲಿ ಆಡಿಯನ್ಸ್ ಆಗಿರಬಹುದು, ಯೂಥ್ಸ್ ಆಗಿರಬಹುದು ಯಾರಿಗೂ ಬೋರ್ ಹೊಡೆಸಲ್ಲ. ಇದೊಂದು ಟ್ರೆಸ್ ಬಸ್ಟರ್ ಥರ ಇರುತ್ತೆ ಸಿನಿಮಾ. ಲೈಫ್ ನಲ್ಲಿ ನಿಮ್ಗೆನಾದ್ರೂ ಬೇಜಾರಾಗಿದ್ರೆ ನಮ್ಮ ಸಿನಿಮಾಗೆ ಬನ್ನಿ ಮನಸ್ಸಾರೆ ನಕ್ಕು ಹೋಗ್ತೀರಾ ಅನ್ನೋ ಭರವಸೆ ನೀಡ್ತೇವೆ.

ಇಲ್ಲಿ ಹಾಡುಗಳು ಇದಾವಾ..

ಈ ಸಿನಿಮಾದಲ್ಲಿ ಮಾಂಟೇಜಸ್ ಸಾಂಗ್ಸ್ ಇದೆ. 80% ಕಾಮಿಡಿ ಇದ್ರೆ 10-15% ಎಮೋಷನ್ಸ್ ಇದೆ. ಅಪ್ಪ ಮಗನ ಬಗ್ಗೆ ದೊಡ್ಡ ಎಮೋಷನ್ಸ್ ಇದೆ. ಕಥೆಗೆ ಏನ್ ಬೇಕೋ ಆ ಸಾಂಗ್ಸ್ ತಗೊಂಡ್ ಹೋಇಗಿದ್ದೀವಿ. ಬೆಂಗಳೂರಿ, ಮಂಗಳೂರಿ, ಉಡುಪಿ ಭಾಗದಲ್ಲಿ ಶೂಟ್ ಮಾಡಲಾಗಿದೆ. ಗೆದ್ದ ಶಾರ್ಟ್ ಮೂವಿ ಹೆಸರಲ್ಲೇ ಸಿನಿಮಾ

ಪ್ಯಾನ್ ಇಂಡಿಯಾ ನಿರ್ದೇಶಕ ಮತ್ತು ನಿರ್ಮಾಪಕ ಆರ್.ಚಂದ್ರು ಯಾವಾಗಲೂ ಹೊಸ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಅದೇ ರೀತಿ ಮನಸಾಗಿದೆ ಮತ್ತು ಮಂಡ್ಯಹೈದ ಚಿತ್ರಗಳ ಖ್ಯಾತಿಯ ಅಭಯ್ ಚಂದ್ರು ಹುಟ್ಟು ಹಬ್ಬದ ಪ್ರಯುಕ್ತ, ಅವರು ಅಭಿನಯಿಸುತ್ತಿರುವ ಮೂರನೇ ಸಿನಿಮಾ ವೀರಂ ವಿರೋಧಂ ಚಿತ್ರದ ಶೀರ್ಷಿಕೆ ಮತ್ತು ಫಸ್ಟ್ ಲುಕ್ ಅನಾವರಣಗೊಳಿಸಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಆರ್.ಚಂದ್ರು, ನೀವು ಹೀರೋ ಮೆಟಿರಿಯಲ್. ನಿಮ್ಮಂತವರು ಚಿತ್ರರಂಗಕ್ಕೆ ಅವಶ್ಯಕವಾಗಿದೆ. ಟೈಟಲ್ ಚನ್ನಾಗಿದೆ. ಅಪ್ಪ-ಮಗ ಕಲಾ ಸೇವೆಯಲ್ಲಿ ತೊಡಗಿಕೊಂಡಿರುವುದು ಸಂತಸ ತಂದಿದೆ. ಬಿಡುಗಡೆ ಸಮಯದಲ್ಲಿ ಮಾರ್ಕೆಟಿಂಗ್ ಮಾಡಲು ನನ್ನಿಂದ ಸಲಹೆ ಬೇಕಾದಲ್ಲಿ ದಯವಿಟ್ಟು ಬನ್ನಿರೆಂದು ಹೇಳಿದರು. ನಂತರ ಅಭಯ್ ಚಂದ್ರು ತಂಡದೊಂದಿಗೆ ಅನಾಥಶ್ರಮಕ್ಕೆ ತೆರಳಿ ಫುಡ್ ಕಿಟ್ ವಿತರಣೆ ಮಾಡಿದರು.

ತೇಜಸ್ ಕ್ರಿಯಶನ್ಸ್ ಅಡಿಯಲ್ಲಿ ಐದು ಚಿತ್ರಗಳನ್ನು ನಿರ್ಮಾಣ ಮಾಡಿರುವ ಎಸ್. ಚಂದ್ರಶೇಖರ್, ಹೊಸ ಅನುಭವ ಎನ್ನುವಂತೆ ವೀರಂ ವಿರೋಧಂ ಸಿನಿಮಾಕ್ಕೆ ಬಂಡವಾಳ

ವೀರಂ ವಿರೋಧಂಗೆ ಆರ್.ಚಂದ್ರು ಸಾಥ್

ಹೂಡುವ ಜತೆಗೆ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಇವರು ಹೇಳುವಂತೆ, ಇದೊಂದು ಸೆಸ್ಪೆನ್ಸ್, ಥ್ರಿಲ್ಲರ್ ಹಾಗೂ ಮಿಸ್ಟರಿ ಅಂಶಗಳು ಇರುವುದರಿಂದ ಚಿತ್ರದ ಸಾರಾಂಶವನ್ನು ಗೌಪ್ಯವಾಗಿಡಲಾಗಿದೆ. ಅಭಯ್ ಚಂದ್ರು ಬರ್ತ್‌ಡೇ ಸಲುವಾಗಿ ಆರ್.ಚಂದ್ರು ಅವರು ಫಸ್ಟ್ ಲುಕ್ ಹೊರತಂದು ವಿಶ್ ಮಾಡಿರುವುದು ನಮಗೆ ಶಕ್ತಿ ಬಂದಿದೆ. ಮಿಕ್ಕಂತೆ ನಾಯಕಿ, ತಾರಾಗಣದ ವಿವರವನ್ನು ಮುಹೂರ್ತ ದಿನದಂದು ನೀಡುವುದಾಗಿ ಕೋರಿಕೊಂಡರು.

ಖಡಕ್ ಇನ್ಸ್‌ಪೆಕ್ಟರ್ ಆಗಿ ಗನ್ ಹಿಡಿದು ಅಪರಾಧಿಗಳ ಮೇಲೆ ಗುರಿ ಮಾಡುತ್ತಿರುವ ಮಾಸ್ ಪೋಸ್ಟರ್ ಗಮನ ಸೆಳೆದಿದೆ. ಸಂಗೀತ ಸಂತೋಷ್ ಜೋಶ್ವಾ, ಛಾಯಾಗ್ರಹಣ ಶಂಕರ್, ಸಂಕಲನ ವೆಂಕಟ್‌ಗೌಡ.ಎಸ್, ಸಾಹಸ ಡಾ.ರವಿವರ್ಮ-ಡಾ.ಥ್ರಿಲ್ಲರ್ ಮಂಜು, ನೃತ್ಯ ಕಂಬಿರಾಜು ಅವರದಾಗಿದೆ.

ಡಿಯರ್ ಹಸ್ಬೆಂಡ್ ಟೈಟಲ್ ಬಿಡುಗಡೆ

ಡಿಯರ್ ಹಸ್ಬೆಂಡ್ ಚಿತ್ರ ಜೆ9 ಕಮ್ಯುನಿಕೇಶನ್ ಅ ಯಂಡ್ ಮೀಡಿಯಾ ಹಾಗೂ ನಿರಂತರ ಪ್ರೊಡಕ್ಷನ್ಸ್ ಸಂಸ್ಥೆಯ ಸಹಯೋಗದಲ್ಲಿ ನಿರ್ಮಾಣವಾಗುತ್ತಿದೆ. ಗುರುರಾಜ ಕುಲಕರ್ಣಿ (ನಾಡಗೌಡ) ನಿರ್ದೇಶನದ ಈ ಚಿತ್ರದ ಶೀರ್ಷಿಕೆ ಅನಾವರಣ ಮತ್ತು ಟೈಟಲ್ ಟೀಸರ್ ಬಿಡುಗಡೆ ಸಮಾರಂಭ ಬೆಂಗಳೂರಿನ ಫಿನಿಕ್ಸ್ ಮಾಲ್ ಆಫ್ ಏಷ್ಯಾ ದಲ್ಲಿ ಅದ್ದೂರಿಯಾಗಿ ನೆರವೇರಿತು.

ನಟರಾದ ಸೂರಜ್ ಗೌಡ, ಶರಣ್ಯಾ ಶೆಟ್ಟಿ ಹಾಗೂ ಪ್ರವೀಣ್ ಮುಖ್ಯಭೂಮಿಕೆಯಲ್ಲಿ ಅಭಿನಯಿಸುತ್ತಿರುವ ಡಿಯರ್ ಹಸ್ಬೆಂಡ್ ಚಿತ್ರ ಸಸ್ಪೆನ್ಸ್ ಕಂ ಥ್ರಿಲ್ಲರ್ ಶೈಲಿಯಲ್ಲಿ ಮೂಡಿಬರುತ್ತಿದೆ. ನಟ ಕಿಚ್ಚ ಸುದೀಪ್, ಡಿಯರ್ ಹಸ್ಬೆಂಡ್ ಚಿತ್ರದ ಶೀರ್ಷಿಕೆ ಮತ್ತು ಟೈಟಲ್ ಟೀಸರ್ ಬಿಡುಗಡೆ ಮಾಡಿ ಶುಭ ಹಾರೈಸಿದರು.

ನಟರಾದ ಕುಮಾರ್ ಬಂಗಾರಪ್ಪ, ಪ್ರವೀಣ್ ತೇಜ್, ಸಂಗೀತ ನಿರ್ದೇಶಕ ವಿ. ಹರಿಕೃಷ್ಣ, ನಿರ್ದೇಶಕರಾದ ಶಶಾಂಕ್, ಎ. ಪಿ. ಅರ್ಜುನ್, ಕ್ರಿಕೆಟಿಗರಾದ ವೈಶಾಕ್ ವಿಜಯಕುಮಾರ್, ರಿತೇಶ್ ಸೇರಿದಂತೆ ಅನೇಕ ಗಣ್ಯರು ಡಿಯರ್ ಹಸ್ಬೆಂಡ್ ಟೈಟಲ್ ಟೀಸರ್ ಬಿಡುಗಡೆ ಸಮಾರಂಭದಲ್ಲಿ ಹಾಜರಿದ್ದರು.

ನಟ ಕಿಚ್ಚ ಸುದೀಪ್ ಮಾತನಾಡಿ ನಾವು ಹೊಸಬರಾಗಿ ಬಂದಾಗ, ಅನೇಕ ಹಿರಿಯರು ನಮಗೆ ಪ್ರೋತ್ಸಾಹಿಸಿ, ಬೆನ್ನು ತಟ್ಟಿದ್ದರು. ಅದೇ ಕೆಲಸವನ್ನು ನಾವು ಈಗ ಹೊಸಬರಿಗೆ ಮಾಡುತ್ತಿದ್ದೇವೆ. ಅಂತಿಮವಾಗಿ ಕನ್ನಡ ಚಿತ್ರರಂಗ ಬೆಳೆಯಬೇಕು. ಇಡೀ ಚಿತ್ರತಂಡಕ್ಕೆ ಶುಭವಾಗಲಿ. ಹೊಸಬರ ತಂಡದ ಮೂಲಕ ಖಂಡಿತವಾಗಿಯೂ ಹೊಸಥರದ ಸಿನಿಮಾ ಬರಲಿದೆ ಎಂದರು.

ಡಿಯರ್ ಹಸ್ಬೆಂಡ್ ಚಿತ್ರದ ಬಹುತೇಕ ಪ್ರೀ-ಪ್ರೊಡಕ್ಷನ್ ಕೆಲಸಗಳು ಪೂರ್ಣಗೊಂಡಿದ್ದು, ಇದೇ ತಿಂಗಳಾಂತ್ಯದಿಂದ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ. ಬೆಂಗಳೂರು, ಗೋವಾ ಮತ್ತಿತರ ಕಡೆಗಳಲ್ಲಿ ಚಿತ್ರದ ಚಿತ್ರೀಕರಣ ನಡೆಸುವ ಯೋಜನೆಯಲ್ಲಿದೆ ಚಿತ್ರತಂಡ. ಡಿಯರ್ ಹಸ್ಬೆಂಡ್ ಚಿತ್ರದ ಟೈಟಲ್ ಟೀಸರ್ ಗೆ ಸಚಿನ್ ಬಸ್ರೂರು ಹಿನ್ನೆಲೆ ಸಂಗೀತವಿದ್ದು, ಚಿತ್ರದ ಹಾಡುಗಳಿಗೆ ವೀರ್ ಸಮರ್ಥ್ ಸಂಗೀತ ಸಂಯೋಜಿಸುತ್ತಿದ್ದಾರೆ. ಪ್ರಮೋದ ಮರವಂತೆ ಸಾಹಿತ್ಯ, ರಘು ನಿಡುವಳ್ಳಿ ಸಂಭಾಷಣೆ ಚಿತ್ರಕ್ಕಿದೆ. ಹರ್ಷ ಕುಮಾರ್ ಗೌಡ ಛಾಯಾಗ್ರಹಣ, ಬಿ. ಎಸ್. ಕೆಂಪರಾಜ್ ಚಿತ್ರಕ್ಕೆ ಸಂಕಲನ ಕಾರ್ಯ ನಿರ್ವಹಿಸುತ್ತಿದ್ದಾರೆ. ಸದ್ಯ ಟೈಟಲ್ ಟೀಸರ್ ಬಿಡುಗಡೆ ಮೂಲಕ ಭರದಿಂದ ಚಿತ್ರದ ಕೆಲಸಗಳಿಗೆ ಚಾಲನೆ ನೀಡಿರುವ ಚಿತ್ರತಂಡ, ಇದೇ ವರ್ಷಾಂತ್ಯಕ್ಕೆ ಡಿಯರ್ ಹಸ್ಬೆಂಡ್ ಚಿತ್ರವನ್ನು ಪ್ರೇಕ್ಷಕರ ಮುಂದೆ ತರುವ ಯೋಜನೆ ಹಾಕಿಕೊಂಡಿದೆ.

ತುಂಬ ಒಳ್ಳೆಯ ಕಥೆ ಡಿಯರ್ ಹಸ್ಬೆಂಡ್ ಸಿನಿಮಾದ ಮೂಲಕ ತೆರೆಮೇಲೆ ಬರುತ್ತಿದೆ. ನನಗೆ ಇದೊಂದು ಹೊಸತರದ ಪಾತ್ರ. ಚಿತ್ರದ ಸ್ಕ್ರಿಪ್ಟ್ ಬಹಳ ಚೆನ್ನಾಗಿದೆ ಅಂದರು ನಾಯಕ ಸೂರಜ್. ಇದೊಂದು ಇಂದಿನ ಜನರೇಶನ್ಗೆ ಕನೆಕ್ಟ್ ಆಗುವಂಥ ಯೂತ್ ಫುಲ್ ಸಬ್ಜೆಕ್ಟ್ ಸಿನಿಮಾ. ಇದರಲ್ಲಿ ನಾನು ವಾಸಂತಿ ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಇಂಥದ್ದೊಂದು ವಿಭಿನ್ನ ಕಥೆ ಕಲಾವಿದರಿಗೆ ಸಿಗೋದು ಬಹಳ ಅಪರೂಪ. ನಿರ್ದೇಶಕ ಗುರುರಾಜ ಕುಲಕರ್ಣಿ (ನಾಡಗೌಡ) ತುಂಬ ಒಳ್ಳೆಯ ಕಥೆಗೆ ನನ್ನನ್ನು ನಾಯಕಿಯಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಸಿನಿಮಾದ ಮೇಲೆ ಸಾಕಷ್ಟು ನಿರೀಕ್ಷೆಯಿದೆಎನ್ನುವುದು ನಾಯಕಿ ಶರಣ್ಯಾ ಶೆಟ್ಟಿ, ಮಾತು. ಇದೊಂದು ರೊಮ್ಯಾಂಟಿಕ್-ಥ್ರಿಲ್ಲರ್ ಕಥಾಹಂದರದ ಸಿನಿಮಾ. ನಿರ್ದೇಶಕ ಗುರುರಾಜ ಕುಲಕರ್ಣಿ ಯಾವಾಗಲೂ ಸಿನಿಮಾದ ಬಗ್ಗೆಯೇ ಯೋಚಿಸುವ ವ್ಯಕ್ತಿ. ಸಿನಿಮಾದಲ್ಲಿ ಸಾಕಷ್ಟು ಅನುಭವವಿರುವಂಥವರು. ಅವರು ಹೇಳಿದ ಕಥೆ ಇಷ್ಟವಾಗಿದ್ದರಿಂದ, ಅದನ್ನು ತೆರೆಮೇಲೆ ತರಲು ಮುಂದಾಗಿದ್ದೇವೆ. ಇಂದಿನ ಪ್ರೇಕ್ಷಕರಿಗೆ ಇಷ್ಟವಾಗುವಂತೆ, ಈ ಸಿನಿಮಾ ತೆರೆಗೆ ಬರುತ್ತಿದೆ. ಎಲ್ಲರ ಸಹಕಾರದಿಂದ ಸಿನಿಮಾ ತುಂಬ ಚೆನ್ನಾಗಿ ಬರುತ್ತದೆ ಎಂಬ ವಿಶ್ವಾಸವಿದೆ ಎಂದು ನಿರ್ಮಾಪಕಡಾ. ನಿರಂತರ ಗಣೇಶ್ ಅಭಿಪ್ರಾಯ ಪಟ್ಟರು.

ಸುಮಾರು ಒಂದೂವರೆ ವರ್ಷಗಳಿಂದ ನಾವೆಲ್ಲರೂ ಸೇರಿ ಕಾಣುತ್ತಿದ್ದ ಕನಸು, ಈಗ ಸಿನಿಮಾವಾಗಿ ತೆರೆಗೆ ಬರುತ್ತಿದೆ. ಕಿಚ್ಚ ಸುದೀಪ್ ಅವರ ಸಹಕಾರ ನಮ್ಮ ಚಿತ್ರಕ್ಕೆ ಸಿಕ್ಕಿರುವುದು ತುಂಬ ಖುಷಿಯಾಗಿದೆ. ಇಂದಿನ ಯುವಕರು ಇಷ್ಟಪಡುವಂಥ ಕಥೆಯೊಂದನ್ನು ಈ ಸಿನಿಮಾದಲ್ಲಿ ಪ್ರೇಕ್ಷಕರ ಮುಂದೆ ತರುತ್ತಿದ್ದೇವೆ. ನೋಡುಗರಿಗೆ ಈ ಸಿನಿಮಾ ಖಂಡಿತವಾಗಿಯೂ ಹೊಸಥರದ ಅನುಭವ ನೀಡಲಿದೆ ಎಂಬ ವಿಶ್ವಾಸವಿದೆ. ಮುಂದಿನ ದಿನಗಳಲ್ಲಿ ಸಿನಿಮಾದ ಬಗ್ಗೆ ಇನ್ನುಳಿದ ಮಾಹಿತಿ ನೀಡಲಿದ್ದೇವೆ ಎಂದು ಗುರುರಾಜ ಕುಲಕರ್ಣಿ (ನಾಡಗೌಡ), ನಿರ್ದೇಶಕ ತಿಳಿಸಿದರು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,